ಮಾರ್ಚ್ 23, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1977

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಹಣಕಾಸಿನ ವಿಚಾರಕ್ಕೆ ಜೆಸಿಬಿ



# ಮಾಲೀಕನ ಕೊಂದ ಡ್ರೈವರ್!



## ದೃಶ್ಯಂ ಸಿನಿಮಾ ಸ್ಟೈಲ್‌ನಲ್ಲಿ ಮಹಿಳೆ ಕೊಲೆ!



## ಕೈ ನಾಯಕರು ಎಚ್ಚೆತ್ತುಕೊಳ್ಳದಿದ್ದರೆ ಸಂಕಷ್ಟ ತಪ್ಪಿದಲ್ಲ!



## ಹಳಿ ತಪ್ಪಿದ ಪ್ರೇಮ ಪ್ರಕರಣ ಮದುವೆಯಲ್ಲಿ ಸುಖಾಂತ್ಯ

## ನ್ಯಾಯಾಧೀಶರ ಮನೆಯಲ್ಲೇ ಕಳ್ಳತನ ಮಾಡಿದ ಖತರ್‌ನಾಕ್!




ತೆಂಗಿನ ಮರದಲ್ಲಿ ನೀರಾ ಕಟ್ಟುತ್ತಿರುವುದು


ಈಚಲು ಮರದಲ್ಲಿ ನೀರಾ ತೆಗೆಯುವುದು

# ಚನ್ನಪಟ್ಟಣದಲ್ಲ ನೀರಾ ಉತ್ಪಾದನೆಗೆ ಆದ್ಯತೆ ನೀಡುವತ್ತ ಸೈನಿಕ!

ರಾಮನಗರ

✍ ಶಾಂತರಾಜು ಜಿ. ಕಲ್ಲಹಳ್ಳಿ

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ತೆಂಗು ಬೆಳೆಗಾರರಿಗೆ ಹೆಚ್ಚಿನ ಆದಾಯ ತಂದುಕೊಡುವ ನಿಟ್ಟಿನಲ್ಲಿ ಕ್ಷೇತ್ರದಲ್ಲಿ ಶತಾಯಗತಾಯ ನೀರಾ ಉತ್ಪಾದನೆಗೆ ಆದ್ಯತೆ ನೀಡಲು ಮುಂದಾಗಿರುವ ಶಾಸಕ ಸಿ.ಪಿ. ಯೋಗೇಶ್ವರ್‌ರವರು ಇತ್ತೀಚೆಗೆ ಕೇರಳದ ತ್ರಿಶೂರಿನ ನೀರಾ ಉತ್ಪಾದನೆಗೆ ಕಂಪನಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಚನ್ನಪಟ್ಟಣದಲ್ಲಿ ತೆಂಗು ಬೆಳೆಗಾರರಿಗೆ ನೀರಾ ಉಪ ಉತ್ಪನ್ನಗಳನ್ನು ತಯಾರಿಸಲು ಪ್ರೋತ್ಸಾಹ ನೀಡಲು ಚಿಂತನೆ ಮಾಡಿರುವ ಸಿ.ಪಿ. ಯೋಗೇಶ್ವರ್‌ರವರು ಈ ಯೋಜನೆಯನ್ನು ಕಾರ್ಯಗತಕ್ಕೆ ತರುವ ನಿಟ್ಟಿನಲ್ಲಿ ಹಲವಾರು ನೀರಾ ಉತ್ಪಾದನಾ ಕಂಪನಿಗಳಿಗೆ ಭೇಟಿ ನೀಡಿ ಅಲ್ಲಿ ಅಳವಡಿಸಿಕೊಂಡಿರುವ ಯಂತ್ರೋಪಕರಣಗಳು ಹಾಗೂ ಅದರ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ಕಲೆ ಹಾಕಲು ಮುಂದಾಗಿದ್ದು, ಇದೇ ನಿಟ್ಟಿನಲ್ಲಿ ಕಳೆದ ವಾರವಷ್ಟೇ ಕುಣಿಗಲ್‌ನ ಹುಲವಾನದಲ್ಲಿನ ನೀರಾ ಉತ್ಪಾದನಾ ಕಂಪನಿಗೆ ತಾಲ್ಲೂಕಿನ 100 ತೆಂಗು ಬೆಳೆಗಾರರೊಂದಿಗೆ ನೀರಾ ಅಧ್ಯಯನ ಪ್ರವಾಸ ಮಾಡಿ ಅಲ್ಲಿನ ಕಾರ್ಯಚಟುವಟಿಕೆ ಮತ್ತು ನೀರಾ ಉತ್ಪಾದನೆ ಹಾಗೂ ನೀರಾ ಉಪ ಉತ್ಪನ್ನಗಳ ತಯಾರಿಕೆ ಬಗ್ಗೆ ಸಾಕಷ್ಟು ಮಾಹಿತಿ ಪಡೆದಿದ್ದರು. ಇದೀಗ ನೀರಾ ಉತ್ಪಾದನೆಯಲ್ಲಿ ಸಾಕಷ್ಟು ಹೆಸರು ಮಾಡಿರುವ ಕೇರಳದ ತ್ರಿಶೂರಿನ ಸಕ್ತನ್ ನೀರಾ ಉತ್ಪಾದನಾ ಕಂಪನಿಗೆ ಭೇಟಿ ನೀಡಿದ್ದು, ಇದೆಲ್ಲವೂ ಕ್ಷೇತ್ರದಲ್ಲಿ ಚನ್ನಪಟ್ಟಣದ ಜನತೆಯ ಆರ್ಥಿಕತೆ ಹೆಚ್ಚಿಸುವ ಸಲುವಾಗಿ ನೀರಾ ಉತ್ಪಾದನೆ ಮತ್ತು ಉಪ ಉತ್ಪನ್ನಗಳ ತಯಾರಿಕೆಗೆ ಕಂಪನಿ ನಿರ್ಮಾಣ ಮಾಡುವ ಸಿ.ಪಿ. ಯೋಗೇಶ್ವರ್‌ರ ಗಟ್ಟಿ ನಿಲುವಾಗಿದೆ. ಈ ಕ್ಷೇತ್ರದಲ್ಲಿ ಕಳೆದ ಆರು ವರ್ಷಗಳಿಂದ ಶಾಸಕರಿದ್ದವರು ಒಂದು ದಿನವಾದರೂ ರೈತರ ಸಭೆ ನಡೆಸಿ ಅವರ ಸಂಕಷ್ಟಗಳನ್ನು ಕೇಳಲಿಲ್ಲ. ಜೊತೆಗೆ ಕ್ಷೇತ್ರದಲ್ಲಿ ಯಾವ ಬೆಳೆ ಹೆಚ್ಚಾಗಿ ಉತ್ಪಾದನೆ ಆಗುತ್ತದೆ, ಅದಕ್ಕೆ ಏನು ಪ್ರೋತ್ಸಾಹ ನೀಡಬಹುದು ಎಂಬ ಚಿಂತನೆಯನ್ನು ಮಾಡಿರಲಿಲ್ಲ. ಆದರೆ ಸಿ.ಪಿ. ಯೋಗೇಶ್ವರ್‌ಟವರು ಈ ಕ್ಷೇತ್ರದ ಶಾಸಕರಾದ ಬಳಿಕ ಚನ್ನಪಟ್ಟಣ ತಾಲ್ಲೂಕಿನ ರೈತರ ಸಮಸ್ಯೆಗಳನ್ನು ಆಲಿಸುತ್ತಿದ್ದು, ಅದರಲ್ಲೂ ತಾಲ್ಲೂಕಿನ ನೀರಾ ಅಭಿವೃದ್ಧಿಯಿಂದ ತೆಂಗು ಬೆಳೆ ಹೆಚ್ಚಿದ್ದರೂ ಲಾಭ ಕಾಣದ ಬಗ್ಗೆ ಹೆಚ್ಚು ಗಮನ ನೀಡಿರುವ ಸಿ.ಪಿ. ಯೋಗೇಶ್ವರ್‌ರವರು ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿರವರ ಜನ್ಮದಿನದಂದು ನೀರಾ ಉತ್ಪಾದನೆ ಅರಿವು ಕಾರ್ಯಾಗಾರದಲ್ಲಿ ತಾಲ್ಲೂಕಿನ ನೀರಾ ಉತ್ಪಾದನೆಗೆ ಹೆಚ್ಚಿನ ಪ್ರೋತ್ಸಾಹ ನೀಡಿ ತೆಂಗು ಬೆಳೆಗಾರರಿಗೆ ಹೆಚ್ಚಿನ ಆದಾಯ ತಂದುಕೊಡುವ ನಿಟ್ಟಿನಲ್ಲಿ ಶ್ರಮಿಸುವ ಭರವಸೆ ನೀಡಿದ್ದರು.



ಮರದಿಂದ ಇಳಿಸಿದ ನೀರಾ

ನೀರಾ ಉತ್ಪಾದನೆಗೆ ಅನುಮತಿ ನೀಡಿ ಒಂಬತ್ತು ವರ್ಷವಾದರೂ ತಾಲ್ಲೂಕಿನಲ್ಲಿ ಈ ಬಗ್ಗೆ ಯಾರೊಬ್ಬರೂ ಮಾತನಾಡಿಲ್ಲ ಎಂಬಟೀಕೆಗಳು ಕೆಲವರನ್ನು ಕೆರಳಿಸಿದ್ದವು. ಆದರೆ ಸಿ.ಪಿ. ಯೋಗೇಶ್ವರ್‌ರವರು ನೀರಾ ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡುವ ಭರವಸೆಗಳನ್ನು ನೀಡಿ ಅದನ್ನು ಈಡೇರಿಸುವ ನಿಟ್ಟಿನಲ್ಲಿ ಬದ್ಧವಾಗಿ ಓಡಾಡುತ್ತಿದ್ದು, ಈ ನಿಟ್ಟಿನಲ್ಲಿ ನೀರಾ ಉತ್ಪಾದನಾ ಘಟಕಗಳ ಕಡೆ ಸುತ್ತಾಡುತ್ತಿದ್ದಾರೆ.


ಮರದಲ್ಲಿ ಅಳವಡಿಸಿರುವ ಯಂತ್ರ

### ಕೇರಳದ ಮಾದರಿಯಲ್ಲಿ ನೀರಾ ಅಳವಡಿಕೆ ಚಿಂತನೆ

ಕೇರಳದ ತೆಂಗು ಬೆಳೆಯಿಂದ ಸಾಕಷ್ಟು ಉಪ ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ಅಲ್ಲದೆ ತೆಂಗಿನ ಎಣ್ಣೆಯನ್ನೇ ಅಡುಗೆಗೆ ಮತ್ತು ತಿಂಡಿ ತಯಾರಿಕೆಗೆ ಬಳಸುತ್ತಾರೆ. ಇದಕ್ಕೆ ಕೇರಳದ ಸರ್ಕಾರವು ಅಲ್ಲಿನ ನೀರಾ ಉತ್ಪಾದನಾ ರೈತ ಸಹಕಾರ ಕಂಪನಿಗಳಿಗೆ ಸೂಕ್ತ ಅಗತ್ಯ ಯಂತ್ರೋಪಕರಣಗಳನ್ನು ಸಬ್ಸಿಡಿಯಾಗಿ ನೀಡುತ್ತಿದೆ. ನಮ್ಮ ರಾಜ್ಯದಲ್ಲಿ ತೆಂಗಿನ ಮರದಿಂದ ನೀರಾ ಇಳಿಸಲು ಮಣ್ಣಿನ ಮಡಿಕೆ, ಊಜಿಗಳನ್ನು ಬಳಕೆ ಮಾಡುತ್ತಾರೆ. ಜೊತೆಗೆ ಅದನ್ನು ಇಳಿಸಿ ಮರ ಹತ್ತಬೇಕಿದೆ. ಆದರೆ ಕೇರಳದಲ್ಲಿ ತೆಂಗಿನ ಮರದಿಂದ ನೀರಾ ಇಳಿಸಲು ಸಹ ಆಧುನಿಕ ಯಂತ್ರೋಪಕರಣಗಳನ್ನು ಬಳಸುತ್ತಿದ್ದು, ತೆಂಗಿನ ಮರಕ್ಕೆ ಇದನ್ನು ಜೋಡಣೆ ಮಾಡಿ ಪೈಪ್ ಮೂಲಕ ಅದು ನೆಲದಲ್ಲಿ ಇಟ್ಟ ನೀರಾ ಸಂಗ್ರಹ ಪಾತ್ರೆಗೆ ಬರುವಂತೆ ಮಾಡುತ್ತಿದ್ದು, ಇದರಿಂದ ರೈತರು ಆಗಾಗ ಮರ ಹತ್ತುವ ಅವಶ್ಯಕತೆಯೂ ಇರುವುದಿಲ್ಲ. ಹಲವಾರು ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಕೇರಳದ ತ್ರಿಶೂರಿನಲ್ಲಿ ಸಕ್ತನ್ ನೀರಾ ಉತ್ಪಾದನಾ ರೈತ ಸಹಕಾರ ಕಂಪನಿಗೆ ಭೇಟಿ ನೀಡಿದ ಸಿ.ಪಿ. ಯೋಗೇಶ್ವರ್ ಅಲ್ಲಿನ ಯಂತ್ರೋಪಕರಣಗಳನ್ನು ಪರಿಶೀಲನೆ ನಡೆಸಿ ಕಂಪನಿಯ ಚೇರ್ಮನ್ ವಿನಯನ್ ಹಾಗೂ ಸಿಬ್ಬಂದಿ ವರ್ಗದವರಿಂದ ನೀರಾ ಉತ್ಪಾದನೆ, ಮಾರಾಟ, ಅದರ ಉಪಯೋಗ ಹಾಗೂ ಉಪ ಉತ್ಪನ್ನಗಳ ಬಗ್ಗೆ ಮಾಹಿತಿ ಪಡೆದುಕೊಂಡು, ಇಲ್ಲಿನ ನೀರಾ ಉತ್ಪಾದನೆಯ ಘಟಕ ತೆರೆಯಲು ಚಿಂತನೆ ಮಾಡಿದ್ದಾರೆ. ನೀರಾದಿಂದ ಹಲವಾರು ಉತ್ಪನ್ನಗಳನ್ನು ಅಂದರೆ ಸಕ್ಕರೆ, ಬೆಲ್ಲ, ಜೇನು, ಪೇಡ, ಸಾಸ್, ಮಿಠಾಯಿ, ಹೀಗೆ ನೂರಾರು ಉಪ ಉತ್ಪನ್ನಗಳನ್ನು ತಯಾರಿಸಬಹುದಾಗಿದ್ದು, ಇದಕ್ಕೆ ಸೂಕ್ತ ಮಾರುಕಟ್ಟೆಯನ್ನು ಕಲ್ಪಿಸುವುದು ಸಹ ಅಷ್ಟೇ ಪ್ರಮುಖವಾಗಿದೆ.


ಚನ್ನಪಟ್ಟಣ ಶಾಸಕ ಸಿ.ಪಿ. ಯೋಗೇಶ್ವರ್

### ಶಾಶ್ವತವಾಗಿ ಮಾದರಿ ಯೋಜನೆಯಾಗುವುದೇ...?

ಸಿ.ಪಿ. ಯೋಗೇಶ್ವರ್‌ರವರು ಈ ಹಿಂದೆ ಈ ಕ್ಷೇತ್ರದ ಶಾಸಕರಾಗಿದ್ದ ಸಂದರ್ಭದಲ್ಲಿ ಚನ್ನಪಟ್ಟಣ ಕ್ಷೇತ್ರಕ್ಕೆ ಹಲವಾರು ಶಾಶ್ವತ ಯೋಜನೆಗಳನ್ನು ನೀಡಿದ್ದಾರೆ. ಅದರಲ್ಲೂ ಬರದ ನಡುವೆ ಕಣ್ವ-ಶಿಂಷಾ ಕುಡಿ ನೀರು ಯೋಜನೆಯ ಮೂಲಕ ತಾಲ್ಲೂಕಿನ ಕೆರೆಗಳಿಗೆ ನೀರನ್ನು ತುಂಬಿಸಿ ಬಾಗಿನ ಬಿಡುವ ಕಾರ್ಯಕ್ಕೆ ರಾಜ್ಯದ ಮಂತ್ರಿಗಳು, ರಾಜಕಾರಣಿಗಳು, ಸಾಹಿತಿಗಳು, ಚಿಂತಕರು, ಮಠಾಧೀಶರನ್ನು ಕರೆಸಿ ಬಾಗಿನ ಬಿಟ್ಟಿದ್ದು ಇತಿಹಾಸ. ಆ ಸಂದರ್ಭದಲ್ಲಿ ಹಲವಾರು ನೀರಾವರಿ ಯೋಜನೆಗಳನ್ನು ಕಾರ್ಯಗತಕ್ಕೆ ತಂದು ಭಗೀರಥ ಎಂದೆನಿಸಿಕೊಂಡಿದ್ದರು. ಇದೇ ರೀತಿ ಈಗ ನೀರಾ ಉತ್ಪಾದನೆಗೆ ಸಹ ಶಾಶ್ವತ ಯೋಜನೆ ರೂಪಿಸಿ ಇದು ರಾಜ್ಯದಲ್ಲಿ ಮಾದರಿಯಾಗುವ ನಿಟ್ಟಿನಲ್ಲಿ ಸಿ.ಪಿ. ಯೋಗೇಶ್ವರ್‌ರವರು ಮಹತ್ವದ ಹೆಜ್ಜೆ ಇಟ್ಟಿರುವಂತೆ ಕಾಣುತ್ತಿದೆ ಎಂಬುದು ಚನ್ನಪಟ್ಟಣದ ತಾಲ್ಲೂಕಿನ ಜನತೆಯ ಮನೆ ಮಾತಾಗಿದೆ. ವಿಶೇಷತೆ ಏನೆಂದರೆ ಸಿ.ಪಿ. ಯೋಗೇಶ್ವರ್‌ರವರು ರಾಜಕಾರಣಕ್ಕೂ ಬರುವ ಬೆಳೆಗಾರರ ಕಷ್ಟವನ್ನು ಅರಿತುಕೊಂಡು ಚನ್ನಪಟ್ಟಣದ ಜನತೆ ನೀರಾವರಿ ಯೋಜನೆಯನ್ನು ಬಳಸಿಕೊಂಡು ತೆಂಗು ಬೆಳೆಗಾರರು ಹೆಚ್ಚಿನ ಆದಾಯ ಪಡೆಯುವ ಮೂಲಕ ನೀರಾ ಉತ್ಪಾದನೆಗೆ ಅವಕಾಶ ಕಲ್ಪಿಸಲು ಮುಂದಾಗಿದ್ದು ಇದನ್ನು ಕಾರ್ಯರೂಪಕ್ಕೆ ತಂದೇ ತರುವೆ ಎಂಬ ಛಲದಲ್ಲಿ ಓಡಾಡುತ್ತಿದ್ದಾರೆ.

### ಕ್ಷೇತ್ರದಲ್ಲಿ ಎಳೆನೀರು ಮಂಡಿಯಂತಾಗದಿರಲಿ...

ಚನ್ನಪಟ್ಟಣ ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳು ಅಭಿವೃದ್ಧಿಯಾಗಿದ್ದು, ಸತ್ತೇಗಾಲ ಯೋಜನೆಯಿಂದ ಮುಂದೆ ಶಾಶ್ವತ ನೀರಾವರಿ ಆಗುತ್ತದೆ. ಈ ನಿಟ್ಟಿನಲ್ಲಿ ತೆಂಗು ಬೆಳೆಗಾರರಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ನೀರಾ ಉತ್ಪಾದನೆಗೆ ಆದ್ಯತೆ ನೀಡಲು ಮುಂದಾಗಿರುವ ಶಾಸಕ ಸಿ.ಪಿ. ಯೋಗೇಶ್ವರ್‌ರವರ ನಡೆ ಮೆಚ್ಚುಗೆಗೆ ಪಾತ್ರವಾಗಿದೆ. ಆದರೆ ಇದು ಈ ಹಿಂದೆ ಮಾಡಿದ ಎಳೆನೀರು ಮಂಡಿ ಯೋಜನೆಯಂತೆ ಆಗದಿರಲಿ ಎಂಬುದು ರೈತರ ಸಲಹೆಯಾಗಿದೆ. ಕಾರಣ ಯೋಗೇಶ್ವರ್‌ರವರು 2017ರಲ್ಲಿ ತಾಲ್ಲೂಕಿನ ತೆಂಗು ಬೆಳೆಗಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪಟ್ಟಣದ ಆರ್‌ಎಂಸಿ ಯಾರ್ಡ್‌ನಲ್ಲಿ ಎಳೆನೀರು ಮಂಡಿಯನ್ನು ತೆರೆದಿದ್ದರು. ಮದ್ದೂರಿನ ಎಳೆನೀರು ಮಂಡಿಯಂತೆ ಈ ಕ್ಷೇತ್ರದ ಮಂಡಿಯನ್ನು ಅಭಿವೃದ್ಧಿ ಮಾಡಿ ಮಾರುಕಟ್ಟೆ ನಿರ್ಮಾಣ ಮಾಡುವ ಚಿಂತನೆಯಿತ್ತು. ಆದರೆ ತಾಲ್ಲೂಕಿನ ರೈತರು ಎಳೆನೀರು ಕೊಯ್ದು ಮಾರುಕಟ್ಟೆಗೆ ತರುವಲ್ಲಿ ಸೋತಿದ್ದರಿಂದ ಮದ್ದೂರಿನ ಎಳೆನೀರು ಮಂಡಿಯ ಮುಂದೆ ಚನ್ನಪಟ್ಟಣದ ಮಂಡಿ ಬೆಳೆಯಲೇ ಇಲ್ಲ. ಈ ಕಾರಣದಿಂದ ಪಟ್ಟಣದ ಎಳೆನೀರು ಮಂಡಿ ಉತ್ಪಾದನೆಗೆ ಮಾತ್ರ ಸೀಮಿತವಾಗಿತ್ತು. ಅದರಂತೆ ನೀರಾ ಉತ್ಪಾದನೆ ಸಹ ಎಳೆನೀರು ಮಂಡಿಯಂತೆ ಆಗದೆ, ಇದಕ್ಕೆ ಸೂಕ್ತ ಮಾರುಕಟ್ಟೆ ಕಲ್ಪಿಸಿ, ಬಳಿಕ ನೀರಾ ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡಲು ಶಾಸಕರು ಮುಂದಾಗಬೇಕು ಎಂಬುದೇ ಪ್ರಗತಿಪರ ಚಿಂತಕರು ಹಾಗೂ ಚನ್ನಪಟ್ಟಣ ಕ್ಷೇತ್ರದ ತೆಂಗು ಬೆಳೆಗಾರರ ರೈತಾಪಿ ವರ್ಗದ ಜನತೆಯ ಚಿಂತನೆಯಾಗಿದೆ. ☯



ಕೇರಳದ ನೀರಾ ಉತ್ಪಾದನೆ ಕಂಪನಿ



ನೀರಾದಿಂದ ತಯಾರಿಸಬಹುದಾದ ಉಪ ಉತ್ಪನ್ನಗಳು


ನೀರಾ ಕಂಪನಿಯಲ್ಲಿ ವೀಕ್ಷಣೆ ಮಾಡುತ್ತಿರುವ ಯೋಗೇಶ್ವರ್

# ದೃಶ್ಯಂ ಸಿನಿಮಾ ಸ್ಟೈಲ್‌ನಲ್ಲಿ ಒಂಟಿ ಮಹಿಳೆ ಕೊಲೆ! ನಾಲ್ಕು ತಿಂಗಳ ಬಳಿಕ ರಹಸ್ಯ ಭೇದಿಸಿದ ಪೊಲೀಸರು!!

ನಾಲ್ಕು ತಿಂಗಳ ಹಿಂದೆ ನಾಪತ್ತೆಯಾಗಿದ್ದ ಒಂಟಿ ಮಹಿಳೆಯ ಕೊಲೆ ಪ್ರಕರಣವನ್ನು ಬೆಂಗಳೂರು ಪೊಲೀಸರು ಭೇದಿಸಿದ್ದಾರೆ. ಚಿನ್ನಾಭರಣಕ್ಕಾಗಿ ಆಕೆಯ ಪರಿಚಿತ ವ್ಯಕ್ತಿಯೇ ಕೊಲೆ ಮಾಡಿ, ಮೃತದೇಹವನ್ನು ವಿಲೇವಾರಿ ಮಾಡಿದ್ದ.

ನಾಲ್ಕು ತಿಂಗಳ ಹಿಂದೆ ಒಂಟಿ ಮಹಿಳೆ ನಾಪತ್ತೆ ಸಂಬಂಧ ದಾಖಲಾಗಿದ್ದ ಪ್ರಕರಣ ಭೇದಿಸಿರುವ ಕೊತ್ತನೂರು ಠಾಣೆ ಪೊಲೀಸರು, ಆ ಮಹಿಳೆಯನ್ನು ಕೊಲೆ ಮಾಡಿ ಸಿನಿಮಾ ಶೈಲಿನಲ್ಲಿ ಮೃತದೇಹವನ್ನು ವಿಲೇವಾರಿ ಮಾಡಿದ್ದ ಹಂತಕನನ್ನು ಬಂಧಿಸಿದ್ದಾರೆ.

ಕೊತ್ತನೂರಿನ ನಗರೇಶ್ವರ ನಾಗೇನಹಳ್ಳಿ ಕರ್ನಾಟಕಕೊಳಗೇರಿ ಮಂಡಳಿ (ಕೆಎಸ್‌ಬಿ) ಕಾಲೋನಿ ನಿವಾಸಿ ಲಕ್ಷ್ಮಣ್ (30) ಬಂಧಿತ. 2024ರ ನ.26ರಂದು ಕೆಎಸ್‌ಬಿ ಕಾಲೋನಿ ನಿವಾಸಿ ಡಿ. ಮೇರಿ (59)



ನಾಪತ್ತೆಯಾಗಿದ್ದರು. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಕೊಲೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಏನಿದು ಪ್ರಕರಣ?

ಕೊಲೆಯಾದ ಮೇರಿಯ ಪತಿ ಹಾಗೂ ಆಕೆಯ ಏಕೈಕ ಮಗಳು ಕೆಲ ವರ್ಷಗಳ ಹಿಂದೆ ಅಕಾಲಿಕ ಮೃತಪಟ್ಟಿದ್ದು, ಮೇರಿ ಕೊತ್ತನೂರಿನ ನಗರೇಶ್ವರ ನಾಗೇನಹಳ್ಳಿ ಕೆಎಸ್‌ಬಿ ಕಾಲೋನಿಯಲ್ಲಿ ಒಂಟಿಯಾಗಿ ನೆಲೆಸಿದ್ದರು. ಹೆಣ್ಣೂರು ಕ್ರಾಸ್‌ನಲ್ಲಿರುವ ಈಕೆಯ ಸಂಬಂಧಿ ಜೆನಿಫರ್ ಪ್ರತಿದಿನ ಮೇರಿಗೆ ಕರೆ ಮಾಡಿ ಆರೋಗ್ಯ ವಿಚಾರಿಸುತ್ತಿದ್ದರು. 2024ರ ನ.26ರಂದು ಬೆಳಗ್ಗೆ 11.30ಕ್ಕೆ ಮೇರಿ ಮೊಬೈಲ್‌ಗೆ ಕರೆ ಮಾಡಿದಾಗ ಸ್ವಿಚ್ಡ್ ಆಫ್ ಬಂದಿದೆ. ಅನುಮಾನಗೊಂಡು ಮನೆಗೆ ಬಂದು ನೋಡಿದಾಗ ಮೇರಿ ನಾಪತ್ತೆಯಾಗಿದ್ದರು. ಹೀಗಾಗಿ ಕೊತ್ತನೂರು ಪೊಲೀಸ್ ಠಾಣೆಗೆ ತೆರಳಿ ಮೇರಿ ನಾಪತ್ತೆ ಸಂಬಂಧ ದೂರು ನೀಡಿದ್ದರು. ಪ್ರಕರಣ ದಾಖಲಿಸಿದ ಪೊಲೀಸರು ಮೇರಿ ಪತ್ತೆಗೆ ಹುಡುಕಾಟ ನಡೆಸಿ, ಎಲ್ಲಿಯೂ ಸಿಗದ ಹಿನ್ನೆಲೆ ಸುಮ್ಮನಾಗಿದ್ದರು.

### ಆರೋಪಿ ಸಹ ನಾಪತ್ತೆಯಾಗಿದ್ದ

ಅದೇ ಕೆಎಸ್‌ಬಿ ಕಾಲೋನಿ ನಿವಾಸಿಯಾಗಿರುವ ಲಕ್ಷ್ಮಣ್ ಮದುವೆಯಾಗಿದ್ದು, ಮೂರು ಮಕ್ಕಳಿವೆ. ಈತ ಕೊಳಾಯಿ ರಿಪೇರಿ ಜತೆಗೆ ಆಟೋ ಓಡಿಸಿಕೊಂಡಿದ್ದ. ಮೇರಿ ನಾಪತ್ತೆಯಾದ ಬೆನ್ನಲ್ಲೇ ಲಕ್ಷ್ಮಣ್ ಸಹ ನಾಪತ್ತೆಯಾಗಿದ್ದ. ಹೀಗಾಗಿ ಆತನ ಪತ್ನಿ 2024ರ ನ.29ರಂದು ಪತಿ ಲಕ್ಷ್ಮಣ್ ನಾಪತ್ತೆ ಸಂಬಂಧ ಡಿ.ಜೆ. ಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿದ್ದ ಡಿ.ಜೆ. ಹಳ್ಳಿ ಪೊಲೀಸರು ಆತನ ಪತ್ತೆ ಕಾರ್ಯಕ್ಕೆ ಮುಂದಾಗಿದ್ದರು. ಜೆನಿಫರ್, ಮೇರಿಯನ್ನು ಲಕ್ಷ್ಮಣ್ ಕೊಲೆ ಮಾಡಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಬಳಿಕ ಕೊತ್ತನೂರು ಪೊಲೀಸರು, ಹೆಣ್ಣೂರಿನಲ್ಲಿ ತಲೆಮರೆಸಿಕೊಂಡಿದ್ದ ಲಕ್ಷ್ಮಣನನ್ನು ಪತ್ತೆಹಚ್ಚಿ ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಮೇರಿ ಕೊಲೆ ರಹಸ್ಯ ಬಯಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಐದು ದಿನ ಕಸ್ಟಡಿಗೆ ಪಡೆದಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಸಾಲ ತೀರಿಸಲು ಒಂಟಿ ಮಹಿಳೆ ಕೊಲೆ

ಲಕ್ಷ್ಮಣ್ ಹಲವರಿಂದ ನಾಲ್ಕೈದು ಲಕ್ಷ ರೂ. ಸಾಲ ಪಡೆದಿದ್ದ. ಈ ಸಾಲ ತೀರಿಸಲು ಸಾಧ್ಯವಾಗದೆ ಪರದಾಡುತ್ತಿದ್ದ. ಈ ನಡುವೆ ತನ್ನದೇ ಕಾಲೋನಿಯಲ್ಲಿ ಒಂಟಿಯಾಗಿ ನೆಲೆಸಿದ್ದ ಮೇರಿ ಬಳಿ ಚಿನ್ನಾಭರಣ ಇರುವ ಬಗ್ಗೆ ತಿಳಿದುಕೊಂಡಿದ್ದ. ಹೀಗಾಗಿ ಆಕೆಯ ಕೊಲೆಗೆ ಸಂಚು ರೂಪಿಸಿದ್ದ. ಅದರಂತೆ ನ.26ರಂದು ಮೇರಿ ಮನೆಗೆ ನುಗ್ಗಿ ಕೊಲೆ ಮಾಡಿ ಮೃತದೇಹದ ಮೇಲಿದ್ದ ಸುಮಾರು 50 ಗ್ರಾಂ ಚಿನ್ನಾಭರಣ ದೋಚಿದ್ದ. ಬಳಿಕ ಮೃತದೇಹಕ್ಕೆ ಬೆಡ್ ಶೀಟ್ ಸುತ್ತಿ ತನ್ನ ಆಟೋಕ್ಕೆ ಹಾಕಿಕೊಂಡು ಬಾಗಲೂರಿನ ಹೊಸೂರು ಬಂಡೆ ಬಳಿಯ ಕಸದ ರಾಶಿಯೊಳಗೆ ಎಸೆದು ಪರಾರಿಯಾಗಿದ್ದ.



### ಪೊಲೀಸರ ದಾರಿ ತಪ್ಪಿಸಲು ಪ್ಲ್ಯಾನ್

ಲಕ್ಷ್ಮಣ್ ಪೊಲೀಸರ ದಾರಿ ತಪ್ಪಿಸಲು ಯೋಜನೆ ರೂಪಿಸಿದ್ದು, ಯಾರಿಗಾದರೂ ಕರೆ ಮಾಡಿದರೆ ಸಿಕ್ಕಿಬೀಳುವ ಭೀತಿಯಲ್ಲಿ ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದ. ಆತನ ಮೊಬೈಲ್ ಟವರ್ ಲೊಕೇಶನ್ ಪರಿಶೀಲಿಸಿದಾಗ ಡಿ.ಜೆ. ಹಳ್ಳಿ ತೋರಿಸಿತ್ತು. ಆರೋಪಿ 4ನೇ ಸಿಮ್ ಕಾರ್ಡ್ ಬಳಸುತ್ತಿರುವ ಬಗ್ಗೆ ಪೊಲೀಸರು ನಿಗಾವಹಿಸಿದ್ದರು. ಹೆಣ್ಣೂರಿನ ಪರಿಚಿತ ಮಹಿಳೆಯೊಬ್ಬರಿಗೆ ಆರೋಪಿ ಕರೆ ಮಾಡಿದ್ದಾಗ ಟವರ್ ಲೊಕೇಶನ್ ಆಧರಿಸಿ ಪೊಲೀಸರು ಲಕ್ಷ್ಮಣ್‌ನನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ತಾನೇ ಕೊಲೆ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ.

### ಮಹಿಳೆಯ ಮೊಬೈಲ್ ಕಸದ ರಾಶಿಗೆ ಎಸೆದ

ಮೇರಿ ಕೊಲೆ ಬಳಿಕ ಆಕೆಯ ಮೊಬೈಲ್ ಸ್ವಿಚ್ಡ್ ಆಫ್ ಮಾಡಿದ್ದ ಆರೋಪಿ ಲಕ್ಷ್ಮಣ್ ಬಳಿಕ ಮೃತದೇಹ ಸಾಗಿಸುವಾಗ ಮಾರ್ಗ ಮಧ್ಯೆ ಆ ಮೊಬೈಲ್ ಸ್ವಿಚ್ ಆನ್ ಮಾಡಿ ಕಸದ ರಾಶಿಯೊಂದಕ್ಕೆ ಎಸೆದಿದ್ದ. ಬಳಿಕ ಆ ಮೊಬೈಲ್ ಬ್ಯಾಟರಿ ಡೌನ್ ಆಗಿ ಸ್ವಿಚ್ಡ್ ಆಫ್ ಆಗಿತ್ತು. ಬಳಿಕ ಪೊಲೀಸರ ತನಿಖೆ ವೇಳೆ ಆ ಮೊಬೈಲ್ ಕಸದ ರಾಶಿಯಲ್ಲಿ ಪತ್ತೆಯಾಗಿತ್ತು.

### ಮಹಿಳೆಯೊಬ್ಬಳಿಗೆ ಕರೆ ಮಾಡಿ ಸಿಕ್ಕಿಬಿದ್ದ!

ಆರೋಪಿ ಲಕ್ಷ್ಮಣ್ ನಾಲ್ಕನೇ ಸಿಮ್ ಕಾರ್ಡ್ ಬಳಸುತ್ತಿರುವ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಪೊಲೀಸರು ಆತನ ಕರೆಗಳ ಮೇಲೆ ನಿಗಾವಹಿಸಿದ್ದರು. ಕೆಲ ದಿನಗಳ ಹಿಂದೆ ಮೊಬೈಲ್ ಸ್ವಿಚ್ ಆನ್ ಮಾಡಿರುವ ಲಕ್ಷ್ಮಣ್, ಹೆಣ್ಣೂರಿನ ಪರಿಚಿತ ಮಹಿಳೆಯೊಬ್ಬರಿಗೆ ಕರೆ ಮಾಡಿದ್ದಾನೆ. ಈ ಕರೆಯ ಟವರ್ ಲೊಕೇಶನ್ ಆಧರಿಸಿ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಲಕ್ಷ್ಮಣ್‌ನನ್ನು ವಶಕ್ಕೆ ಪಡೆದು ತಮ್ಮದೇ ಶೈಲಿಯಲ್ಲಿ ವಿಚಾರಣೆ ಮಾಡಿದಾಗ ಮೇರಿ ಕೊಲೆಯ ಬಗ್ಗೆ ಬಾಯ್ಬಿಟ್ಟಿದ್ದಾನೆ. ಬಳಿಕ ತಾನೇ ಕೊಲೆ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ.

ನಾಲ್ಕು ತಿಂಗಳ ಹಿಂದೆ ದಾಖಲಾಗಿದ್ದ ಮಹಿಳೆ ನಾಪತ್ತೆ ಪ್ರಕರಣ ಪತ್ತೆಯಾಗಿದೆ. ಪರಿಚಿತ ವ್ಯಕ್ತಿಯೇ ಆಕೆಯನ್ನು ಕೊಲೆ ಮಾಡಿದ್ದು ಸದ್ಯ ಆತನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ನಿರ್ಜನಪ್ರದೇಶದಲ್ಲಿ ಮಹಿಳೆಯ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಆಕೆಯ ಬಳಿಯಿದ್ದ ಚಿನ್ನಾಭರಣಕ್ಕಾಗಿ ಆರೋಪಿ ಕೊಲೆ ಮಾಡಿರುವುದು ಗೊತ್ತಾಗಿದ್ದು ತನಿಖೆ ಮುಂದುವರೆದಿದೆ.

# 11 ವರ್ಷಗಳಿಂದ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಶಿಕ್ಷಾ ಬಂಧಿ ಕೊನೆಗೂ ಅರೆಸ್ಟ್

ಕಲಬುರಗಿಯಲ್ಲಿ 2009ರಲ್ಲಿ ಪೊಲೀಸ್ ಕಾನ್ಸ್ಟೆಬಲ್ ಹತ್ಯೆ ಮಾಡಿದ್ದ ಆರೋಪಿಯನ್ನು 11 ವರ್ಷಗಳ ಬಳಿಕ ಪುಣೆಯಲ್ಲಿ ಬಂಧಿಸಲಾಗಿದೆ. ಜೈಲಿನಿಂದ ಪರಾರಿಯಾಗಿ, ಹೆಸರು ಬದಲಿಸಿಕೊಂಡು ಪೊಲೀಸ್ ಇನ್‌ಫಾರ್ಮರ್‌ನಾಗಿ ಕೆಲಸ ಮಾಡುತ್ತಿದ್ದ, ಕಲಬುರಗಿ ಸಬ್ ಅರ್ಬನ್ ಠಾಣೆ ಪೊಲೀಸರು ತೀವ್ರ ತನಿಖೆ ನಡೆಸಿ ಆರೋಪಿಯನ್ನ ಬಂಧಿಸಿ ಮತ್ತೆ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆತ ಪೊಲೀಸ್ ಕಾನ್ಸ್ಟೆಬಲ್ ನನ್ನ ಕೊಲೆ ಮಾಡಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ, ಜೈಲಿನಲ್ಲೂ ಕಿರಿಕ್ ಮಾಡಿ ಮತ್ತೊಂದು ಜೈಲಿಗೆ ಶಿಫ್ಟ್ ಆಗಿದ್ದ, ಅಲ್ಲೂ ಸುಮ್ಮನಿರದೇ ಅನಾರೋಗ್ಯದ ನಾಟಕವಾಡಿ ಆಸ್ಪತ್ರೆಗೆ ದಾಖಲಾಗಿದ್ದ, ಆಸ್ಪತ್ರೆಯಲ್ಲಿ ಜೈಲು ಕಾವಲು ಸಿಬ್ಬಂದಿಗೆ ಚಳ್ಳೆಹಣ್ಣು ತಿನ್ನಿಸಿ ಎಸ್ಕೇಪ್ ಆಗಿದ್ದ, ಮಹಾರಾಷ್ಟ್ರ ಪುಣೆಯಲ್ಲಿ ತಲೆಮರೆಸಿಕೊಂಡು, ಹೆಸರು ಬದಲಿಸಿಕೊಂಡು ಪೊಲೀಸ್ ಇನ್‌ಫಾರ್ಮರ್ ಆಗಿ ಕೆಲಸ ಮಾಡುತ್ತಿದ್ದ, ಆದರೆ ಶಿಕ್ಷಾಬಂಧಿ ಕೈದಿ ಬೆನ್ನುಬಿದ್ದಿದ್ದ ಖಾಕಿ ತಂಡ ಬರೋಬ್ಬರಿ 11 ವರ್ಷಗಳ ಬಳಿಕ ಹೆಡೆಮುರಿ ಕಟ್ಟಿ ಮತ್ತೆ ಜೈಲಿಗಟ್ಟಿದ್ದಾರೆ.

### 11 ವರ್ಷಗಳ ಬಳಿಕ ಕೊನೆಗೂ ಅರೆಸ್ಟ್

ಆರೋಪಿ ಪೊಲೀಸ್ ಕಾನ್ಸ್ಟೆಬಲ್ ನನ್ನ ಕೊಲೆಗೈದು ಖಾಕಿಗೆ ಚಳ್ಳೆಹಣ್ಣು ತಿನ್ನಿಸಿ ಮಹಾರಾಷ್ಟ್ರದ ಪುಣೆಯಲ್ಲಿ ಠಿಕಾಣಿ ಹೂಡಿದ್ದ, ಕೈದಿಯ ಹೆಸರು ಅಂಬರೀಷ್ ನಾಟಿಕರ್. ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಭಾಗೋಡಿ ಗ್ರಾಮದ ನಿವಾಸಿ.



2009ರಲ್ಲಿ ಕಲಬುರಗಿಯ ಸಬ್ ಅರ್ಬನ್ ಪೊಲೀಸ್ ಠಾಣಾ ವ್ಯಾಪ್ತಿಯ ಕಲಬುರಗಿ ನಗರದ ಬಿದ್ದಾಪುರ ಕಾಲೋನಿಯಲ್ಲಿ ಜಗಳವಾಗಿತ್ತು. ಆಗ ಠಾಣೆಯ ಕಾನ್ಸ್ಟೇಬಲ್ ಅಶ್ವಿನ್‌ಕುಮಾರ್ ಹೋಗಿ ಈತನನ್ನ ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಬರುವಾಗ ಕಾನ್ಸ್ಟೇಬಲ್ ಅಶ್ವಿನ್‌ಕುಮಾರ್ ಮರ್ಮಾಂಗಕ್ಕೆ ಹೊಡೆದು ಕೊಲೆ ಮಾಡಿದ್ದ. ಕೊಲೆ ಪ್ರಕರಣದಲ್ಲಿ ಅಂಬರೀಶ್‌ನನ್ನ ಪೊಲೀಸರು ಅರೆಸ್ಟ್ ಮಾಡಿ ಜೈಲಿಗಟ್ಟಿದ್ದರು.

2011ರಲ್ಲಿ ಕೋರ್ಟ್ ಅಂಬರೀಶ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ 50 ಸಾವಿರ ರೂ. ದಂಡ ಹಾಕಿತ್ತು. ಕಾನ್ಸ್ಟೇಬಲ್‌ನನ್ನೇ ಹತ್ಯೆಗೈದಿರುವ ಅಂಬರೀಶ್ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಕಲಬುರಗಿ ಜೈಲು ಸೇರಿದ್ದ. ಮೂರು ವರ್ಷಗಳ ಕಾಲ ಕಲಬುರಗಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಕೈದಿ ಅಂಬರೀಶ್ ಅಲ್ಲಿಯೂ ಕೂಡ ಕೈದಿಗಳ ಜೊತೆಗೆ ಜಗಳ ಮಾಡಿದ್ದ. ಹೀಗಾಗಿ ಕೈದಿ ಅಂಬರೀಶ್‌ನನ್ನ 2014 ರಲ್ಲಿ ವಿಜಯಪುರ ಜೈಲಿಗೆ ಸ್ಥಳಾಂತರ ಮಾಡಲಾಗಿತ್ತು. ಆದರೆ ಕಿರಾತಕ ನೌಟಂಕಿ ಕೈದಿ ಅಂಬರೀಶ್ ಅಲ್ಲಿಯೂ ಅನಾರೋಗ್ಯ ನೆಪವೊಡ್ಡಿ ವಿಜಯಪುರ ಜಿಲ್ಲಾಸ್ಪತ್ರೆಗೆ ಸೇರಿದ್ದ.

### ಪೊಲೀಸ್ ಇನ್‌ಫಾರ್ಮರ್ ಆಗಿ ಕೆಲಸ

ಜೈಲು ಕಾವಲು ಸಿಬ್ಬಂದಿ ಕಣ್ತಪ್ಪಿಸಿ ಆಸ್ಪತ್ರೆಯ ಸೇಲ್ ವಾರ್ಡ್‌ನಿಂದ ಎಸ್ಕೇಪ್ ಆಗಿ, ನೇರವಾಗಿ ಮಹಾರಾಷ್ಟ್ರದ ಪುಣೆಯಲ್ಲಿ ತಲೆಮರೆಸಿಕೊಂಡು ಠಿಕಾಣಿ

☞ 14


**ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ್ನು ಟೀಕಿಸುವ ಭರದಲ್ಲಿ ಕಾಂಗ್ರೆಸ್ ನಾಯಕರು ಕೆಲವೊಮ್ಮೆ ಬಹುಸಂಖ್ಯಾತ ಹಿಂದೂಗಳ ಭಾವನೆಯನ್ನು ಕೆರಳಿಸುವ ಹೇಳಿಕೆಗಳನ್ನು ನೀಡುತ್ತಿರುವುದು ಮತ್ತು ಅಲ್ಪಸಂಖ್ಯಾತರ ಮತಗಳನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ನಡವಳಿಕೆಗಳನ್ನು ತೋರುತ್ತಿರುವುದು ಕಾಂಗ್ರೆಸ್ ದೇಶದಲ್ಲಿ ಹೀನಾಯ ಸ್ಥಿತಿಗೆ ತಲುಪಲು ಕಾರಣವಾಗುತ್ತಿದೆ. ಜಾತ್ಯಾತೀತ ಪಕ್ಷ ಎನ್ನುವ ಕೈ ನಾಯಕರು ಇನ್ನಾದರೂ ಹೇಳಿಕೆಗಳನ್ನು ನೀಡುವಾಗ ಎಚ್ಚರವಹಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಇನ್ನಷ್ಟು ಸಂಕಷ್ಟವನ್ನು ಎದುರಿಸಬೇಕಾಗಿ ಬಂದರೂ ಅಚ್ಚರಿಯಿಲ್ಲ.**

# ಕೈನಾಯಕರು ಎಚ್ಚೆತ್ತುಕೊಳ್ಳದಿದ್ದರೆ ಸಂಕಷ್ಟ ತಪ್ಪಿದಲ್ಲ!

✍ ಬಿ.ಎಂ. ಲವಕುಮಾರ್

ಇವತ್ತು ಕುಂಭಮೇಳ ಮುಗಿಯುವುದರೊಂದಿಗೆ ಅದರ ಸುತ್ತ ಸುತ್ತಿಕೊಂಡಿದ್ದ ರಾಜಕೀಯ ಲೆಕ್ಕಾಚಾರಗಳು ಮುಗಿದು ಹೋಗುತ್ತದೆಯಾ? ಎಂಬ ಪ್ರಶ್ನೆಗೆ ಇಲ್ಲ ಎಂಬ ಉತ್ತರ ಬರುತ್ತಿದೆ. ಕಾರಣ ಮಳೆ ನಿಂತರೂ ಮರದಹನಿ ನಿಲ್ಲಲ್ಲ ಎಂಬಂತೆ ಕುಂಭಮೇಳದ ಯಶಸ್ಸು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ವರ್ಚಸ್ಸನ್ನು ಇನ್ನಷ್ಟು ಹೆಚ್ಚುವಂತೆ ಮಾಡಿದೆ. ಹಾಗೆಯೇ ನಿರೀಕ್ಷೆಗೂ ಮೀರಿ ಭಕ್ತರು ಪಾಲ್ಗೊಂಡಿರುವುದು ಕುಂಭಮೇಳವನ್ನು ವಿರೋಧಿಸುತ್ತಾ ಬಂದಿದ್ದ ರಾಜಕೀಯ ಪಕ್ಷಗಳಿಗೆ ಆತಂಕವನ್ನು ತಂದೊಡ್ಡಿದೆ. ಹೀಗಾಗಿ ಕುಂಭಮೇಳದ ಸುತ್ತಲೂ ರಾಜಕೀಯ ಲಾಭನಷ್ಟದ ಚರ್ಚೆಗಳು ನಡೆಯುತ್ತಿವೆ.

ಬಹುಶಃ ಕುಂಭಮೇಳದ ಬಗ್ಗೆ ಏನನ್ನೂ ಮಾತನಾಡದೆ ಸುಮ್ಮನಿದ್ದಿದ್ದರೆ ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳಿಗೆ ಯಾವುದೇ ಭಯವನ್ನು



ತಂದೊಡ್ಡುತ್ತಿರಲಿಲ್ಲವೇನೋ? ಆದರೆ ಕುಂಭಮೇಳದ ಬಗ್ಗೆ ಹಗುರವಾಗಿ ಅಥವಾ ಅಲ್ಲಿನ ಲೋಪದೋಷಗಳನ್ನು ಎತ್ತಿ ಹಿಡಿದರೆ ಭಕ್ತರು ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹೋಗಲ್ಲ. ಆಗ ಬಿಜೆಪಿಗೆ ಮುಖಭಂಗವಾಗುತ್ತದೆ ಎಂಬ ಆಲೋಚನೆಗಳು ಬಿಜೆಪಿಯನ್ನು ವಿರೋಧಿಸುವ ವಿವಿಧ ಪಕ್ಷದ ನಾಯಕರ ತಲೆಯಲ್ಲಿ ಬಂದಿತ್ತು. ಅಷ್ಟೇ ಅಲ್ಲದೆ, ಕುಂಭಮೇಳಕ್ಕೆ ಹೋಗದಂತೆ ಜನರನ್ನು ತಡೆಯುವ ಮೂಲಕ ಉತ್ತರಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಅವರಿಗೆ ಟಕ್ಕರ್ ನೀಡಬಹುದು ಎಂಬ ಆಲೋಚನೆಯೂ ಇತ್ತು.

ಉತ್ತರ ಪ್ರದೇಶದಲ್ಲಿ ಯಾವುದೇ ಪಕ್ಷ ಆಡಳಿತದಲ್ಲಿದ್ದಿದ್ದರೂ ಕುಂಭಮೇಳವನ್ನು ಆಯೋಜಿಸಲೇ ಬೇಕಾಗಿತ್ತು. ಹಾಗೆಂದು ಆ ಕುಂಭಮೇಳ ಆ ಪಕ್ಷದ ಪ್ರಾಯೋಜಕತ್ವದಲ್ಲಿ ನಡೆಯುತ್ತದೆ ಎಂದು ಹೇಳಲು ಸಾಧ್ಯವೇ? ಉತ್ತರ ಪ್ರದೇಶದ ಸಿಎಂಗೆ ಕುಂಭಮೇಳದ ಮೂಲಕ ಹಿಂದೂಗಳನ್ನು ಒಂದೆಡೆ ಸೇರಿಸಬೇಕೆನ್ನುವುದು ಬಯಕೆಯಾಗಿತ್ತು. ಅದನ್ನು ಅವರು ಮಾಡಿ ಮುಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಒಂದಷ್ಟು ಅವಘಡಗಳು, ಸಮಸ್ಯೆಗಳು ಆಗಿದ್ದರೂ ಅದೆಲ್ಲವನ್ನು ಮೀರಿ ಕುಂಭಮೇಳದ ಪವಿತ್ರ ಸ್ನಾನ ಯಶಸ್ವಿಯಾಗಿದೆ.

ರಾಜಕೀಯವನ್ನು ಹೊರತು ಪಡಿಸಿ ನೋಡಿದರೆ ಕುಂಭಮೇಳದಿಂದ ಜನರಿಗೆ, ಉದ್ಯಮಿಗಳಿಗೆ, ವ್ಯಾಪಾರಿಗಳಿಗೆ ಹೀಗೆ ಹತ್ತು ಹಲವು ವಿಧದಲ್ಲಿ ಲಾಭವಾಗಿದೆ. ಉತ್ತರ ಪ್ರದೇಶದ ಸರ್ಕಾರದ ತಿಜೋರಿಗೂ ಹಣ ಹರಿದು ಬಂದಿದೆ. ಇದರ ಜತೆಗೆ ರಾಜ್ಯ, ದೇಶ, ವಿದೇಶಗಳಿಂದ ಜನ ಹರಿದು ಬಂದಿದ್ದರಿಂದ ಹಲವು ಬಗೆಯಲ್ಲಿ ಉತ್ತರ ಪ್ರದೇಶದ ಆಚೆಗೂ ಟ್ರಾವೆಲ್ಸ್, ವಿಮಾನಯಾನ ಹೀಗೆ ಎಲ್ಲರಿಗೂ ಪ್ರಯೋಜನವಾಗಿದೆ. ಇನ್ನು ರಾಜಕೀಯವಾಗಿ ಯಾರಿಗೆ ಲಾಭವಾಗಿದೆ ಎನ್ನುವುದೇ ಈಗ ದೊಡ್ಡದಾಗಿ ಚರ್ಚೆಯಾಗುತ್ತಿರುವ ವಿಚಾರವಾಗಿದೆ.

ಕಾಂಗ್ರೆಸ್ ಸೇರಿದಂತೆ ಬಿಜೆಪಿಯನ್ನು ವಿರೋಧಿಸುವ ಬಹುತೇಕ ಪಕ್ಷಗಳಿಗೆ 65 ಲಕ್ಷದಷ್ಟು ಜನರು ಕುಂಭಮೇಳದಲ್ಲಿ ಭಾಗವಹಿಸಿರುವುದನ್ನು ಸಹಿಸಿಕೊಳ್ಳಲಾಗುತ್ತಿಲ್ಲ. ಹಿಂದೂ ಧಾರ್ಮಿಕ ಕಾರ್ಯಕ್ರಮ ಎಂದ ತಕ್ಷಣ ಅದನ್ನು ಬಿಜೆಪಿ ಮತ್ತು ಆರ್ ಎಸ್ ಎಸ್ ಕಾರ್ಯಕ್ರಮದಂತೆ ಬಿಂಬಿಸುವ ಪಕ್ಷಗಳಿಗೆ ಇದೊಂದು ರೀತಿಯ ಆತಂಕ ತಂದಿದೆ. ಆದರೆ ಇಲ್ಲಿ ನಾವು ಮಾಡಿಕೊಂಡ ಯಡವಟ್ಟಿನಿಂದ ಬಿಜೆಪಿಗೆ ಲಾಭವಾಯಿತು ಎಂಬುದು ಇನ್ನೂ ಅವರ ಅರಿವಿಗೆ ಬಂದಂತೆ ಕಾಣಿಸುತ್ತಿಲ್ಲ. ಒಂದು ರಾಜಕೀಯ ಪಕ್ಷ ಬಲಿಷ್ಟವಾಗಿ ನಿಲ್ಲಬೇಕಾದರೆ ಆ ಪಕ್ಷದಲ್ಲಿ ಎಲ್ಲ ಜಾತಿ, ಧರ್ಮದ ನಾಯಕರು, ಕಾರ್ಯಕರ್ತರು ಇರಲೇಬೇಕು ಎಂಬ ಕನಿಷ್ಟಜ್ಞಾನ ಇಟ್ಟುಕೊಳ್ಳದಿರುವುದೇ ಸಮಸ್ಯೆಯನ್ನು ತಂದೊಡ್ಡಿದೆ.


ಐದಾರು ದಶಕಗಳ ಕಾಲ ದೇಶವನ್ನು ಆಳಿದ ಕಾಂಗ್ರೆಸ್ ಪಕ್ಷವಾಗಲೀ, ಅದರ ನಾಯಕರಾಗಲೀ, ಸೂಕ್ಷ್ಮತೆಯನ್ನು ಅರಿಯದೆ ಬಿಜೆಪಿ ಮತ್ತು ಆರ್ ಎಸ್ ಎಸ್ ನ್ನು ಟೀಕಿಸುವ ಭರದಲ್ಲಿ ಹಿಂದೂಗಳ ಭಾವನೆಗೆ ಧಕ್ಕೆ ತರುವಂತೆ ನಡೆದುಕೊಳ್ಳುತ್ತಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಟೀಕೆ ಮಾಡುವುದಾದರೆ ನೇರವಾಗಿ ಬಿಜೆಪಿಯನ್ನು ಮತ್ತು ಆ ಪಕ್ಷದ ನಾಯಕರನ್ನೇ ಟಾರ್ಗೆಟ್ ಮಾಡಿ ಟೀಕೆಯನ್ನು ಮಾಡಲಿ. ಆದರೆ ಅದನ್ನು ಬಿಟ್ಟು ಹಿಂದೂಗಳ ಭಾವನೆಯನ್ನು ಕೆಣಕುವಂತಹ ಹೇಳಿಕೆಗಳನ್ನು ನೀಡುವುದೆಷ್ಟು ಸರಿ? ಇದು ನಾಯಕರಿಗೆ ಅರ್ಥವಾಗದಿರುವುದೇ ಕಾಂಗ್ರೆಸ್ ಹೀನಾಯ ಸ್ಥಿತಿಗೆ ಬರಲು ಕಾರಣವಾಗುತ್ತಿದೆ.

ಕುಂಭಮೇಳದ ಬಗ್ಗೆ ಹಗುರವಾಗಿ ಮಾತನಾಡಿದ ಬಳಿಕವೂ ಕಾಂಗ್ರೆಸ್ ನ ಹಲವು ನಾಯಕರು ಹಿರಿಯ ನಾಯಕರ ಮಾತಿಗೆ ಮನ್ನಣೆ ನೀಡದೆ ಕುಂಭಮೇಳದಲ್ಲಿ ಸ್ನಾನ ಮಾಡಿರುವುದು ಪಕ್ಷಕ್ಕೆ ಮತ್ತು ಪಕ್ಷದ ನಾಯಕರಿಗೆ ಮುಜುಗರ ತಂದಿದೆ. ಇಲ್ಲಿ ಹಿರಿಯ ನಾಯಕರು ಯಾವ ಉದ್ದೇಶಗಳನ್ನಿಟ್ಟುಕೊಂಡು ಹೇಳಿಕೆ ನೀಡಿದರೋ ಗೊತ್ತಿಲ್ಲ. ಆದರೆ ಶಾಸಕರಾಗಲು, ಸಂಸದರಾಗಲು ಎಲ್ಲ ಧರ್ಮದ ಮತದಾರರ ಬೆಂಬಲ ಬೇಕಾಗುತ್ತದೆ.



ಬಹುಸಂಖ್ಯಾತರ ಮತವಿಲ್ಲದೆ ಕಾಂಗ್ರೆಸ್ ದೇಶದಲ್ಲಿ ಚುನಾವಣೆ ಹೋಗಲು ಸಾಧ್ಯನಾ?

ಹಿರಿಯ ನಾಯಕರ ಹೇಳಿಕೆಗಳು, ಹಿಂದೂ ವಿರೋಧಿ ಭಾವನೆ ಹುಟ್ಟಿಸುವ ಅವರ ವರ್ತನೆಗಳು, ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ಕೆಲವು ನಾಯಕರಲ್ಲಿ ಆತಂಕವನ್ನು ಸೃಷ್ಟಿ ಮಾಡಿತ್ತು. ಹೀಗಾಗಿಯೇ ಕೆಲವು ನಾಯಕರು ಕುಂಭಮೇಳಕ್ಕೆ ಹೋಗಿ ಸ್ನಾನ ಮಾಡಿ ಬಂದಿದ್ದಾರೆ. ಮತ್ತು ಅದನ್ನು ಸಾರ್ವಜನಿಕವಾಗಿ ಹಂಚಿಕೊಂಡಿದ್ದಾರೆ. ಇಂತಹ ನಾಯಕರ ಸ್ಥಿತಿ ಅಡಕತ್ತರಿಯಲ್ಲಿ ಸಿಕ್ಕಿದಂತಾಗಿದೆ. ಇತ್ತ ತಮ್ಮ ಕ್ಷೇತ್ರದ ಹಿಂದೂ ಮತದಾರರ ಓಲೈಕೆಗೆ ಅದು ಅನಿವಾರ್ಯವಾಗಿದ್ದರೆ, ಅತ್ತ ಹಿರಿಯ ನಾಯಕರ ಕೆಂಗಣ್ಣಿಗೆ ಗುರಿಯಾಗಬೇಕಾದ ಪರಿಸ್ಥಿತಿ ಎದುರಾಗಿದೆ.



ಕುಂಭಮೇಳಕ್ಕೆ ಹೋದವರು ಹಿಂದೂಗಳೇ ಆಗಿರಬಹುದು. ಆದರೆ ಅವರು ಬಿಜೆಪಿಯ ಕಾರ್ಯಕರ್ತರಾಗಲೀ, ಆರ್‌ಎಸ್‌ಎಸ್‌ನವರರಾಗಲೀ ಆಗಿರಲಿಲ್ಲ. ಆದರೆ ಕಾಂಗ್ರೆಸ್ ಸೇರಿದಂತೆ ಕೆಲವೊಂದು ಪಕ್ಷದ ನಾಯಕರು ಪವಿತ್ರ ಸ್ನಾನ ಮಾಡಲು ಹೋದವರೆಲ್ಲರನ್ನು ಬಿಜೆಪಿಯವರು ಎಂಬಂತೆ ಬಿಂಬಿಸಿ ಬಿಜೆಪಿಗೆ ಲಾಭ ಮಾಡಿಕೊಟ್ಟರಾ? ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ್ನು ದೂಷಿಸುವ ಭರದಲ್ಲಿ ಸಮಸ್ತ ಹಿಂದೂಗಳ ಭಾವನೆಯನ್ನೇ ಕೆರಳಿಸಿದರಾ? ಹೀಗೆ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಬಿಜೆಪಿ ರಾಜಕೀಯವಾಗಿ ಎಲ್ಲವನ್ನೂ ತುಂಬಾ ಚೆನ್ನಾಗಿ ಬಳಸಿಕೊಳ್ಳುತ್ತದೆ.

ಕುಂಭಮೇಳದ ಕುರಿತಂತೆ ಕಾಂಗ್ರೆಸ್ ಮತ್ತು ಇಂಡಿ ಒಕ್ಕೂಟದ ಪಕ್ಷಗಳ ನಾಯಕರ ಹೇಳಿಕೆಗಳನ್ನು ಬಳಸಿಕೊಂಡು ಹಿಂದೂ ವಿರೋಧಿಗಳು ಎಂಬಂತೆ ಬಿಂಬಿಸುವಲ್ಲಿ ಬಿಜೆಪಿ ಹಿಂದೆ ಬೀಳುವುದಿಲ್ಲ. ಇದನ್ನು ಮುಂದಿನ ಎಲ್ಲ ಚುನಾವಣೆಗಳಿಗೂ ಅಸ್ತ್ರವಾಗಿ ಬಳಸಿಕೊಳ್ಳುವುದರಲ್ಲಿ ಹಿಂದೆ ಬೀಳುವುದಿಲ್ಲ. ಹೀಗೆ ಆದರೆ ಅದರ ಪರಿಣಾಮಗಳು ಏನಾಗಬಹುದು ಎಂಬುದಕ್ಕೆ ಮುಂದೆ ಬರುವ ಚುನಾವಣೆಗಳು ಸಾಕ್ಷಿಯಾಗಲಿವೆ. ಕಾಂಗ್ರೆಸ್ ನಾಯಕರು ಕೆಲವೊಂದು ವಿಚಾರಗಳಲ್ಲಿ ಎಚ್ಚರಿಕೆ ವಹಿಸದೆ ಹೋದರೆ ಅದರಲ್ಲೂ ಹಿಂದೂ ಧರ್ಮದ ಬಗ್ಗೆ ಮಾತನಾಡುವಾಗ ನಿಗಾ ವಹಿಸದೆ ಹೋದರೆ ಸಂಕಷ್ಟ ತಪ್ಪಿದಲ್ಲ.



ಇನ್ನು ಕರ್ನಾಟಕ ವಿಚಾರಕ್ಕೆ ಬರುವುದಾದರೆ ಇಲ್ಲಿಯೂ ತಿ.ನರಸೀಪುರದಲ್ಲಿ ಮೂರು ದಿನಗಳ ಕಾಲ ಕುಂಭಮೇಳ ನಡೆಸಲಾಯಿತು. ಕಾಂಗ್ರೆಸ್ ನ ಕೇಂದ್ರದ ನಾಯಕರು ಹೇಳಿದ ಪ್ರಕಾರ ಕಾಂಗ್ರೆಸ್ ಕರ್ನಾಟಕದಲ್ಲಿ ಆಡಳಿತದಲ್ಲಿ ಇದೆ ಎಂಬ ಕಾರಣಕ್ಕೆ ಕುಂಭಮೇಳ ನಡೆಸದೆ ತೆಪ್ಪಗೆ ಕೂರಲು ಸಾಧ್ಯವಾಯಿತಾ? ಖಂಡಿತಾ ಇಲ್ಲ. ಒಂದು ವೇಳೆ ಈ ಸಂದರ್ಭ ಕಾಂಗ್ರೆಸ್ ಹೊರತು ಪಡಿಸಿ ಬೇರೆ ಯಾವುದೇ ಪಕ್ಷವಿದ್ದಿದ್ದರೂ ಇಲ್ಲಿನ ಕುಂಭಮೇಳವನ್ನು ಬಳಸಿಕೊಂಡು ರಾಜ್ಯಕ್ಕೆ ಆರ್ಥಿಕ ಲಾಭ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರೇನೋ?

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸದೃಢವಾಗಿದೆ ಎನ್ನುವುದನ್ನು ಒಪ್ಪಿಕೊಳ್ಳಬಹುದಾದರೂ ಆರ್ಥಿಕವಾಗಿ ಉಚಿತ ಯೋಜನೆಗಳ ಕಾರಣ ಸಂಕಷ್ಟದಲ್ಲಿದೆ ಎನ್ನುವುದನ್ನು ತಳ್ಳಿಹಾಕುವಂತಿಲ್ಲ. ಕಾಂಗ್ರೆಸ್ ನಾಯಕರ ಅದೃಷ್ಟಕ್ಕೆ ರಾಜ್ಯದಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿರುವ ವಿಪಕ್ಷಗಳು ದುರ್ಬಲವಾಗಿವೆ. ಹೀಗಾಗಿ ಬೆಲೆ ಏರಿಕೆ ಸೇರಿದಂತೆ ಹತ್ತು ಹಲವು ವಿಚಾರಗಳಲ್ಲಿ ಶ್ರೀಸಾಮಾನ್ಯರ ಜೇಬಿಗೆ ಕತ್ತರಿ ಹಾಕಿದರೂ, ಕೆಲವು ಸಮುದಾಯದ ಅನುದಾನಗಳನ್ನು ಕಿತ್ತುಕೊಂಡರೂ ಯಾರೂ ಕೇಳುವವರು ಇಲ್ಲದಾಗಿದೆ. ಹಿಂದೆ ಆಡಳಿತ ನಡೆಸಿದ ಬಿಜೆಪಿಯವರ ದುರಾಡಳಿತದಿಂದ ಬೇಸತ್ತ ಜನ ಕಾಂಗ್ರೆಸ್ ಆಡಳಿತದಲ್ಲಿ ನೆಮ್ಮದಿ ಕಾಣಬಹುದೆಂದು ಬಯಸಿದ್ದರು. ಆದರೀಗ ಇವರಿಂದಲೂ ನೆಮ್ಮದಿಯಿಲ್ಲದಂತಾಗಿದೆ.

ಈ ಬಾರಿ ರಾಜ್ಯ ಸರ್ಕಾರ ಬಜೆಟ್ ಮಂಡಿಸಿದ ಬಳಿಕ ಅದನ್ನು ಹಲಾಲ್ ಬಜೆಟ್ ಎಂದು ಬಿಜೆಪಿ ವಿರೋಧಿಸುತ್ತಿದೆ. ಆ ಮೂಲಕ ಹಿಂದೂ ವಿರೋಧಿ ಸರ್ಕಾರ ಎಂದು ಹೇಳಿಕೆಗಳನ್ನು ನೀಡುತ್ತಿದೆ. ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಈ ವಿಚಾರವೇ ಅವರು ಅಧಿಕಾರ ಕಳೆದುಕೊಳ್ಳುವಂತೆ ಮಾಡಿತ್ತು. ಈಗ ಅದೇ ವಿಚಾರಗಳು ಮುನ್ನಲೆಗೆ ಬಂದಿದೆ. ಮುಂದೇನು ಗೊತ್ತಿಲ್ಲ. ಕಾಂಗ್ರೆಸ್ ನವರು ಬಿಜೆಪಿ ಆರ್‌ಎಸ್‌ಎಸ್‌ನ್ನು ಟೀಕಿಸಲಿ ಅದನ್ನು ರಾಜಕೀಯ ಎಂದು ತಳ್ಳಿ ಹಾಕಿ ಬಿಡಬಹುದು. ಆದರೆ ಟೀಕೆಯ ಭರದಲ್ಲಿ ಹಿಂದೂಗಳ ಭಾವನೆಗೆ ಧಕ್ಕೆ ಬಾರದಂತೆ ನಡೆದುಕೊಂಡರೆ ಒಳ್ಳೆಯದು ಇಲ್ಲದೆ ಹೋದರೆ ಅದರ ಪರಿಣಾಮಗಳನ್ನು ಅವರೇ ಎದುರಿಸಬೇಕಾಗಿ ಬಂದರೆ ಅಚ್ಚರಿಪಡಬೇಕಾಗಿಲ್ಲ.

☯

# ಹಳಿ ತಪ್ಪಿದ ಪ್ರೇಮ ಪ್ರಕರಣ ಮದುವೆಯಲ್ಲಿ ಸುಖಾಂತ್ಯ



**ಪ್ರೀತಿಗೆ ಸೋಲಿಲ್ಲ.... ಎಂಬುದನ್ನು ಈ ವಿಭಿನ್ನ ಪ್ರೇಮ ಪ್ರಕರಣ ಸಾಬೀತು ಪಡಿಸಿದೆ. ಈ ಪ್ರಣಯ ಪಕ್ಷಿಗಳ ಮದುವೆಗೆ ಪ್ರಿಯಕರನ ತಂಗಿಯ ಮದುವೆ ಅಡ್ಡಿಯಾಗಿತ್ತು ಇದರಿಂದಾಗಿ ತಂಗಿಯ ಮದುವೆಗಾಗಿ ತನ್ನ ನಿಷ್ಕಲ್ಮಶ ಪ್ರೀತಿಯನ್ನು ತ್ಯಾಗ ಮಾಡಿದ್ದ ಆತ. ಇತ್ತ ಪ್ರಿಯತಮೆ ಬೇರೊಬ್ಬನ ಜೊತೆ ಮದುವೆಯಾಗಿದ್ದರೂ ಸಂಸಾರ ನಡೆಸಲಾಗಲಿಲ್ಲ. ಕೊನೆಗೆ ಸ್ಥಳೀಯ ಮುಖಂಡರು ಹಾಗೂ ಪೊಲೀಸರು ದೂರಾಗಿದ್ದ ಪ್ರೇಮಿಗಳನ್ನು ಒಂದುಗೂಡಿಸಿ ಮದುವೆ ಮಾಡಿಸುವ ಮೂಲಕ ಹಳಿ ತಪ್ಪಿದ ಪ್ರೇಮ ಪ್ರಕರಣವೊಂದನ್ನು ಸರಿ ದಾರಿಗೆ ತಂದಿದ್ದಾರೆ.**




**ಆ**ಕೆ ನರ್ಸಿಂಗ್ ಕೋರ್ಸ್ ಮಾಡುತ್ತಿದ್ದ ವೇಳೆ ಆತ ಪ್ರೀತ್ಸೆ... ಪ್ರೀತ್ಸೆ ಅಂತ ಅವಳ ಹಿಂದೆ ಬಿದ್ದಿದ್ದ. ಆತನ ನಿಷ್ಕಲ್ಮಶ ಪ್ರೀತಿಗೆ ಮನಸೋತ ಆಕೆಯೂ ಲವ್ ಯು ಟೂ ಎಂದಿದ್ದಳು. ನನಗೆ ನೀನು ನಿನಗೆ ನಾನು ಎಂದು ಒಬ್ಬರನ್ನೊಬ್ಬರು ಗಾಢವಾಗಿ ಪ್ರೀತಿಸಲಾರಂಭಿಸಿದರು. ಪ್ರೀತಿ ಮಿತಿ ಮೀರಿದಾಗ ಲವ್, ಸೆಕ್ಸ್, ಸುತ್ತಾಟ ಹೀಗೆ ಮುಂದುವರೆದಿತ್ತು. ಪ್ರಣಯದ ಕಾಲದಲ್ಲಿ ಆತ ತನ್ನ ಮೊಬೈಲ್‌ನಲ್ಲಿ ಒಂದಷ್ಟು ಫೋಟೋಗಳನ್ನು ಕ್ಲಿಕ್ಕಿಸಿ ಕೊಂಡಿದ್ದ. ಇವರಿಬ್ಬರ ಪ್ರೀತಿ-ಪ್ರೇಮದ ಬಗ್ಗೆ ಮನೆಯ ವರಿಗೂ ಗೊತ್ತಾಗಿತ್ತು. ಆದರೆ ಪ್ರಿಯಕರನಿಗೆ ಸಹೋದರಿ ಇದ್ದ ಕಾರಣ ಆಕೆಯ ವಿವಾಹ ಆಗುವವರೆಗೂ ಈತ ಮದುವೆ ಯಾಗುವ ಆಗಿರಲಿಲ್ಲಾ.... ಹಾಗಾಗಿ ಇವರ ಮದುವೆಗೆ ಕುಟುಂಬಸ್ಥರು ನಿರಾಕರಿಸಿದ್ದರು. ಹಾಗಾಗಿ ಆಕೆ ಪೋಷಕರು ಬೇರೊಬ್ಬನಿಗೆ ಕೊಟ್ಟು ವಿವಾಹ ಮಾಡಿದ್ದರು. ಆದರೆ ಇದನ್ನು ಅರಗಿಸಿಕೊಳ್ಳಲಾಗದ ಮಾಜಿ ಪ್ರಿಯಕರ ವಿವಾಹದ ಬಳಿಕ ಆಕೆಯ ಪ್ರೈವೇಟ್ ಫೋಟೋ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡಿ ಹಿಂಸಿಸುತ್ತಿದ್ದ. ಜೊತೆಗೆ ಆಕೆಯ ಪತಿಗೂ ವಾಟ್ಸಾಪ್ ಮಾಡಿದ್ದ. ಪತ್ನಿಯ ಹಳೆಯ ಪ್ರೇಮಸಲ್ಲಾಪ ವನ್ನು ಪ್ರಣಯದ ಫೋಟೋ ಗಳಿಂದ ತಿಳಿದು ಆಕೆಯನ್ನು ಮನೆಯಿಂದ ಹೊರ ಹಾಕಿದ್ದ.

ಇದರಿಂದ ಕಂಗಾಲಾದ ಆಕೆ ಮಾಜಿ ಪ್ರಿಯಕರನನ್ನು ಮದುವೆಯಾಗುವಂತೆ ದುಂಬಾಲು ಬಿದ್ದಳು. ಆತ ನಿನ್ನ ಪತಿಗೆ ವಿಚ್ಛೇದನ ನೀಡಿ ಬಾ ಮದುವೆಯಾಗುತ್ತೇನೆ ಎಂದಿದ್ದ. ಆದರೆ ವಿಚ್ಛೇದನದ ಬಳಿಕ ಮದುವೆ ಆಗದೇ ಪ್ರೇಯಸಿ ಜೊತೆ 10 ತಿಂಗಳ ಸಂಸಾರ ನಡೆಸಿದ್ದ. ಆಕೆ ಜೊತೆ ಲೈಂಗಿಕ ಸಂಪರ್ಕ ಬೆಳೆಸಿ ಮೂರು ಬಾರಿ ಅಬಾರ್ಷನ್ ಮಾಡಿಸಿದ್ದ. ಈ ವೇಳೆ ರಿಜಿಸ್ಟರ್ ಮ್ಯಾರೇಜ್ ಗೆ ನಿಗದಿಯಾಗಿತ್ತು. ಆದರೆ ಮ್ಯಾರೇಜ್‌ಗೆ ಬಾರದೇ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಎಸ್ಕೇಪ್ ಆಗಿದ್ದ. ಇತ್ತ ಪರಾರಿಯಾದ ಪ್ರಿಯಕರನನ್ನು ಹುಡುಕಿಕೊಡಿ ಎಂದು ನೊಂದ ಪ್ರಿಯತಮೆ ಕಣ್ಣೀರಿಡುತ್ತಾ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಳು. ನಂತರ ಏನಾಯಿತು ಯಾಕೆ ತನ್ನ ಪ್ರೀತಿಯನ್ನು ದಕ್ಕಿಸಿಕೊಂಡ ? ಮುಂದೆ ಓದಿ....

**ಕೊಳ್ಳೇಗಾಲ**

✍ ಎಸ್. ಸ್ವಾಮಿ

ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ರಾಮಾಪುರ ಸಮೀಪದ ವಡ್ಡರದೊಡ್ಡಿ ಗ್ರಾಮದ ಕ್ಲಿಂಟನ್ ಆರೋಗ್ಯ ಸ್ವಾಮಿ (25) ಹಾಗೂ ಜೋನ್ ಪ್ರೆಸಿಲ್ಲಾ (22) ಎಂಬ ಪ್ರೇಮಿಗಳು ಮತ್ತೆ ಒಂದಾಗುವ ಮೂಲಕ ಪ್ರೀತಿಗೆ ಸೋಲಿಲ್ಲ.... ಎಂಬುದನ್ನು ಸಾಬೀತು ಪಡಿಸಿದ್ದಾರೆ.



ಹೌದು ವಡ್ಡರದೊಡ್ಡಿ ಗ್ರಾಮದ ಜೋಸೆಫ್ ಅನ್ ಬಳಗನ್ ಹಾಗೂ ಅಮಲ್ ಲೋರ್ಪವ ಮೇರಿ ದಂಪತಿಗಳು ಗ್ರಾಮದಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇವರ ಮಗಳು ಜಾನ್ ಪ್ರೆಸಿಲ್ಲಾ 2021ರಲ್ಲಿ ನರ್ಸಿಂಗ್ ಕೋರ್ಸ್ ಮಾಡುವ ವೇಳೆ ಕಾರ್ಪೆಂಟರ್ ಕೆಲಸ ಮಾಡಿಕೊಂಡಿದ್ದ ಇದೇ ಗ್ರಾಮದ ಸೇತುರಾಜು ಹಾಗೂ ಪುಷ್ಪಸಗಾಯ ಮೇರಿ ದಂಪತಿಗಳ ಪುತ್ರ ಕ್ಲಿಂಟನ್ ಆರೋಗ್ಯಸ್ವಾಮಿ ಎಂಬಾತನ ಜೊತೆ ಪರಿಚಯವಾಗಿ ಸ್ನೇಹ, ಪ್ರೀತಿ ಹೀಗೆ ಇಬ್ಬರು ಸಹ ಹಲವೆಡೆ ಸುತ್ತಾಟ ನಡೆಸಿದ್ದರು. ಪ್ರೀತಿ ಹೆಸರಲ್ಲಿ ಕ್ಲಿಂಟನ್ ಹಾಗೂ ಪ್ರೆಸಿಲ್ಲಾ ಲೈಂಗಿಕ ಸಂಪರ್ಕ ಬೆಳೆಸಿ. ಲವ್, ಸೆಕ್ಸ್ ಹೀಗೆ ಮುಂದುವರೆದಿತ್ತು. ಪ್ರಣಯದ ಕಾಲದಲ್ಲಿ ಪ್ರೇಮಿ ಕ್ಲಿಂಟನ್ ತನ್ನ ಮೊಬೈಲ್‌ನಲ್ಲಿ ಒಂದಷ್ಟು ಫೋಟೋ ಗಳನ್ನು ಕ್ಲಿಕ್ಕಿಸಿ ಕೊಂಡಿದ್ದನು . ಇವರಿಬ್ಬರ ಪ್ರೀತಿ-ಪ್ರೇಮದ ಬಗ್ಗೆ ಮನೆಯವರಿಗೂ ಗೊತ್ತಾಗಿತ್ತು. ವಿಚಾರ ತಿಳಿದ ಜಾನ್ ಪ್ರೆಸಿಲ್ಲಾ ಕುಟುಂಬಸ್ಥರು ಕ್ಲಿಂಟನ್‌ನ ಮನೆಯವರಿಗೆ ವಿಚಾರ ತಿಳಿಸಿದ್ದರು. ಆದರೆ, ಕ್ಲಿಂಟನ್‌ಗೆ ಸಹೋದರಿ ಇದ್ದ ಕಾರಣ ಆಕೆಯ ವಿವಾಹ ಆಗುವವರೆಗೂ ಕ್ಲಿಂಟನ್ ಮದುವೆಯಾಗುವ ಆಗಿರಲಿಲ್ಲಾ.... ಹಾಗಾಗಿ ಇವರ ಮದುವೆಗೆ ಕುಟುಂಬಸ್ಥರು ನಿರಾಕರಿಸಿದ್ದರು.

ಕ್ಲಿಂಟನ್ ಕುಟುಂಬಸ್ಥರು ವಿವಾಹಕ್ಕೆ ನಿರಾಕರಿಸಿದ್ದ ಕಾರಣ ಆಕೆ ಪೋಷಕರು 2022ರಲ್ಲಿ ತಮಿಳುನಾಡು ಮೂಲದ ಸ್ಟೀಫನ್‌ರಾಜ್ ಎಂಬಾತನಿಗೆ ಪ್ರೆಸಿಲ್ಲಾಳನ್ನು ಕೊಟ್ಟು ವಿವಾಹ ಮಾಡಿದ್ದರು. ಆದರೆ ಇದನ್ನು ಅರಗಿಸಿಕೊಳ್ಳಲಾಗದ ಮಾಜಿ ಪ್ರಿಯಕರ ಕ್ಲಿಂಟನ್ ಪ್ರೆಸಿಲ್ಲಾಳ ವಿವಾಹದ ಬಳಿಕ ಆಕೆಯ ಪ್ರೈವೇಟ್ ಫೋಟೋ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಿ ಪ್ರೆಸಿಲ್ಲಾಳನ್ನು ಹಿಂಸಿಸುತ್ತಿದ್ದ. ಆಕೆಯ ಪತಿ ಸ್ಟೀಫನ್‌ರಾಜ್‌ಗೂ ಈ ಫೋಟೋಗಳನ್ನು ಕಳುಹಿಸಿ ಕಿರುಕುಳ ನೀಡುತ್ತಿದ್ದನು.



ಪತ್ನಿಯು ಹಳೆಯ ಪ್ರೇಮ-ಸಲ್ಲಾಪವನ್ನು ಆಕೆಯ ಮಾಜಿ ಪ್ರಿಯಕರ ಕ್ಲಿಂಟನ್ ವಾಟ್ಸಾಪ್‌ನಲ್ಲಿ ಕಳುಹಿಸಿದ್ದ ಪ್ರಣಯದ ಫೋಟೋಗಳಿಂದ ತಿಳಿದು ಆಕೆಯನ್ನು ಮನೆಯಿಂದ ಹೊರ ಹಾಕಿದ್ದ. ಇದರಿಂದ ಕಂಗಾಲಾದ ಆಕೆ ಮಾಜಿ ಪ್ರಿಯಕರನನ್ನು ಮದುವೆ ಯಾಗುವಂತೆ ದುಂಬಾಲು ಬಿದ್ದಳು. ಆತ ನಿನ್ನ ಪತಿಗೆ ವಿಚ್ಛೇದನ ನೀಡಿ ಬಾ ಮದುವೆಯಾಗುತ್ತೇನೆ ಎಂದಿದ್ದ. ಆದರೆ ವಿಚ್ಛೇದನದ ಬಳಿಕ ಮದುವೆ ಆಗದೇ ಪ್ರೇಯಸಿ ಜೊತೆ 10 ತಿಂಗಳ ಸಂಸಾರ ನಡೆಸಿದ್ದ. ಆಕೆ ಜೊತೆ ಲೈಂಗಿಕ ಸಂಪರ್ಕ ಬೆಳೆಸಿ 3 ಬಾರಿ ಅಬಾರ್ಷನ್ ಮಾಡಿಸಿದ್ದ. ಈ ವೇಳೆ ಇದೇ ಫೆ. 12ರಂದು ಕೊಳ್ಳೇಗಾಲದ ಉಪ ನೊಂದನಾಧಿಕಾರಿಗಳ ಕಚೇರಿಯಲ್ಲಿ ರಿಜಿಸ್ಟರ್ ಮ್ಯಾರೇಜ್ ಗೆ ದಿನಾಂಕ ನಿಗದಿಯಾಗಿತ್ತು ಆದರೆ ಕ್ಲಿಂಟನ್ ಮ್ಯಾರೇಜ್ ಗೆ ಬಾರದೇ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಎಸ್ಕೇಪ್ ಆಗಿದ್ದ. ಇತ್ತ ಪರಾರಿಯಾದ ಪ್ರಿಯಕರನನ್ನು ಹುಡುಕಿಕೊಡಿ ಎಂದು ನೊಂದ ಜಾನ್ ಪ್ರೆಸಿಲ್ಲಾ ಕಣ್ಣೀರಿಡುತ್ತಾ ರಾಮಾಪುರ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಳು. ಹಾಗೂ ನ್ಯಾಯಕ್ಕಾಗಿ ಮಾಧ್ಯಮಗಳ ಮುಂದೆ ಅಂಗಲಾಚಿದ್ದಳು. ಎರಡು ಬಾರಿ ರಾಮಪುರ ಠಾಣೆಯಲ್ಲಿ ಪ್ರೇಮಿಗಳನ್ನು ಕರೆಸಿ ಬುದ್ಧಿವಾದ ಹೇಳಿದ್ದಾರೆ. ಆದರೆ ಈಗಾಗಲೇ ಮದುವೆಯಾಗಿದ್ದರಿಂದ ವಿಚ್ಛೇದನ ವಿಲ್ಲದೆ ಕ್ಲಿಂಟನ್ ಆರೋಗ್ಯಸ್ವಾಮಿ ಜೋನ್ ಪ್ರೆಸಿಲ್ಲಾಳನ್ನು ಮದುವೆ ಯಾಗುವುದು ಕಾನೂನಿಗೆ ವಿರೋಧ ವಾಗಿತ್ತು. ಆದ್ದರಿಂದ ಕ್ಲಿಂಟನ್ ನಿನ್ನ ಪತಿಗೆ ವಿಚ್ಛೇದನ ನೀಡಿ ಬಾ ನಾನು ಮದ್ವೆ ಆಗುತ್ತೇನೆ ಎಂದು ಪ್ರಸಿಲ್ಲಾಳಿಗೆ ಹೇಳಿದ್ದ. ವಿಚ್ಛೇದನ ಬಳಿಕ ಮದುವೆ ಆಗದೇ ಪ್ರೇಯಸಿ ಜೊತೆ 10 ತಿಂಗಳ ಸಂಸಾರ ನಡೆಸಿದ್ದ. ಆಕೆ ಜೊತೆ ಲೈಂಗಿಕ ಸಂಪರ್ಕ ಬೆಳೆಸಿ ಮೂರು ಬಾರಿ ಅಬಾರ್ಷನ್ ಮಾಡಿಸಿದ್ದ. ಇದೆ ಫೆ.12 ರಂದು ಕೊಳ್ಳೇ ಗಾಲದಲ್ಲಿ ಕ್ಲಿಂಟನ್ ಹಾಗೂ ಆತನ ಪ್ರೇಯಸಿ ಜಾನ್ ಪ್ರೆಸಿಲ್ಲಾಳ ರಿಜಿಸ್ಟರ್ ಮ್ಯಾರೇಜ್ ಫಿಕ್ಸ್ ಆಗಿತ್ತು. ಆದರೆ, ರಿಜಿಸ್ಟರ್ ಮ್ಯಾರೇಜ್‌ಗೆ ಬಾರದೇ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಕ್ಲಿಂಟನ್ ಎಸ್ಕೇಪ್ ಆಗಿದ್ದಾನೆ. ಪರಾರಿ ಯಾದ ಕ್ಲಿಂಟನ್‌ನ ಹುಡುಕಿಕೊಡಿ ಎಂದು ನೊಂದ ಪ್ರಿಯತಮೆ ಕಣ್ಣೀರಿಡುತ್ತಾ. ಮತ್ತೊಮ್ಮೆ ರಾಮಾಪುರ ಪೊಲೀಸ್ ಠಾಣಾ ಮೆಟ್ಟಿಲೇರಿದ್ದಾಳೆ.

ಈ ವೇಳೆ ರಾಮಾಪುರ ಸರ್ಕಲ್ ಇನ್ಸ್‌ಪೆಕ್ಟರ್ ರವರು ಕ್ಲಿಂಟನ್‌ನನ್ನು ಠಾಣೆಗೆ ಕರೆಯಿಸಿ ಸ್ಥಳೀಯ ಮುಖಂಡ ರಾಮಲಿಂಗಮ್ ಹಾಗೂ ರೈತ ಮುಖಂಡರು ಗಳೊಟ್ಟಿಗೆ ಪ್ರೇಮಿಗಳಿಗೆ ಬುದ್ಧಿವಾದ ಹೇಳಿ ಮದುವೆಯಾಗಿ ಬಾಳ್ವೆ ನಡೆಸುವಂತೆ ಖಡಕ್ಕಾಗಿ ವಾರ್ನ್ ಮಾಡಿ ಮದುವೆ ನಂತರ ಠಾಣೆಗೆ ಬಂದು ಹೇಳಿಕೆ ನೀಡಿ ಎಂದು ಸೂಚಿಸಿ ದ್ದರು. ಅದರಂತೆ ಸೋಮವಾರ ಸಂಥನಪಾಳ್ಯದ ಚರ್ಚ್ ನಲ್ಲಿ ಪ್ರೇಮಿಗಳು ಮದುವೆಯಾಗಿ ನೂತನವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಅಲ್ಲಿಗೆ ಕಳೆದ ಎರಡು ವರ್ಷಗಳಿಂದ ಹಳಿತಪ್ಪಿದ್ದ ಪ್ರೇಮಾ ಪ್ರಕರಣವೊಂದು ಮದುವೆಯಲ್ಲಿ ಸುಖಾಂತ್ಯಗೊಂಡಿದೆ.

ಕ್ರೈಂ ಪ್ರಪಂಚ

# ಮರ್ಡರ್ ಸೀಕ್ರೇಟ್

ಅವಳು ಶಾಲಿನಿ ದೇವಗನ್!

ನಗರದ ಕಾಲೇಜ್‌ವೊಂದರಲ್ಲಿ ಲೆಕ್ಚರರ್ ಆಗಿರುವ ಅವಳ ಪ್ರಾಯ ಇಪ್ಪತ್ತೆಂಟು.

ಗಂಡ ದೇವಗನ್! ಬೇರೆ ರಾಜ್ಯದಲ್ಲಿ ಸರ್ಕಾರದ ಪ್ರಮುಖ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾನೆ. ಅವನು ವಾರದಲ್ಲಿ ಎರಡು ದಿವಸ ಅಂದರೆ ಶನಿವಾರ-ಭಾನುವಾರ ಬರುತ್ತಾನೆ. ಸೋಮವಾರ ಬೆಳಗ್ಗೆ ಐದು ಗಂಟೆಗೆ ಹೊರಟರೆ ತಮಿಳುನಾಡನ್ನು ಎಂಟು ಗಂಟೆ ಹೊತ್ತಿಗೆ ತಲುಪುತ್ತಾನೆ. ಶಾಲಿನಿ ವಾರದಲ್ಲಿ ಐದು ದಿವಸ ಒಬ್ಬಳೇ ಇರಲು ಸಾಧ್ಯವೆ? ಹೇಗೆ ಸಾಧ್ಯ ?

ಬಲು ಅಪರೂಪದ ಸೌಂದರ್ಯವತಿ. ಹದಿನೆಂಟರ ಪ್ರಾಯದ ಕಾಲೇಜಿನ ಯುವತಿ ರೀತಿಯಲ್ಲಿ ಮಿಂಚುತ್ತಾಳೆ. ಆಕರ್ಷಕ ರತಿ ರೂಪವತಿ.

ಅವಳ ಜೊತೆಯಾಗಿ ತಮ್ಮ ಉದಯ ಇರುತ್ತಾನೆ. ಅವನು ಸಹ ಕಾಲೇಜಿನ ಸ್ಟುಡೆಂಟ್. ಅಕ್ಕನಿಗೆ ಬಾಡಿಗಾರ್ಡ್ ಮತ್ತು ಡ್ರೈವರ್ ಆಗಿ ಇರುತ್ತಾನೆ.

ಇವಳಿಗೆ ತನ್ನ ಸೌಂದರ್ಯದ ಬಗ್ಗೆ ಹೆಮ್ಮೆ ಮತ್ತು ಮೆಚ್ಚುಗೆ ಇದೆ. ಅವಳು ಕಾಲೇಜಿಗೆ ಹೋಗುವಾಗ ಎಲ್ಲರ ಗಮನ ಸೆಳೆಯುವ ರೀತಿಯಲ್ಲಿ ಗ್ಲಾಮರಸ್ ಆಗಿ ಡ್ರೆಸ್ ಮತ್ತು ಲೈಟ್ ಆಗಿ ಮೇಕಪ್ ಮಾಡಿಕೊಳ್ಳುತ್ತಾಳೆ. ಆದರೆ ಅವಳು ಶಿಸ್ತಿನ ಹೆಣ್ಣು! ಸಹದ್ಯೋಗಿ ಲೆಕ್ಚರರ್‌ಗೆ ಆಗಲಿ ಅಥವಾ ಕಾಲೇಜಿನ ವಿದ್ಯಾರ್ಥಿಗಳಿಗೆ ಆಗಲಿ ಸಲಿಗೆ ನೀಡಿಲ್ಲ. ಹಾಗಂತ ಮುಖ ಗಂಟು ಮಾಡಿಕೊಳ್ಳುವುದಿಲ್ಲ. ಹಿತವಾಗಿ ಮತ್ತು ಮಿತವಾಗಿ ನಗುತ್ತಾ ಮಾತಾಡುತ್ತಾಳೆ. ಅವಳ ಸೌಂದರ್ಯದ ಬಗ್ಗೆ ತುಂಬಾ ಮಂದಿ ತಲೆಕೆಡಿಸಿಕೊಂಡಿದ್ದಾರೆ. ಲೆಕ್ಚರರ್‌ಗಳು ಸಹ ಅವಳ ಕಡೆ ಆಸೆಯಿಂದ ನೋಡುತ್ತಾರೆ ಮತ್ತು ಅವಳನ್ನು ಆಕರ್ಷಿಸಲು ಪ್ರಯತ್ನ ಮಾಡಿ ವಿಫಲರಾಗಿದ್ದಾರೆ.

ಗಂಡ ವಾರದಲ್ಲಿ ಐದು ದಿವಸ ಊರಲ್ಲಿ ಇರೋಲ್ಲ. ಪ್ರಾಯ ಮತ್ತು ಸೌಂದರ್ಯ ತುಂಬಿರುವ ಈ ಚೆಲುವೆ ಆಸೆ, ಬಯಕೆಗಳಿಂದ ತೀರಿಸಿಕೊಳ್ಳಲಾರದೆ ಒದ್ದಾಡುತ್ತಾಳೆ. ಟ್ರೈ ಮಾಡಿದರೆ ಸುಖದ ಹಂಬಲದಿಂದ ಬಲೆಗೆ ಬೀಳಬಹುದು ಎಂದು ಟ್ರೈ ಮಾಡಿ ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡಿದ್ದಾರೆ.

ಕಾಲೇಜಿನ ವಿದ್ಯಾರ್ಥಿಗಳು ಇವಳ ತರಗತಿಗೆ ನೂರಕ್ಕೆ ನೂರು ಭಾಗ ಹಾಜರ್ ಆಗುತ್ತಾರೆ. ಕಾರಣ ಇವಳ ಸೌಂದರ್ಯ !

ಒಂದು ಪೀರಿಯಡ್ ಪೂರ್ತಿ ಇವಳ ಚೆಲುವನ್ನು ಆರಾಧಿಸಬಹುದು. ಪ್ರತಿದಿವಸ ಬೇರೆ ಬೇರೆ ಡ್ರೆಸ್‌ಗಳಲ್ಲಿ ಬರುವ ಚೆಲುವೆ ಪಡ್ಡೆ ಯುವಕರ ನಿದ್ದೆ, ನೆಮ್ಮದಿ ಕೆಡಿಸಿದ್ದಾಳೆ.

ಅವರಲ್ಲಿ ಒಬ್ಬ ಬಾನುಚಂದ್ರ ! ಫೈನಲ್ ಈಯರ್ ಡಿಗ್ರಿ ಸ್ಟುಡೆಂಟ್. ಶಾಲಿನಿ ಮೇಡಂ ತಮ್ಮ ಉದಯ ಇವನ ಕ್ಲಾಸ್ ಮೇಟ್. ವಿಶೇಷತೆ ಅಂದರೆ ಇವಳ ಮನೆ ಇರುವ ಬೀದಿಯಲ್ಲಿ, ತುಂಬಾ ಹತ್ತಿರದಲ್ಲಿ ಬಾನುಚಂದ್ರನ ಮನೆ ಇದೆ. ಬಾನುಚಂದ್ರ ಇವಳ ಸೌಂದರ್ಯದಿಂದ ಒಂದು ರೀತಿ ಹುಚ್ಚ ಆಗಿದ್ದಾನೆ. ಈ ಚೆಲುವೆ ಗೃಹಿಣಿ. ನನಗಿಂತ ದೊಡ್ಡವಳು. ಕಾಲೇಜಿನ ಲೆಕ್ಚರರ್. ಈ ಅಂಶಗಳನ್ನು ಮರೆತಿದ್ದಾನೆ. ಕಾಲೇಜು ಮುಗಿಸಿಕೊಂಡು ಮನೆಗೆ ಬಂದರೆ, ಮಹಡಿಯಲ್ಲಿರುವ ತನ್ನ ರೂಮಿನ ಕಿಟಕಿಯ ಹತ್ತಿರ ನಿಂತು, ಪವರ್‌ಫುಲ್ ಬೈನಾಕ್ಯುಲರ್ ಮೂಲಕ ಆ ಮನೆಯ ಕಡೆ ನೋಡುತ್ತಾನೆ. ಅವಳ ಬೆಡ್‌ರೂಮಿಗೆ ನೇರವಾಗಿದೆ ಇವನು ಮಲಗುವ ರೂಮು.

ಅವಳು ಮರೆವಿನ ಕಾರಣದಿಂದ ಕಿಟಕಿ ತೆರೆದಿದ್ದರೆ ಈ ರಸಿಕನಿಗೆ ಹಬ್ಬವೋ ಹಬ್ಬ... ಮಹಾ ಹಬ್ಬ...! ಒಂದು ಸಲ ಅಂತು ಕಾಲೇಜಿನಿಂದ ಬಂದು ಸೀರೆ ಕಳಚಿ ನೈಟಿ ಧರಿಸುವಾಗ, ಬೈನಾಕ್ಯುಲರ್‌ನಿಂದ ನೋಡಿದ್ದಾನೆ. ಅಬ್ಬ... ಎಂತಹ ಸೌಂದರ್ಯವತಿ! ಏನಾದರೂ ಮಾಡಿ ಇವಳನ್ನು ಅನುಭವಿಸಲೇ ಬೇಕು. ಕಿಡ್ನಾಪ್ ಮಾಡಿ ರೇಪ್ ಮಾಡುವ ಆಲೋಚನೆ ಬಂದಿತು. ಇಲ್ಲ... ಅದು ಪ್ರಯೋಜನ ಇಲ್ಲ. ಅವಳು ಸಹಕರಿಸಬೇಕು. ರತಿಯಾಗಿ ಸಹಕರಿಸಬೇಕು. ಇವನ ಆಲೋಚನೆ, ಕಲ್ಪನೆಗೆ ಕಡಿವಾಣ ಎಲ್ಲಿದೆ? ಇಲ್ಲ... ಇಲ್ಲವೇ ಇಲ್ಲ. ಆದರೆ ಶಾಲಿನಿ ಮೇಡಂ ಬೆಂಕಿಯಂತ ಹೆಣ್ಣು. ಅವಳೆಂತಹ ಕೋಪಿಷ್ಠೆ ಮತ್ತು ಧೈರ್ಯವಂತೆ ಅಂತ ಗೊತ್ತಿದೆ. ಯಾರಾದರೂ ಚುಡಾಯಿಸಿ, ರೇಗಿಸಿದರೆ ಸರಿಯಾಗಿ ಬುದ್ಧಿ ಕಲಿಸುತ್ತಾಳೆ. ಮುಖದ ನೀರಿಳಿಸುತ್ತಾಳೆ. ಪಬ್ಲಿಕ್‌ನಲ್ಲಿ ಅವಮಾನ ಮಾಡುತ್ತಾಳೆ. ಹಾಗಾಗಿ ಅವಳ ಸೌಂದರ್ಯ ಎಂಬುದು ಬರೀ ನೋಡಿ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ.

ಬಾನುಚಂದ್ರನ ತಲೆಕೆಟ್ಟಿದೆ. ಅವಳನ್ನು ಅನುಭವಿಸದಿದ್ದರೆ ನಾನು ಹುಚ್ಚ ಆಗ್ತೀನಿ ಅಂತ ತಿಳಿದಿದೆ. ಹಾಗಾಗಿ ಅವನು ತುಂಬಾ ಆಲೋಚನೆ ಮಾಡಿದನು.

ಇವನ ಕ್ಲೋಸ್ ಫ್ರೆಂಡ್ ಜೈರಾಜ್! ಪೋಲಿ ಪಟಾಲಂ ಗುಂಪಿನವನು. ಏ... ಸರಿ ಇಲ್ಲ... ಇವರಿಬ್ಬರೂ ಸರಿ ಇಲ್ಲ ಎಂಬುದೇ ಮುಖ್ಯ !

''ಏ ಜೈರಾಜ್... ನನಗೊಂದು ಹೆಲ್ಪ್ ಮಾಡ್ತೀಯ?''

''ಖಂಡಿತಾ ಮಾಡ್ತೀನಿ. ಆದರೆ ಗ್ರಾಂಡ್ ಪಾರ್ಟಿ ಕೊಡಿಸಬೇಕು.''

''ಎರಡು ಸಲ ಕೊಡುಸ್ತೀನಿ.''

''ಗುಡ್... ವೆರಿಗುಡ್.''

''ನನಗೆ ಹೆಲ್ಪ್ ಮಾಡುವ ಮೊದಲು, ನಂತರ ಕೆಲಸ ಮುಗಿದ ಮೇಲೆ ಡಬ್ಬಲ್ ಪಾರ್ಟಿ ಕೊಡುಸ್ತೀನಿ.''

''ನಾನೇನು ಮಾಡಬೇಕು?''

●●●

ಗಂಡ ದೇವಗನ್‌ಗೆ ತಮಿಳುನಾಡಿನಿಂದ ಮಿನಿಸ್ಟರ್ ಜೊತೆ ಒಂದು ವಾರ ದೆಹಲಿಗೆ ಹೋಗಲೇಬೇಕಾದ ಅನಿವಾರ್ಯತೆ ಉಂಟಾಯಿತು. ಹಾಗಾಗಿ ಹೆಂಡತಿ ಮತ್ತು ಅವಳ ತಮ್ಮನಿಗೆ ಎಚ್ಚರಿಕೆಯಿಂದ ಇರಲು ಹೇಳಿದ್ದನು.

ಕಾಲೇಜಿನಲ್ಲಿ ಕಲ್ಚರಲ್ ಪ್ರೋಗ್ರಾಂ ಇದ್ದ ಕಾರಣದಿಂದ ಅವಳು ತಡವಾಗಿ ಮನೆಗೆ ಬಂದಳು. ಆಗ ರಾತ್ರಿ ಏಳು ಗಂಟೆ ಆಗಿತ್ತು. ಉದಯ ಮನೆಗೆ ಬಂದಿರಲಿಲ್ಲ.

ಫ್ರೆಂಡ್ಸ್ ಮನೇಲಿ ಫಂಕ್ಷನ್ ಇದೆ. ನಾನು ಬರೋದು ತಡವಾಗುತ್ತೆ. ನೀನು ಊಟ ಮಾಡಿ ಮಲಗು. ನನಗಾಗಿ ಕಾಯಬೇಡ ಎಂದು ಹೇಳಿದ್ದನು.

ಅವಳು ಅವನನ್ನು ಬೈದಿದ್ದಳು. ಬೇಗ ಮನೆಗೆ ಬಾ ಎಂದು ರೇಗಿದ್ದಳು.

ಡೋರ್‌ಲಾಕ್ ಓಪನ್ ಮಾಡಿ ಮನೆಗೆ ಬಂದಳು.

ಅವಳ ದೃಷ್ಟಿಗೆ ಕಂಡಿತು. ಕೆಸರು-ಕೊಚ್ಚೆಯ ಹೆಜ್ಜೆ ಗುರುತುಗಳು ಅಲ್ಲಲ್ಲಿ ಮೂಡಿರೋದು ಕಂಡು ಬರುತ್ತಿದೆ.

ಆಕಸ್ಮಿಕವಾಗಿ ತಿರುಗಿದಳು!

ಅಲ್ಲಿ... ಮೂಲೆಯಲ್ಲಿ ಕೆಸರು ಅಂಟಿರುವ ಚಪ್ಪಲಿಗಳಿವೆ.

ಗಂಡ ಊರಲ್ಲಿ ಇಲ್ಲ.

ಉದಯ ಮನೆಗೆ ಬಂದಿಲ್ಲ.

ಡೋರ್‌ಲಾಕ್ ಮಾಡಿಕೊಂಡು ಕಾಲೇಜಿಗೆ ಹೋಗಿದ್ದ. ಒಳಗೆ ಬಂದವರು ಯಾರು? ಅದು ಹೇಗೆ ಬಂದರು?

ಈ ಚಪ್ಪಲಿ ಯಾರದ್ದು?

ನಗರದಲ್ಲಿ ಮಾಸ್ಟರ್ ಕೀ ಬಂಚ್ ಬಳಸಿ ಕಳ್ಳತನ ಮಾಡುವ ಪ್ರಕರಣಗಳು ಸುದ್ದಿ ಮಾಧ್ಯಮಗಳಲ್ಲಿ ಬರುತ್ತಿವೆ.

ಒಂದು ವೇಳೆ ಕಳ್ಳತನ ಆಗಿರಬಹುದೆ ಎಂಬ ಅನುಮಾನದಿಂದ ರೂಮಿಗೆ ಬಂದು ಲೈಟ್ ಆನ್ ಮಾಡಿದಳು.

ಆ ದೃಶ್ಯ ಕಂಡು ಬೆಚ್ಚಿಬಿದ್ದಳು. ಕಳ್ಳತನ ಆಗಿರಲಿಲ್ಲ.

ಬೀರುವಿನ ಡೋರ್‌ಲಾಕ್ ಓಪನ್ ಆಗಿರಲಿಲ್ಲ.

ಇವಳು ಗಾಬರಿಯಾಗಲು ಕಾರಣ ಅವಳು ಕಂಡ ಆ ದೃಶ್ಯ !

ಇವಳು ಗಂಡನ ಜೊತೆ ಮಲಗುವ ಮಂಚದಲ್ಲಿ ಯಾರೋ ಮಲಗಿದ್ದಾರೆ. ಬಲಭಾಗಕ್ಕೆ ಹೊರಳಿ ಮಲಗಿರೋದ್ರಿಂದ ಯಾರು ಅಂತ ಗೊತ್ತಾಗುತ್ತಿಲ್ಲ.

ಅವಳಿಗೆ ಭಯವಾಗುತ್ತಿದೆ.

ಮಂಚದ ಹತ್ತಿರ ಹೋಗಲು ಭಯ ಆಗುತ್ತಿದೆ. ಹಾಗಂತ ನಿಮ್ಮ ಹೊತ್ತು ಸುಮ್ಮನಿರಲು ಸಾಧ್ಯ ? ಅವಳು ಧೈರ್ಯ ತಂದುಕೊಂಡು ಹತ್ತಿರ ಬಂದು, ''ಏ... ಏ... ಯಾರು... ಯಾರು ನೀನು'' ಎಂದು ಕೇಳಿದಳು.

ಉತ್ತರ ಬರಲಿಲ್ಲ.

ಮತ್ತೊಮ್ಮೆ ರೇಗುವ ರೀತಿ ಕೇಳಿದಳು.

ಪ್ರತಿಕ್ರಿಯೆ ಬರಲಿಲ್ಲ.

ಅವಳಿಗೆ ಸುಮ್ಮನಿರಲಾಗಲಿಲ್ಲ. ಹತ್ತಿರ ಬಂದು ಅವನ ಭುಜದ ಮೇಲೆ ಕೈ ಹಾಕಿ ತನ್ನ ಕಡೆ ಹೊರಳಿಸಿಕೊಂಡಳು. ಅವಳು ಬೆಚ್ಚಿಬಿದ್ದಳು. ಭಯದಿಂದ ದೂರ ಸರಿದಳು.

ಅವನು... ಅವನು... ಇವಳ ಸ್ಟುಡೆಂಟ್ ಬಾನುಚಂದ್ರ...! ಆದರೆ ಅವನು ಬದುಕಿಲ್ಲ ಎಂಬುದು ನೋಟ ಮಾತ್ರದಿಂದ ಗೊತ್ತಾಗಿದೆ. ಮುಖ, ಕತ್ತು , ಇದೆ, ತೋಳುಗಳು ಕಡು ನೀಲಿ ಬಣ್ಣದ ಛಾಯೆಯಿಂದ ಕೂಡಿದೆ. ವಿಷ ಪ್ರಯೋಗ ಆಗಿದೆ. ಅಥವಾ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿರಬಹುದು.

ವಿದ್ಯಾವಂತೆ, ಬುದ್ಧಿವಂತೆ ಮತ್ತು ಎಲ್ಲಾ ತಿಳುವಳಿಕೆ ಇರುವ ಅವಳು ಅಪ್‌ಸೆಟ್ ಆಗಿದ್ದಾಳೆ.

ರಾತ್ರಿ ಸಮಯವಾಗಿದೆ.

ಮನೇಲಿ ಒಬ್ಬಳೇ ಇದ್ದಾಳೆ.

ಬೆಡ್‌ರೂಮಲ್ಲಿ ಡೆಡ್‌ಬಾಡಿ ಇದೆ.

ಅಂದ ಮೇಲೆ ಎಂತಹವರಿಗೆ ಆಗಲಿ ಗಾಬರಿ, ಭಯ ಆಗೋದು ಸಹಜ ತಾನೆ?

ಇವನು ಬಾನುಚಂದ್ರ !

ಇದೇ ಬೀದಿಯಲ್ಲಿ ಇವನ ಮನೆ ಇದೆ. ಇಲ್ಲಿಗೆ ಹೇಗೆ ಬಂದ? ಹಾಳಾದವನು ಇಲ್ಲಿಗೆ ಯಾಕೆ ಬಂದು ಸತ್ತ ?

ಈಗ ಏನು ಮಾಡಲಿ?

ಈ ಸಾವಿನ ಪ್ರಕರಣ ಬಹಿರಂಗವಾದರೆ ರಂಪ-ರಾದ್ಧಾಂತ ಆಗುತ್ತೆ . ನನ್ನ ಮನೇಲಿ ಅನುಮಾನ ಬರುವ ರೀತಿ ಸತ್ತಿರೋದ್ರಿಂದ ಪೊಲೀಸರು ಸಹಜವಾಗಿ ನನ್ನನ್ನು ಅನುಮಾನಿಸಿ ಮೊದಲ ಆರೋಪಿ ಮಾಡ್ತಾರೆ.

ಬಾನುಚಂದ್ರ ಇವಳಿಗಾಗಿ ಹಂಬಲಿಸಿ ರೇಗಿಸಿ ಚುಡಿಯಿಸಿದ್ದ ಸನ್ನಿವೇಶದಲ್ಲಿ ಎಲ್ಲರ ಎದುರಿಗೆ ಬೈದು ಬುದ್ಧಿ ಹೇಳಿದ್ದಾಳೆ. ಪೊಲೀಸರು ಮತ್ತು ಮಾಧ್ಯಮದವರು ಇದನ್ನೇ ಮುಖ್ಯ ಕಾರಣವಾಗಿ ಪ್ರಕಟಿಸುತ್ತಾರೆ.

ನನ್ನ ಭವಿಷ್ಯ ಹಾಳಾಗುತ್ತದೆ.

ಏನು ಮಾಡಲಿ?

ಅವಳಿಗೆ ತುಂಬಾ ತಲೆ ಬಿಸಿ ಆಗಿದೆ. ಗಂಡನಿಗೆ ಫೋನ್ ಮಾಡಿದಳು ನಾಟ್ ರೀಚಬಲ್ ಬರುತ್ತಿದೆ. ದೆಹಲಿಗೆ ಮಿನಿಸ್ಟರ್ ಜೊತೆ ಕಾರ್ಯನಿಮಿತ್ತ ಹೋಗಿರೋದ್ರಿಂದ ಅವನು ಫೋನ್ ಕಾಲ್ ಅಟೆಂಡ್ ಮಾಡೋಲ್ಲ. ಏನು... ಏನು ಮಾಡಲಿ? ತಲೆಕೆಡುತ್ತಿದೆ.

ಆ ಕ್ಷಣ ಅವನು ನೆನಪಾದನು.

ತಮ್ಮ ಉದಯ...! ಅವನಿಗೆ ಫೋನ್ ಮಾಡಿದಳು. ರಿಂಗ್ ಆಗುತ್ತಿದ್ದರೂ ಸಹ ಅಟೆಂಡ್ ಮಾಡಲಿಲ್ಲ.

ಅವಳಿಗೆ ಕೋಪ ಬಂದಿದೆ.

ಎಂಜಾಯ್ ಮಾಡಲು ಫ್ರೆಂಡ್ಸ್ ಜೊತೆ ಇವತ್ತೇ ಹೋಗಿದ್ದಾನೆ. ಎಲ್ಲಿಗಾದರೂ ಹೋಗಲಿ, ಫೋನ್ ಅಟೆಂಡ್ ಮಾಡಲು ಏನಾಗಿದೆ ಅವನಿಗೆ ಎಂದು ಗೊಣಗುತ್ತಲೇ ಪುನಹ ಮಾಡಿದಳು.

ಆಗಲು ಪ್ರತಿಕ್ರಿಯೆ ಇಲ್ಲ.

ಮೆಸೇಜ್ ಮಾಡಿದಳು.

''ಡೇಂಜರಸ್ ಕಂಡೀಷನ್‌ನಲ್ಲಿ ನಾನಿದ್ದೀನಿ. ನೀನು ಈಗಲೇ ಬಾ.''

ಅವಳಿಗೆ ಒಬ್ಬಳೇ ಡೆಡ್‌ಬಾಡಿ ಇರುವ ರೂಮಿನಲ್ಲಿ ಇರಲು ಭಯವಾಯಿತು. ಅವಳು ಈಗ ಅಲ್ಲಿಂದ ಹೊರಗೆ ಬಂದಳು. ಡೈನಿಂಗ್ ಹಾಲ್ ಕಡೆ ಆಕಸ್ಮಿಕವಾಗಿ ಅವಳ ದೃಷ್ಟಿ ಹರಿಯಿತು.

ಟೇಬಲ್ ಮೇಲೆ ಜೋಡಿಸಿದ್ದ ಊಟದ ಹಾಟ್ ಬಾಕ್ಸ್‌ಗಳು ಓಪನ್ ಆಗಿದೆ. ಮತ್ತೊಂದು ಕಡೆ ತಟ್ಟೆಯಲ್ಲಿ ಸೇಬು, ಬಾಳೆಯ ಹಣ್ಣು, ಸಪೋಟ ಹಣ್ಣುಗಳಿವೆ.

ಬಲಭಾಗದಲ್ಲಿ ಚಾಕು ಇದೆ. ಹಣ್ಣನ್ನು ಕತ್ತರಿಸುವ ಚಾಕು. ಅವಳಿಗೆ ಏನೋ ಅನುಮಾನ ಬಂದು ಹತ್ತಿರ ಹೋಗಿ ನೋಡಿದಳು.

ಚಾಕುವಿನ ಬಣ್ಣ ನೀಲಿಯಾಗಿದೆ!

ಸೇಬನ್ನು ಹೆಚ್ಚಲಾಗಿದೆ. ಅರ್ಧ ಭಾಗ ಸೇಬು ಉಳಿದಿದೆ. ಅದರ ಮೇಲೆ ಸಹ ನೀಲಿ ಬಣ್ಣದ ಛಾಯೆ ಕಂಡು ಬರುತ್ತಿದೆ. ಬಾಳೆಯ ಹಣ್ಣಿನ ಸಿಪ್ಪೆ ತೆಗೆಯಲಾಗಿದೆ. ಆ ಹಣ್ಣು ಸಹ ನೀಲಿ ಬಣ್ಣದಿಂದ ಕೂಡಿದೆ. ಆ ಹಣ್ಣಿನ ಅರ್ಧ ಭಾಗ ತಿನ್ನಲಾಗಿದೆ.

ಇದೆಲ್ಲಾ ಏನು? ಬಾನುಚಂದ್ರ ಈ ಮನೆ ಒಳಗೆ ಬಂದು ಊಟ ಮಾಡಿದ್ದಾನೆ.

ಹಣ್ಣುಗಳನ್ನು ತಿಂದಿದ್ದಾನೆ.

ನಂತರ ರೂಮಿಗೆ ಹೋಗಿದ್ದಾನೆ. ವಿಷ ರಕ್ತವಾಗಿ ಪ್ರಾಣ ಸಂಕಟ ಅನುಭವಿಸಿ ಸತ್ತಿದ್ದಾನೆ.

ಇದೆಲ್ಲಾ ಏನು?

ನನ್ನ ಮನೆ ಒಳಗೆ ಬರಲು ಅವನಿಗೆ ಡೋರ್‌ಲಾಕ್ ಕೀ ಹೇಗೆ ಸಿಕ್ಕಿತು!

ಈ ಮನೆಗೆ ಮೂರು ಕೀಗಳಿವೆ.

ನನ್ನ ಹತ್ತಿರ ಒಂದು. ಮತ್ತೊಂದು ಗಂಡನ ಹತ್ತಿರ ಇನ್ನೊಂದು ಉದಯನ ಹತ್ತಿರ ಇದೆ. ಎಲ್ಲರೂ ಬೇರೆ ಬೇರೆ ಟೈಂಗೆ ಮನೆಗೆ ಬಂದು ಹೋಗಿ ಮಾಡುವುದರಿಂದ, ಒಬ್ಬರಿಗಾಗಿ ಮತ್ತೊಬ್ಬರು ಕಾಯಬಾರದು ಅಂತ ಈ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಆ ಕ್ಷಣ ಬೇರೇನೋ ಆಲೋಚನೆ ಬಂದು ಶಾಲಿನಿ ಬೆಚ್ಚಿಬಿದ್ದಳು.

ನಮ್ಮ ಮನೆಯಲ್ಲಿರುವ ಊಟ ಮತ್ತು ಹಣ್ಣುಗಳಿಗೆ ವಿಷ ಬೆರೆಸಿರೋದು ಯಾರು?

ಅವಳಿಗೆ ನಡುಕ ಉಂಟಾಗಿದೆ.

ತಂಪಿನಲ್ಲಿ ಬೆವರುತ್ತಿದ್ದಾಳೆ.

ಈಗ ಸದ್ಯಕ್ಕೆ ಈ ಮನೇಲಿರೋದು ಉದಯ ಮತ್ತು ಆನು. ಗಂಡ ದೆಹಲಿಗೆ ಹೋಗಿ ಮೂರು ದಿಧಗಳಾಗಿವೆ. ಅವರು ಇನ್ನೂ ನಾಲ್ಕು ದಿನಗಳು ಬರೋಲ್ಲ. ನಮ್ಮಿಬ್ಬರಲ್ಲಿ ಯಾರೋ ಒಬ್ಬರು ಅಥವಾ ಇಬ್ಬರೂ ಸಾಯಲಿ ಅಂತ ವಿಷವನ್ನು ಬೆರಿಸಿದ್ದಾರ?

ಉದಯ ಬೆಳಿಗ್ಗೆ ತಿಂಡಿ ತಿಂದು ಹೋದ ನಂತರ ಮನೆಗೆ ಬಂದಿಲ್ಲ. ಫ್ರೆಂಡ್ಸ್ ಮನೇಲಿ ಪಾರ್ಟಿ ಇದೆ ಅಂತ ಕಾಲೇಜ್ ಮೇಲೆ ಫ್ರೆಂಡ್ ಮನೆಗೆ ಹೋಗಿದ್ದಾನೆ. ಪಾರ್ಟಿ ಅಂದ ಮೇಲೆ ಭರ್ಜರಿ ಊಟ ಆಗುತ್ತೆ . ಒಂದು ವೇಳೆ ಉದಯ ವಿಷ ಬೆರೆಸಿರಬಹುದೆ? ಯಾಕೆ ಅಂದರೆ ಅವನ ಹತ್ತಿರ ಮನೆ ಕೀ ಇದೆ.

ಯಾವಾಗ ಬೇಕಾದರೂ ಬರಬಹುದು. ಅವನಿಗೆ ಅವಕಾಶ ಇದೆ.

ಆದರೆ ಕಾರಣ ಏನು?

ಅವನು ಚಿಕ್ಕ ಹುಡುಗನಾಗಿದ್ದಾಗ ದಿನದಿಂದ ಅವನಿಗೆ ತಾಯಿಯ ಪ್ರೀತಿ-ಮಮತೆ-ಕಾಳಜಿ ತೋರಿಸಿ ಬೆಳೆಸಿದವಳು ನಾನು. ನನ್ನ ಬಗ್ಗೆ ಅವನಿಗೆ ನನ್ನಷ್ಟೇ ಪ್ರೀತಿ, ಗೌರವ, ಕಾಳಜಿ ಇದೆ. ಅವನು ನನ್ನ ಸಾವನ್ನು ಬಯಸಿದನು. ಹಾಗಾದರೆ ಬೇರೆ ಯಾರು?

ನನ್ನ ಗಂಡ ಅಲ್ಲ!

ಅವರು ಮೂರು ದಿನಗಳಿಂದ ದೆಹಲಿಯಲ್ಲಿ ಮಿನಿಸ್ಟರ್‌ಗಳ ಜೊತೆ ಕಾರ್ಯದರ್ಶಿಯಾಗಿ, ವಿಶ್ರಾಂತಿ ಇಲ್ಲದ ರೀತಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಪ್ರತಿದಿವಸ ಮಧ್ಯಾಹ್ನ, ಸಂಜೆ ಮತ್ತು ರಾತ್ರಿ ವೇಳೆ ಸಹ ವೀಡಿಯೋ ಕಾಲ್ ಮಾಡಿ

☞ 10

## ಬೆಳಗಾವಿಯ ಅಥಣಿ ಸಿಪಿಐ ಸಂತೋಷ ಹಳ್ಳೂರ ಮತ್ತು ಸಿಬ್ಬಂದಿಗಳ ಯಶಸ್ವಿ ಕಾರ್ಯಾಚರಣೆ

# ನ್ಯಾಯಾಧೀಶರ ಮನೆ ಕಳ್ಳತನ ಮಾಡಿ ಚಿನ್ನಾಭರಣ ಕಳವು ಮಾಡಿದ್ದ ಅಂತರರಾಜ್ಯ ಖತರ್‌ನಾಕ್ ಕಳ್ಳನ ಬಂಧನ... 14.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶ

**ಮನೆಗೆ ಬೀಗ ಹಾಕಿ ನ್ಯಾಯಾಧೀಶರು ತಮ್ಮ ಕುಟುಂಬ ಸಮೇತ ಊರಿಗೆ ಹೋಗಿದ್ದರು. ಈ ಸಂದರ್ಭದಲ್ಲಿ ಅದ್ಯಾರೋ ಕಳ್ಳರು ಮನೆಯ ಬೀಗ ಮುರಿದು ಸುಮಾರು 11.40 ಲಕ್ಷ ರೂ. ಮೌಲ್ಯದ 180 ಗ್ರಾಂ ಚಿನ್ನಾಭರಣ ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದರು. ಸದರಿ ಕಳ್ಳತನವನ್ನು ಗಂಭೀರವಾಗಿ ಪರಿಗಣಿಸಿದ್ದ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಅವರ ನಿರ್ದೇಶನದಲ್ಲಿ ಸಿಪಿಐ ಸಂತೋಷ ಹಳ್ಳೂರ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದರು. ತಮ್ಮ ವಲಯದಲ್ಲಿನ ಪಿಎಸ್‌ಐಗಳಾದ ಗಿರಿಮಲ್ಲ ಉಪ್ಪಾರ, ಕುಮಾರ ಹಾಡಕರ, ಶ್ರೀಮತಿ ಜಿ.ಜಿ. ಬಿರಾದಾರ, ಪಿ. ನಾಗರಾಜ, ಸಿ.ಬಿ. ನಾಗನೂರ ಮತ್ತು ಸಿಬ್ಬಂದಿಗಳು ಸೇರಿದಂತೆ ವಿಶೇಷ ತನಿಖಾ ತಂಡವನ್ನು ರಚಿಸಿದರು. ಅಂದುಕೊಂಡಂತೆ ವಿಶೇಷ ತನಿಖಾ ತಂಡ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆಗೆ ಇಳಿದರು. ಕಳ್ಳರ ಗ್ಯಾಂಗ್‌ನ ಕಿಂಗ್‌ಪಿನ್ ಮಾತ್ರ ಸಿಕ್ಕುಬಿದ್ದು ಉಳಿದವರು ತಲೆಮರೆಸಿಕೊಂಡಿದ್ದರು. ಬಂಧಿತ ಖತರ್‌ನಾಕ್ ಕಳ್ಳನಿಂದ ನ್ಯಾಯಾಧೀಶರ ಮನೆಯಲ್ಲಿ ಕಳ್ಳತನ ಮಾಡಿದ್ದ 11.40 ಲಕ್ಷ ರೂ. ಮೌಲ್ಯದ 180 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಂಡರು. ಚಿನ್ನಾಭರಣ ಖರೀದಿಸಿದ್ದ ಮಹಿಳೆ ಮತ್ತು ಕಿಂಗ್‌ಪಿನ್ ಕಳ್ಳನನ್ನು ಬಂಧಿಸಿ ಜೈಲಿಗಟ್ಟಿರುವ ಪ್ರಕರಣ ಬೆಳಗಾವಿ ಜಿಲ್ಲೆಯ ಅಥಣಿ ಪಟ್ಟಣದಿಂದ ವರದಿಯಾಗಿದೆ.**


ಅಂತರರಾಜ್ಯ ಖತರ್‌ನಾಕ್ ಕಳ್ಳ ಅರ್ಜುನ ಅ॥ ಅರ್ಜಂಟ ನಬಿಸಾಬ ಭೋಸಲೆ

ಬೆಳಗಾವಿ
✍ ಮನ್ನಾಪೂರ

ದಿನಾಂಕ 22-12-2024ರಂದು ಅಥಣಿ ಪಟ್ಟಣದ ನ್ಯಾಯಾಧೀಶರ ಮನೆಯ ಬೀಗ ಮುರಿದು 11.40 ಲಕ್ಷ ರೂ. ಮೌಲ್ಯದ 180 ಗ್ರಾಂ ಚಿನ್ನಾಭರಣಗಳನ್ನು ಕಳ್ಳರು ಕದ್ದೊಯ್ದಿದ್ದರು. ಸದರಿ ಪ್ರಕರಣದಿಂದ ಅಥಣಿ ಪಟ್ಟಣ ಸೇರಿದಂತೆ ಸುತ್ತಮುತ್ತ ಹಳ್ಳಿಗಳಲ್ಲಿ ತೀವ್ರ ಭಯ ಹಾಗೂ ಆತಂಕ ಸೃಷ್ಟಿಯಾಗಿತ್ತು. ಸಮಾಜಘಾತಕ ಕುಳಗಳಿಗೆ ತಕ್ಕ ಶಿಕ್ಷೆ ವಿಧಿಸುವ ನ್ಯಾಯಾಧೀಶರ ಮನೆಯಲ್ಲಿ ನಡೆದ ಕಳ್ಳತನವನ್ನು ಅಥಣಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ನಿರ್ದೇಶನದಲ್ಲಿ ಧಾಡಸಿ ತನಿಖಾಧಿಕಾರಿ ಸಂತೋಷ ಹಳ್ಳೂರ, ಅಥಣಿ ವಲಯದ ಪಿಎಸ್‌ಐಗಳಾದ ಗಿರಿಮಲ್ಲ ಉಪ್ಪಾರ, ಕುಮಾರ ಹಾಡಕರ, ಶ್ರೀಮತಿ ಜಿ.ಜಿ. ಬಿರಾದಾರ, ಪಿ. ನಾಗರಾಜ, ಸಿ.ಬಿ. ನಾಗನೂರ ಮತ್ತು ಸಿಬ್ಬಂದಿಗಳು ಯಶಸ್ವಿ ಕಾರ್ಯಾಚರಣೆ ನಡೆಸಿ ಭಾರಿ ಖತರ್‌ನಾಕ್ ಕಳ್ಳರ ಕಿಂಗ್‌ಪಿನ್ ಆಗಿದ್ದ ಅಂತರರಾಜ್ಯ ಕಳ್ಳ ಅರ್ಜುನ ಅಲಿಯಾಸ್ ಅರ್ಜಂಟ್, ನಬಿಸಾಬ ಭೋಸಲೆ ಎಂಬ 'ಪಾಶಿ ಪರದಿ' ಕ್ರಿಮಿನಲ್ ಟ್ರೈಬ್ಸ್ ಜನಾಂಗದ ವೃತ್ತಿಪರ ಕಳ್ಳ. ಬಂಧಿತನಿಂದ 11.40 ಲಕ್ಷ ರೂ. ಚಿನ್ನಾಭರಣ ವಶಪಡಿಸಿಕೊಂಡು ಅಥಣಿ ಪೊಲೀಸರು ತಮ್ಮ ಕರ್ತವ್ಯ ಪ್ರಜ್ಞೆ ಮೆರೆದಿದ್ದಾರೆ. ಅದರ ಕುರಿತಾಗಿ 'ಪೊಲೀಸ್ ನ್ಯೂಸ್' ಇಲ್ಲಿ ವರದಿ ಮಾಡಿದೆ.

### ಊರಿಗೆ ಹೋದಾಗ ಕಳ್ಳತನವಾಗಿತ್ತು...

ಅಥಣಿ ಪಟ್ಟಣದ ನ್ಯಾಯಾಧೀಶರು ತಮ್ಮ ಕುಟುಂಬ ಸಮೇತ ಊರಿಗೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಅದ್ಯಾರೋ ಕಳ್ಳರು ಮನೆಯ ಬೀಗ ಮುರಿದು ಬೀರುವಿನಲ್ಲಿಟ್ಟಿದ್ದ ಸುಮಾರು 11.40 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳನ್ನು ಎಗರಿಸಿಕೊಂಡು ಸದ್ದಿಲ್ಲದೇ ಪರಾರಿ ಆಗಿದ್ದರು. ಮರಳಿ ಊರಿನಿಂದ ಬಂದಾಗಲೇ ನ್ಯಾಯಾಧೀಶರಿಗೆ ಗೊತ್ತಾಗಿತ್ತು 'ತಮ್ಮ ಮನೆಯಲ್ಲಿದ್ದ 180 ಗ್ರಾಂ ಚಿನ್ನಾಭರಣಗಳನ್ನು ಕದ್ದುಕೊಂಡು ಹೋಗಲಾಗಿದೆ ಎಂದು. ಮಾನ್ಯ ನ್ಯಾಯಾಧೀಶರಿಗೆ ಈ ಘಟನೆಯಿಂದ ಬಹಳಷ್ಟು ಬೇಸರವಾಗಿತ್ತು. ಅವರ ಕುಟುಂಬದವರಿಗೂ ತೀವ್ರ ಆತಂಕ ಉಂಟಾಗಿತ್ತು. ಇದು ನಡೆದದ್ದು ಕಳೆದ ವರ್ಷ ಡಿಸೆಂಬರ್ 22ನೇ ತಾರೀಖಿನಂದು.


### ಪೊಲೀಸರಿಗೆ ದೂರು ನೀಡಿದರು...

ನ್ಯಾಯಾಧೀಶರು ತಮ್ಮ ಮನೆಯಲ್ಲಿ 180 ಗ್ರಾಂ ಚಿನ್ನಾಭರಣಗಳು ಕಳುವಾಗಿದ್ದು, ಅದ್ಯಾರೋ ಕಳ್ಳರು ಮನೆಯ ಬೀಗ ಮುರಿದು, ಬೀರುವಿನ ಬೀಗ ಕೂಡಾ ಮುರಿದು ಈ ಕೃತ್ಯವೆಸಗಿದ್ದಾರೆ. ತಕ್ಷಣ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅಥಣಿಯ ಪೊಲೀಸ್ ಠಾಣೆಯ ಕ್ರೈಂ ವಿಭಾಗಕ್ಕೆ ದೂರು ನೀಡಿದ್ದರು. ದೂರು ಪಡೆದುಕೊಂಡ ಕ್ರೈಂ ಪಿಎಸ್‌ಐ ಪಿ. ನಾಗರಾಜ ಅವರು ತಕ್ಷಣ ವಿಷಯದ ಗಂಭೀರತೆ ಅರಿತುಕೊಂಡು ಸಿಪಿಐ ಸಂತೋಷ ಹಳ್ಳೂರ, ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಅವರ ಗಮನಕ್ಕೆ ತಂದರು. ಅವರ ನಿರ್ದೇಶನದಂತೆ ದೂರನ್ನು ದಾಖಲಿಸಿಕೊಂಡು ಮುಂದಿನ ತನಿಖೆಗೆ ಇಳಿದರು. ತಕ್ಷಣ ಘಟನಾ ಸ್ಥಳವಾದ ನ್ಯಾಯಾಧೀಶರ ಮನೆಗೆ ಸಿಪಿಐ ಸಂತೋಷ ಹಳ್ಳೂರ ತಮ್ಮ ಸಿಬ್ಬಂದಿಗಳೊಡನೆ ತೆರಳಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ಪಂಚನಾಮೆ ಕೈಗೊಂಡರು. ಅಷ್ಟರಲ್ಲಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಅವರು ಕೂಡಾ ಆಗಮಿಸಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ನಿರ್ದೇಶನ ನೀಡಿದರು.

### ಹಿರಿಯ ಅಧಿಕಾರಿಗಳ ನಿರ್ದೇಶನ...

ಸಿಪಿಐ ಸಂತೋಷ ಹಳ್ಳೂರ ಅವರು ಕಳ್ಳತನವಾಗಿದ್ದ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದರು. ತಕ್ಷಣ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಡೈನಾಮಿಕ್ ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ವಿಷಯವನ್ನು ವಿವರವಾಗಿ ತಿಳಿಸಿ ಅವರೊಂದಿಗೆ

☞ 12



ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ(ಕಾ.ಸು.) ರಾಮನಗೌಡ ಬಸರಗಿ


ಡಿವೈಎಸ್ಪಿ ಪ್ರಶಾಂತ ಮುನ್ನೋಳಿ


ಸಿಪಿಐ ಸಂತೋಷ ಹಳ್ಳೂರ


ಪಿಎಸ್‌ಐ ಗಿರಿಮಲ್ಲ ಉಪ್ಪಾರ


ಪಿಎಸ್‌ಐ ಕುಮಾರ ಹಾಡಕರ


ಪಿಎಸ್‌ಐ ಶ್ರೀಮತಿ ಜಿ.ಜಿ. ಬಿರಾದಾರ

## ಖತರ್‌ನಾಕ್ ಕಳ್ಳರ ಗುರು ಅರ್ಜುನ ಅ॥ ಅರ್ಜಂಟ್

ಅಥಣಿ ಪೊಲೀಸರು ಬಂಧಿಸಿರುವ ಖತರ್‌ನಾಕ್ ಕಳ್ಳರ ಗುರು ಅರ್ಜುನ ಅಲಿಯಾಸ್ ಅರ್ಜಂಟ್ ನಬಿಸಾಬ ಭೋಸಲೆ ಮಹಾ ಡೇಂಜರ್ ಕುಳ. ಹತ್ತಾರು ಜನ 'ಪಾಶಿ ಪರದಿ' ಜನಾಂಗದ ವೃತ್ತಿಪರ ಕಳ್ಳರ ಗುಂಪಿಗೆ ಅಕ್ಷರಶಃ ಗುರುವಾಗಿದ್ದಾನೆ. ಈತನಿಗೆ ತಂದೆ, ತಾಯಿ, ಹೆಂಡತಿ ಮಕ್ಕಳಿದ್ದಾರೆ. ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಮಿರಜ ತಾಲ್ಲೂಕಿನ ಅರಗದ ಸಮೀಪ ಚಾಬುಸಕರವಾಡಿ ಎಂಬ ಊರಿನವನು. ಈತನ ಮೇಲೆ ಬೆಳಗಾವಿ ಜಿಲ್ಲೆಯಲ್ಲಿ ಹತ್ತಾರು ಕಳ್ಳತನ ಪ್ರಕರಣಗಳಿವೆ. ಈ ಹಿಂದೆ ಅಥಣಿ, ಕಾಗವಾಡ, ಘಟಪ್ರಭಾ, ನಿಪ್ಪಾಣಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ದರೋಡೆ 1, ಸುಲಿಗೆ 1, ಮನೆಗಳ್ಳತನ 8 ಪ್ರಕರಣಗಳಲ್ಲಿ ಭಾಗಿಯಾಗಿ ಆರೋಪಿಯಾಗಿದ್ದಾನೆ.

ಬ್ರಿಟೀಷರ ಕಾಲದಿಂದ 'ಕ್ರಿಮಿನಲ್ ಟ್ರೈಬ್ಸ್' ಎಂದು ಪಾಸಿ ಪರದಿ ಜನಾಂಗ ಕುಖ್ಯಾತಿ ಪಡೆದಿದೆ. ಇವರು ಕಳ್ಳತನ, ದರೋಡೆ, ಸುಲಿಗೆ ಮಾಡುವಾಗ ಅಡ್ಡ ಬಂದರೆ ಕೊಲೆ ಮಾಡಲು ಹೇಸಲಾರರು. ಪೊಲೀಸರ ಮೇಲೂ ಹಲ್ಲೆ, ಕಲ್ಲುತೂರಾಟದಂತಹ ಕೃತ್ಯ ಮಾಡುತ್ತಾರೆ. ಕಳ್ಳರ ಗುರು ಅರ್ಜುನ ಅಲಿಯಾಸ್ ಅರ್ಜಂಟ್‌ನ ಮೇಲೆ ಬಾಗಲಕೋಟೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಸುಮಾರು 30ಕ್ಕೂ ಹೆಚ್ಚು ಪ್ರಕರಣಗಳಿವೆ. ಕರ್ನಾಟಕ-ಮಹಾರಾಷ್ಟ್ರದಲ್ಲಿ ಮೋಸ್ಟ್ ವಾಂಟೆಡ್ ಆಗಿರುವ ಖತರ್‌ನಾಕ್ ಕಳ್ಳನ ಹೆಡೆಮುರಿ ಕಟ್ಟಿದ ಅಥಣಿ ಪೊಲೀಸರಿಗೊಂದು ಸಲಾಂ. ☯

**ಜೆಸಿಬಿ ಮಾಲೀಕನೊಬ್ಬ ತನ್ನ ಬಳಿ ಕೆಲಸ ಮಾಡಿಕೊಂಡಿದ್ದ ಜೆಸಿಬಿ ಡ್ರೈವರ್‌ಗೆ ಕೆಲಸ ಮಾಡಲೆಂದು ಮುಂಗಡವಾಗಿ 1 ಲಕ್ಷ ಹಣವನ್ನು ಕೊಟ್ಟಿದ್ದು, ಡ್ರೈವರ್ ಹಣವನ್ನು ತಾನು ವಾಸವಿದ್ದ ರೂಂನಲ್ಲಿಟ್ಟಿದ್ದು, ಅದು ಒಂದೇ ರಾತ್ರಿಯಲ್ಲಿ ಕಳ್ಳತನವಾಗಿದ್ದು, ಈ ಹಣವನ್ನು ಮಾಲೀಕರೇ ತೆಗೆದುಕೊಂಡಿರಬೇಕೆಂಬ ಅನುಮಾನದಿಂದ ತಾವು ತೆಗೆದುಕೊಂಡಿರುವ ಹಣವನ್ನು ವಾಪಸ್ಸು ಕೊಡುವಂತೆ ಒತ್ತಾಯಿಸಿದನಲ್ಲದೆ, ಮಾಲೀಕರಿಗೆ ಪರಿಚಯ ಇರುವವರ ಮೂಲಕ ಫೋನ್ ಮಾಡಿಸಿ ಹಣಕ್ಕಾಗಿ ಬಲವಂತ ಪಡಿಸುತ್ತಿದ್ದನು. ಅದಕ್ಕೆ ಮಾಲೀಕರು ನೀನು ಯಾರ ಮೂಲಕ ಹೇಳಿಸಿದರೂ, ನಾನು ಮಾತ್ರ ನಿನ್ನ ಹಣವನ್ನು ತೆಗೆದುಕೊಂಡಿಲ್ಲ. ನೀನು ಇದೇ ರೀತಿ ತೊಂದರೆ ಕೊಡುತ್ತಿದ್ದರೆ ನಿನ್ನ ವಿರುದ್ಧ ಠಾಣೆಯಲ್ಲಿ ದೂರು ನೀಡಬೇಕಾಗುವುದೆಂದು ಹೇಳಿ ಎಚ್ಚರಿಕೆ ನೀಡಿದರು. ಇದರಿಂದ ಕೋಪಗೊಂಡ ಜೆಸಿಬಿ ಡ್ರೈವರ್ ಮಾಲೀಕನಿಗೊಂದು ಗತಿಕಾಣಿಸಬೇಕೆಂದು ಪ್ಲಾನ್ ಮಾಡಿಕೊಂಡು, ರಾತ್ರಿ ದ್ವಿಚಕ್ರ ವಾಹನದಲ್ಲಿ ಮನೆ ಕಡೆ ಹೊರಟಿದ್ದ ಮಾಲೀಕನನ್ನು ತಡೆದು ನಿಲ್ಲಿಸಿ, ಏಕಾಏಕಿ ಮಚ್ಚಿನಿಂದ ಅಟ್ಯಾಕ್ ಮಾಡಿ ಬರ್ಬರವಾಗಿ ಹತ್ಯೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಚಿಂತಾಮಣಿ ನಗರ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**

# ಹಣಕಾಸಿನ ವಿಚಾರಕ್ಕೆ ಜೆಸಿಬಿ ಮಾಲೀಕನ ಕೊಂದ ಡ್ರೈವರ್!


ರಾಮಸ್ವಾಮಿ ಬದುಕಿದ್ದಾಗ


ಆರೋಪಿ ನಾಗೇಶ್

**ಚಿಕ್ಕಬಳ್ಳಾಪುರ**
✍ ಕೋಲಾರ ಮಂಜು

ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ನಗರದ ಅಶ್ವಿನಿ ಬಡಾವಣೆಯ ವಾಸಿ ಜೆಸಿಬಿ ಮಾಲೀಕರಾದ ರಾಮಸ್ವಾಮಿ ಮತ್ತು ಅಂಬಿಕಾ ದಂಪತಿಗಳಿಗೆ ಇಬ್ಬರು ಮಕ್ಕಳಿರುತ್ತಾರೆ. ಒಟ್ಟು ಕುಟುಂಬದಲ್ಲಿರುವ ರಾಮಸ್ವಾಮಿರವರ ಮನೆಯಲ್ಲಿ ತಂದೆ, ತಾಯಿ ಮತ್ತು ತಂಗಿ ಹಾಗೂ ಸಹೋದರ ರಾಧ ನಾಗಭೂಷಣ್ ಮತ್ತು ಮಹನೀಯ ಮೂರ್ತಿ ಮುಂತಾದವರು ವಾಸವಾಗಿದ್ದು, ಎಲ್ಲರೂ ಜೆಸಿಬಿ ಮತ್ತು ಟಿಪ್ಪರ್‌ಗಳನ್ನು ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು. ಇವರ ಬಳಿ ಜೆಸಿಬಿ ಆಪರೇಟರ್ ಆಗಿ ನರೇಶ್ ಮತ್ತು ಟಿಪ್ಪರ್ ಚಾಲಕರಾಗಿ ರಿಯಾಜ್ ಮತ್ತು ವೆಂಕಟೇಶ್ ಮುಂತಾದವರು ಕೆಲಸ ಮಾಡಿಕೊಂಡಿರುತ್ತಾರೆ.


ಬರ್ಬರವಾಗಿ ಕೊಲೆಯಾಗಿರುವ ರಾಮಸ್ವಾಮಿ


ಈಗ್ಗೆ ಒಂದೂವರೆ ವರ್ಷಗಳ ಹಿಂದೆ ಗುಲ್ಬರ್ಗ ಮೂಲದ ನಾಗೇಶ್ ಎನ್ನುವವರು ಜೆಸಿಬಿ ರಾಮಸ್ವಾಮಿರವರ ಬಳಿಗೆ ಬಂದು ಉತ್ತರ ಕರ್ನಾಟಕದ ಕಡೆಯಲ್ಲಿ ಕೆಲಸ ಕಾರ್ಯವಿಲ್ಲದೆ ಬದುಕು ನಡೆಸುವುದು ಕಷ್ಟವಾಗಿ ಕೆಲಸ ಹುಡುಕಿಕೊಂಡು ಅಲೆಯುತ್ತಿದ್ದೇನೆ. ತಾವುಗಳು ನನಗೊಂದು ಕೆಲಸ ಕೊಡುವಂತೆ ಕೇಳಿಕೊಳ್ಳುತ್ತಾನೆ. ಆಗ ಜೆಸಿಬಿ ರಾಮಸ್ವಾಮಿರವರು ನಾಗೇಶ್‌ಗೆ ಜೆಸಿಬಿ ಆಪರೇಟರ್ ಕೆಲಸವನ್ನು ಕೊಡುತ್ತಾರೆ. ಕೆಲಸ ಮಾಡಲು ಮುಂಗಡವಾಗಿ 1 ಲಕ್ಷ ಹಾಗೂ ತಿಂಗಳಿಗೆ 30 ಸಾವಿರ ಸಂಬಳವನ್ನು ಕೊಡುತ್ತಿದ್ದರು. ನಾಗೇಶ್ ಚಿಂತಾಮಣಿ ನಗರದ ಅಶ್ವಿನಿ ಬಡಾವಣೆಯಲ್ಲಿ ರೂಂವೊಂದನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದನು. ನಾಗೇಶ್ ಕೆಲಸ ಮಾಡುತ್ತಾ ವರ್ಷಗಳು ಕಳೆಯುತ್ತಿದ್ದಂತೆ ಜೆಸಿಬಿ ರಾಮಸ್ವಾಮಿಯ ನಂಬಿಕೆಯ ಕೆಲಸಗಾರನಾಗಿದ್ದನು. ಜೊತೆಗೆ ಬೆಳಗ್ಗಿನಿಂದ ಸಂಜೆವರೆಗೂ ಜೆಸಿಬಿ ಆಪರೇಟರ್ ಆಗಿ ಹೊರಗಡೆ ಕೆಲಸಕ್ಕೆ ಹೋಗಿ ಮನೆಗೆ ರಾತ್ರಿ ಬಂದ ನಂತರ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ರಾತ್ರಿ ರೂಂಗೆ ಹೋಗುವಾಗ ರಾಮಸ್ವಾಮಿರವರ ಮನೆಯಲ್ಲಿಯೇ ಊಟ ಮಾಡಿಕೊಂಡು ಹೋಗುತ್ತಿದ್ದನು. ಈಗ್ಗೆ ಸುಮಾರು 20 ದಿನಗಳ ಹಿಂದೆ ಜೆಸಿಬಿ ಆಪರೇಟರ್ ನಾಗೇಶ್ ಕೆಲಸ ಇಲ್ಲದಿರುವಾಗ ಓಡಾಡಲು ದ್ವಿಚಕ್ರ ವಾಹನವೊಂದು ಬೇಕೆಂದು ಜೆಸಿಬಿ ಮಾಲೀಕ ರಾಮಸ್ವಾಮಿರವರನ್ನು ಕೇಳಿದ್ದು, ಕೂಡಲೇ ಬುಲೆಟ್ ವೊಂದನ್ನು ಕೊಡಿಸಿದರು. ರಾಮಸ್ವಾಮಿರವರಿಗೆ ಕೆಲಸಗಾರರನ್ನು ಕಂಡರೆ ತುಂಬಾ ಇಷ್ಟ. ಅವ ಮನೆಯಲ್ಲಿನ ಕಷ್ಟವನ್ನು ಕೇಳಿಕೊಂಡು ಅವರಿಗೆ ಹಣದ ಸಹಾಯ ಮಾಡುತ್ತಿದ್ದರು. ಅದನ್ನು ಮತ್ತೆ ವಾಪಸ್ಸು ಕೊಡುವಂತೆ ಕೇಳುವುದಾಗಿ ಅಥವಾ ತಿಂಗಳ ಸಂಬಳದಲ್ಲಿ ಹಿಡಿದುಕೊಳ್ಳುವುದಾಗಲಿ ಮಾಡುತ್ತಿರಲಿಲ್ಲ. ನಿಮಗೆ ಅನುಕೂಲವಾದಾಗ ಹಣವನ್ನು ಕೊಡುವಂತೆ ಹೇಳುತ್ತಿದ್ದರು. ಇವರ ಒಳ್ಳೆಯತನವನ್ನು ಉಪಯೋಗಿಸಿಕೊಂಡ ಕೆಲವು ಜನ ಕೆಲಸಗಾರರು ಇವರ ಬಳಿ ಹಣದ ಸಹಾಯ ಪಡೆದು ಎರಡೇ ದಿನದಲ್ಲಿ ಕೆಲಸ ಬಿಟ್ಟು ಬೇರೆಯವರ ಬಳಿ ಕೆಲಸಕ್ಕೆ ಸೇರಿಕೊಂಡಿದ್ದರು. ಇವರ ಬಗ್ಗೆ ತಿಳಿದಿದ್ದರೂ ಅವರನ್ನು ಹುಡುಕಿಕೊಂಡು ಹೋಗಿ ಹಣವನ್ನು ಕೇಳುತ್ತಿರಲಿಲ್ಲ. ಮನೆ ಮಕ್ಕಳಂತೆ ಕೆಲಸ ಮಾಡಿಕೆ ೞಂಡು ನಂಬಿಕಸ್ಥ ಕೆಲಸಗಾರರು ಏನು ಕೇಳಿದರೂ ಇಲ್ಲ ಎನ್ನದೆ ಕೊಡಿಸುತ್ತಿದ್ದರು. ಇಂತಹ ಒಳ್ಳೆಯ ಗುಣವುಳ್ಳ ಮತ್ತು ತನ್ನ ಬಳಿ ಕೆಲಸ ಮಾಡುತ್ತಿರುವ ಕೆಲಸಗಾರರನ್ನು ತನ್ನ ಒಡಹುಟ್ಟಿದವರಂತೆ ನೋಡಿಕೊಂಡಿದ್ದ ಜೆಸಿಪಿ ರಾಮಸ್ವಾಮಿರವರು ಫೆಬ್ರವರಿ 13ರಂದು ರಾತ್ರಿ ಸ್ಕೂಟಿಯಲ್ಲಿ ತಮ್ಮ ಮನೆ ಕಡೆಗೆ ಬರುತ್ತಿದ್ದಾಗ ಬರ್ಬರವಾಗಿ ಕೊಲೆಯಾಗಿ ಹೋದರು.



ಕೊಲೆಯಾದ ಸ್ಥಳ

### ಅನ್ನ ಕೊಟ್ಟ ಮಾಲೀಕನಿಗೆ ಗುನ್ನಾ

ನಾಗದೇವನಹಳ್ಳಿಯ ರಾಮಸ್ವಾಮಿ ಅಲಿಯಾಸ್ ಜೆಸಿಬಿ ರಾಮಸ್ವಾಮಿ (48)ರವರ ಮಗ ಕುಬೇರಮೂರ್ತಿ (25)ರವರು ಫೆಬ್ರವರಿ 13ರಂದು ರಾತ್ರಿ 11 ಗಂಟೆಗೆ ಚಿಂತಾಮಣಿ ನಗರ ಪೊಲೀಸ್ ಠಾಣೆಗೆ ಹಾಜರಾಗಿ ಕಳೆದ ಒಂದೂವರೆ ವರ್ಷಗಳ ಗುಲ್ಬರ್ಗಾ ಜಿಲ್ಲೆ, ಅಫ್ಜಲ್‌ಪುರ ತಾಲ್ಲೂಕಿನ ಮದರಾ (ಬಿ) ಗ್ರಾಮದ ವಾಸಿ ಲೇಟ್ ರಾಮಚಂದ್ರರವರ ಮಗ ನಾಗೇಶ್ ಅಲಿಯಾಸ್ ನಾಗಪ್ಪ (30)ರವರು ತಮ್ಮ ತಂದೆ ಬಳಿಗೆ ಬಂದು ತನ್ನ ಕಷ್ಟವನ್ನು ಹೇಳಿಕೊಂಡು ಕೆಲಸಕ್ಕೆ ಸೇರಿದರು. ದಿನಗಳು ಕಳೆಯುತ್ತಿದ್ದಂತೆ ತಂದೆಯವರ ಬಳಿ ನಂಬಿಕಸ್ಥನಂತೆ ನಡೆದುಕೊಂಡಿದ್ದನು. ಆದರೆ ಇವನು ಎರಡು ವರ್ಷಗಳ ಹಿಂದೆ ರಾಮನಗರ ಜಿಲ್ಲೆ, ಕುಂಬಳಗೋಡು ಗ್ರಾಮದಲ್ಲಿ ಕೆಲಸ ಮಾಡುತ್ತಿರುವಾಗ ವ್ಯಕ್ತಿಯೊಬ್ಬನನ್ನು ಕೊಲೆ ಮಾಡಿ ಪ್ರಮುಖ ಆರೋಪಿಯಾಗಿ ಜೈಲು ಸೇರಿ ಜಾಮೀನಿನ ಮೇಲೆ ಹೊರ ಬಂದಿರುವ ವಿಚಾರ ಗೊತ್ತಿರಲಿಲ್ಲ. ಕಳೆದ 2-3 ತಿಂಗಳ ಹಿಂದೆ ಇವನೊಬ್ಬ ಕೊಲೆಗಾರನೆಂದು ತಿಳಿಯಿತು. ಆದರೂ ಇವನನ್ನು ಕೆಲಸದಿಂದ ತೆಗೆಯಲಿಲ್ಲ. ಈಗ್ಗೆ 20 ದಿನಗಳ ಹಿಂದೆ ಬುಲೆಟ್ ಬೇಕೆಂದು ಕೇಳಿದನು. ಆಗ ನಮ್ಮ ತಂದೆ ಅಣ್ಣನ ಮಗ ಭರತ್ ಹೆಸರಿನಲ್ಲಿ ಬುಲೆಟ್ ಕೊಡಿಸಿದರು. ಬುಲೆಟ್ ಗಾಡಿ ತೆಗೆದುಕೊಟ್ಟ ಮೇಲೆ ಎರಡು ದಿನ ಕೆಲಸಕ್ಕೆ ಬಂದಿದ್ದು, ಮತ್ತೆ ಜೆಸಿಬಿ ಆಪರೇಟರ್ ಕೆಲಸಕ್ಕೆ ಬಾರದೇ ಹದಿನೈದು ದಿನಗಳ ಹಿಂದೆ ನಾಗೇಶ್ ಮನೆಗೆ ಬಂದು ನೀವು ಕೊಟ್ಟಿರುವ ಅಡ್ವಾನ್ಸ್ ಹಣವನ್ನು ತೆಗೆದುಕೊಳ್ಳಿ. ನಾನು ಇನ್ನು ಮೇಲೆ ಕೆಲಸಕ್ಕೆ ಬರುವುದಿಲ್ಲ ಎಂದು ಹೇಳಿದ್ದು, ಅದಕ್ಕೆ ನಮ್ಮ ತಂದೆ ರಾಮಸ್ವಾಮಿ ಮತ್ತು ನಮ್ಮ ಚಿಕ್ಕಪ್ಪನಾದ ನಾಗಭೂಷಣ್‌ರವರು ಹಣ ತೆದೆಗುಕೊಳ್ಳದೇ, ಹಣ ಬೇಡ, ನೀನು ಕೆಲಸಕ್ಕೆ ಬಂದರೆ ಬಾ ಇಲ್ಲದಿದ್ದರೆ ನೀನು ಎಲ್ಲಿಯಾದರೂ ಕೆಲಸ ನೋಡಿಕೋ ಎಂದು ಹೇಳಿ ಕಳುಹಿಸಿಕೊಟ್ಟರು. ಮಾರನೇಯ ದಿನ ಡ್ರೈವರ್ ನಾಗೇಶ್ ನಮ್ಮ ಮನೆಯ ಬಳಿಗೆ ಬಂದು ನನ್ನ ರೂಂನಲ್ಲಿಟ್ಟಿದ್ದ ಹಣ ಕಳ್ಳತನವಾಗಿದೆ. ನೀವು ಹಣವನ್ನು ತೆಗೆದುಕೊಂಡಿದ್ದೀರಿ ಎಂದು ಹೇಳಿದನು. ಅದಕ್ಕೆ ನಮ್ಮ ತಂದೆ ರಾಮಸ್ವಾಮಿರವರು ನನಗೆ ಗೊತ್ತಿಲ್ಲ ಎಂದು ಹೇಳಿ ಕಳುಹಿಸಿದರು. ಆದರೂ ಬಿಡದೆ ಕಳೆದ ಹತ್ತು ದಿನಗಳಿಂದ ಚಿಂತಾಮಣಿ ನಗರದಲ್ಲಿ ನಮಗೆ ಪರಿಚಯ ಇರುವವರ ಕೈಯಲ್ಲಿ ನಮ್ಮ ತಂದೆ ರಾಮಸ್ವಾಮಿರವರಿಗೆ ಫೋನ್ ಮಾಡಿಸಿ ನಾಗೇಶನ ರೂಂನಿಂದ ನೀವು ತೆಗೆದುಕೊಂಡಿರುವ 1 ಲಕ್ಷ ರೂ.ಗಳನ್ನು ಕೊಟ್ಟುಬಿಡಿ ಎಂದು ಹೇಳಿ


ಎಸ್ಪಿ ಕುಶಾಲ್ ಚೌಕ್ಸೆ


ಎಎಸ್ಪಿ ಇಮಾಮ್ ಖಾಸಿಂಸಾಬ್


ಡಿವೈಎಸ್ಪಿ ಮುರುಳಿಧರ್


ಪಿಐ ವಿಜಯಕುಮಾರ್



ಬಲವಂತಪಡಿಸುತ್ತಿದ್ದರು.

ಫೆಬ್ರವರಿ 13ರ ಸಂಜೆ ನನ್ನ ತಂದೆಗೆ ನಾಗೇಶ್ ಫೋನ್ ಮಾಡಿದ್ದಾಗ ನೀನು ಇನ್ನು ಯಾರು ಯಾರಿಗೆ ಹೇಳಬೇಕು ಹೇಳು, ಏನು ಮಾಡುತ್ತಿಯಾ ಮಾಡು ನಾನು ಮಾತ್ರ ನಿನ್ನ ಹಣವನ್ನು ತೆಗೆದುಕೊಂಡಿಲ್ಲವೆಂದು ಹೇಳಿದರಲ್ಲದೆ ನೀನು ಇದೇ ರೀತಿ ಫೋನ್ ಮಾಡಿ ತೊಂದರೆ ಕೊಡುತ್ತಿದ್ದರೆ ನಿನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಬೇಕಾಗುವುದೆಂದು ಏರುಧ್ವನಿ ಹೊತ್ತು ಇದ್ದ ನಮ್ಮ ತಂದೆ ಹೊರಗಡೆ ಸ್ವಲ್ಪ ಕೆಲಸವಿದೆ ಹೋಗಿ ಬರುವುದಾಗಿ ಹೇಳಿ ಹೋದರು. ರಾತ್ರಿ 9.15 ಗಂಟೆಯಾದರೂ ತಂದೆಯವರು ಮನೆಗೆ ಬಾರದೆ ಇದ್ದಾಗ ಫೋನ್ ಮಾಡಿದ್ದಾಗ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ನಮ್ಮ ಮನೆಯ ಸಮೀಪ ಮಾಳಪಲ್ಲಿ ರಾಮಕೃಷ್ಣರವರ ಮನೆಯ ಕಡೆಯಿಂದ ಜೋರಾದ ಕೂಗಾಟ ಹಾಗೂ ನಾಯಿಗಳು ಜೋರಾಗಿ ಕೂಗುತ್ತಿರುವ ಶಬ್ದ ಕೇಳಿ ಬರುತ್ತಿತ್ತು. ಅಲ್ಲಿ ಏನು ನಡೆಯುತ್ತಿದೆ ಎಂದು ನೋಡಲು ಹೋದಾಗ ಲೈಟ್ ಬೆಳಕಿನಲ್ಲಿ ನನ್ನ ತಂದೆ ರಾಮಸ್ವಾಮಿರವರನ್ನು ತಲೆಗೆ ಬಟ್ಟೆ ಕಟ್ಟಿದ್ದ ವ್ಯಕ್ತಿಯೊಬ್ಬ ಹೊಡೆಯುತ್ತಿದ್ದು, ಆಗ ನಾನು ಇನ್ನು ಹತ್ತಿರಕ್ಕೆ ಹೋದಾಗ ನಮ್ಮ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಜೆಸಿಬಿ ಆಪರೇಟರ್ ನಾಗೇಶ್‌ನು ಮಚ್ಚಿನಿಂದ ನಮ್ಮ ತಂದೆಯ ತಲೆಗೆ ಮನ ಬಂದಂತೆ ಕೊಚ್ಚುತ್ತಿದ್ದನು. ಆಗ ನಾನು ಹೇ ನಾಗೇಶ ಎಂದು ಕೂಗಿ ಹತ್ತಿರಕ್ಕೆ ಹೋಗುತ್ತಿದ್ದಂತೆ ಹಾಗೂ ಪಕ್ಕದ ಮನೆಯವರಾದ ನಾರಾಯಣಸ್ವಾಮಿ ಮತ್ತು ಚಿಕ್ಕ ವೆಂಕಟರಾಯಪ್ಪನವರು ಸಹ ಅಲ್ಲಿಗೆ ಬರುವುದನ್ನು ನೋಡಿ ತಕ್ಷಣ ಮಚ್ಚನ್ನು ಬಿಸಾಡಿ ದ್ವಿಚಕ್ರ ವಾಹನದಲ್ಲಿ ಹೊರಟು ಹೋದನು. ತಂದೆಯ ಕೈಗೆ, ತಲೆಗೆ, ಮುಖಕ್ಕೆ ಮಚ್ಚಿನಿಂದಕತ್ತರಿಸಿ ಗಾಯಗಳಾಗಿದ್ದು, ಸ್ಥಳದಲ್ಲಿ ಕೆಎ-07 ಹೆಚ್-9162 ಸಂಖ್ಯೆಯ ಎಲೆಕ್ಟ್ರಿಕ್ ಬೈಕ್ ಮತ್ತು ಮೊಬೈಲ್ ಫೋನ್ ಬಿದ್ದಿದ್ದು, ಕೂಡಲೇ ಆ್ಯಂಬುಲೆನ್ಸ್‌ನಲ್ಲಿ ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದು, ವೈದ್ಯರು ಪರಿಶೀಲಿಸಿ ಮೃತಪಟ್ಟಿರುವುದಾಗಿ ತಿಳಿಸಿದರು. ಡ್ರೈವರ್ ನಾಗೇಶ್‌ನ ರೂಂನಲ್ಲಿ ಕಳ್ಳತನವಾಗಿದ್ದ 1 ಲಕ್ಷ ಹಣವನ್ನು ನಮ್ಮ ಮನೆಯವರೇ ತೆಗೆದುಕೊಂಡಿರುವ ಅನುಮಾನದಿಂದ ತಂದೆಗೆ ಹಣ ಕೊಡುವಂತೆ ಪೀಡಿಸುತ್ತಿದ್ದನು. ನಮ್ಮ ತಂದೆ ಹಣ ಕೊಡದಿದ್ದಕ್ಕೆ ಕೊಲೆ ಮಾಡುವ ಉದ್ದೇಶದಿಂದ ನಮ್ಮ ತಂದೆ ಮನೆಗೆ ಬರುವುದನ್ನು ಕಾದಿದ್ದು, ಕಾಲುದಾರಿಯಲ್ಲಿ ನಮ್ಮ ತಂದೆಯ ಬೈಕನ್ನು ಅಡ್ಡಗಟ್ಟಿ ನಿಲ್ಲಿಸಿ ಮಾತನಾಡುವ ನೆಪ ಹೇಳಿ ಏಕಾಏಕಿ ಮಚ್ಚಿನಿಂದ ಹೊಡೆಯಲು ಯತ್ನಿಸಿದಾಗ ತಂದೆಯವರು ಅವನಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದ್ದು, ಅವನು ಬಿಡದೇ ಹಟ್ಟಿಸಿಕೊಂಡು ಬಂದು ಮನಬಂದಂತೆ ಮಚ್ಚಿನಿಂದ ಕೊಚ್ಚಿ ಹತ್ಯೆ ಮಾಡಿ ಪರಾರಿಯಾಗಿರುವ ಆರೋಪಿ ಗುಲ್ಬರ್ಗಾ ನಾಗೇಶ್‌ನನ್ನು ಪತ್ತೆ ಮಾಡಿ ಅವನ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕೋರಿದ ದೂರಿನ ಮೇರೆಗೆ ಠಾಣಾಧಿಕಾರಿಗಳು ದೂರು ದಾಖಲಿಸಿಕೊಂಡು ಠಾಣೆ ಮೊ. ಸಂಖ್ಯೆ 23/2025 ಕಲಂ 103(1) ಬಿಎನ್‌ಎಸ್ 2023 ರೀತ್ಯಾ ಕ್ರಮ ಕೈಗೊಂಡಿರುತ್ತಾರೆ. ಸ್ಥಳಕ್ಕೆ ಎಸ್ಪಿ ಕುಶಾಲ್ ಚೌಕ್ಸೆ, ಎಎಸ್ಪಿ ಇಮಾಮ್ ಖಾಸಿಂಸಾಬ್, ಡಿವೈಎಸ್ಪಿ ಮುರುಳಿಧರ್, ಚಿಂತಾಮಣಿಯ ಪಿಐ ವಿಜಯಕುಮಾರ್ ಮತ್ತು ಬೆರಳಚ್ಚು ತಜ್ಞರು, ಶ್ವಾನದಳ ಆಗೂ ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪರಿಶೀಲಿಸಿದ ನಂತರ ಪಂಚರಾದ ಸಂತೋಷ್‌ಕುಮಾರ್ ಮತ್ತು ಸಾಯಿಕುಮಾರ್ ಮುಂತಾದವರನ್ನು ಬರಮಾಡಿಕೊಂಡು ಸ್ಥಳ ಮತ್ತು ವಸ್ತುಗಳ ಪಂಚನಾಮೆ ನಡೆಸಿದ ಮೇಲೆ ಆಸ್ಪತ್ರೆಯಲ್ಲಿನ ವೈದ್ಯಾಧಿಕಾರಿಗಳ ಸಮ್ಮುಖದಲ್ಲಿ ಮೃತದೇಹದ ಪರೀಕ್ಷೆ ನಡೆಸಿದ ನಂತರ ಶವವನ್ನು ವಾರಸುದಾರರಿಗೆ ನೀಡಲಾಯಿತು.


ಆಸ್ಪತ್ರೆ ಶವಗಾರದಲ್ಲಿ ಮಹಜರ್ ನಡೆಸುತ್ತಿರುವ ಪೊಲೀಸರು


ಕೈ ಕಟ್ ಮಾಡಿರುವುದು


ತಲೆ, ಮುಖಕ್ಕೆ ಹೊಡೆದಿರುವುದು


ಈ ರಸ್ತೆಯಲ್ಲಿ ಕಾದು ಕುಳಿತಿದ್ದೆ ಎನ್ನುತ್ತಿರುವ ಆರೋಪಿ



ರಾಮಸ್ವಾಮಿಯ ಸ್ಕೂಟಿ


### ಹಣ ಕೊಡದಿದ್ದಕ್ಕೆ ಕೊಲೆ

ಜೆಜಿಸಿ ಮಾಲೀಕ ರಾಸ್ವಾಮಿರವರನ್ನು ಬರ್ಬರವಾಗಿ ಹತ್ಯೆ ಮಾಡಿ ಉಂಡ ಮನೆಗೆ ಕನ್ನ ಹಾಕಿ ಪರಾರಿಯಾಗಿರುವ ಆರೋಪಿ ಡ್ರೈವರ್ ನಾಗೇಶ್‌ನ ಪತ್ತೆಗಾಗಿ ಎಸ್ಪಿ ಕುಶಾಲ್ ಚೌಕ್ಸೆ ಮತ್ತು ಡಿವೈಎಸ್ಪಿ ಮುರುಳಿಧರ್‌ರವರ ಮಾರ್ಗದರ್ಶನದಲ್ಲಿ ಪಿಐ ವಿಜಯಕುಮಾರ್‌ರವರ ನೇತೃತ್ವದಲ್ಲಿ ಎಎಸ್‌ಐ ಶಂಕರ್‌ಗೌಡ, ಸಿಬ್ಬಂದಿಗಳಾದ ಮಲ್ಲಿಕಾರ್ಜುನ, ಶ್ರೀನಿವಾಸಮೂರ್ತಿ, ಲೋಕೇಶ್, ಅನಿಲ್‌ಕುಮಾರ್, ಸಿದ್ದಾರೂಢ, ಗಂಗರಾಜು ಮುಂತಾದವರ ತಂಡವನ್ನು ರಚಿಸಲಾಗಿದ್ದು, ಮೊದಲಿಗೆ ಸಾಕ್ಷಿದಾರರಾದ ಚಿಂತಾಮಣಿ ನಗರದ ಪ್ರಭಾಕರ್ ಬಡಾವಣೆಯ ವಾಸಿ ಲೇಟ್ ಹನುಮಂತರಾಯಪ್ಪನ ಮಗ ಫೈನಾನ್ಸ್ ನಡೆಸುತ್ತಿರುವ ನಾಗಭೂಷಣ್ (55), ತಾಲ್ಲೂಕಿನ ಕನ್ನಂಪಲ್ಲಿ ಗ್ರಾಮದ ಚಲಪತಿರವರ ಮಗ ಚೇತನ್‌ಕುಮಾರ್ (22), ಸೊಣ್ಣಶೆಟ್ಟಿಹಳ್ಳಿ ಗ್ರಾಮದ ನಂಜುಂಡಪ್ಪನ ಮಗ ಟಾಟಾ ಎಸಿ ವಾಹನದ ಮಾಲೀಕ ಬಾಲಕೃಷ್ಣ (47) ಮತ್ತು ಮೃತ ರಾಮಸ್ವಾಮಿರವರ ಮಗ ಕುಬೇರಮೂರ್ತಿ (25) ಮುಂತಾದವರನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದ ನಂತರ ಆರೋಪಿ ಡ್ರೈವರ್ ನಾಗೇಶನ ಬಂಧನಕ್ಕೆ ಬಲೆ ಬೀಸಿದರು.

ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಫೆಬ್ರವರಿ 15ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ಗುಲ್ಬರ್ಗ ನಗರದ ಲಾಲ್‌ಗಿರಿ ಕ್ರಾಸ್ ಬಳಿ ಆರೋಪಿ ಡ್ರೈವರ್ ನಾಗೇಶ್‌ನನ್ನು ಬಂಧಿಸಿದ ಕ್ರೈಂ ತಂಡವು ಚಿಂತಾಮಣಿ ನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ನಾನು ಗುಲ್ಬರ್ಗ ಬಿಟ್ಟು ಕೆಲಸ ಹುಡುಕಿಕೊಂಡು ಬೆಂಗಳೂರು ಸುತ್ತಮುತ್ತ ಕೆಲಸ ಮಾಡಿದ ನಂತರ ಕಳೆದ ಎರಡು ವರ್ಷಗಳ ಹಿಂದೆ ಚಿಂತಾಮಣಿಯ ರಾಮಸ್ವಾಮಿರವರ ಮನೆಗೆ ಕೆಲಸ ಕೇಳಿಕೊಂಡು ಬಂದಾಗ ನನ್ನ ಬಗ್ಗೆ ಯಾವ ವಿಚಾರವನ್ನು ಕೇಳದೆ ಕೆಲಸವನ್ನು ಕೊಟ್ಟರು. ನಾನು ಮಾಲೀಕರಿಗೆ ವಿಧೇಯನಾಗಿ ಕೆಲಸ ಮಾಡಿಕೊಂಡು ಇದ್ದೆನು. ಕಳೆದ 2-3 ತಿಂಗಳಿಂದ ನನ್ನನ್ನು ಕಳ್ಳನಂತೆ ನೋಡುತ್ತಿದ್ದರು. ನಾನು ಏನು ತಪ್ಪು ಮಾಡದಿದ್ದರೂ ನನ್ನ ಮೇಲೆ ವರಿಗೆ ಅನುಮಾನ ಬಂದಿರುವುದರಿಂದ ಇವರ ಬಳಿ ಕೆಲಸ ಮಾಡುವುದು ಸರಿ ಇಲ್ಲವೆಂದು ಅವರ ಮನೆಗೆ ಹೋಗಿ ನೀವು ಕೊಟ್ಟಿರುವ ಅಡ್ವಾನ್ಸ್ ಹಣವನ್ನು ತೆಗೆದುಕೊಳ್ಳಿ. ಇನ್ನು ಮುಂದೆ ಕೆಲಸಕ್ಕೆ ಬರುವುದಿಲ್ಲವೆಂದು ಹೇಳಿದಕ್ಕೆ ಮಾಲೀಕರಾದ ರಾಮಸ್ವಾಮಿ ಮತ್ತು ಅವರ ಸಹೋದರ ನಾಗಭೂಷಣ್‌ರವರು ಹಣವನ್ನು ತೆಗೆದುಕೊಳ್ಳದೆ ಹಣ ಬೇಡ, ನೀನು ಕೆಲಸಕ್ಕೆ ಬಂದರೆ ಬಾ, ಇಲ್ಲದಿದ್ದರೆ ಎಲ್ಲಿಯಾದರೂ ಕೆಲಸ ನೋಡಿಕೋ ಎಂದು ಕಳುಹಿಸಿಬಿಟ್ಟರು. ನಂತರ ಹಣವನ್ನು ತೆಗೆದುಕೊಂಡು ಹೋಗಿ ರೂಂನಲ್ಲಿಟ್ಟಿದ್ದೆನು. ಆ ರಾತ್ರಿಯೇ ಕಳ್ಳತನವಾಗಿದ್ದು, ಈ ಹಣವನ್ನು ರಾಮಸ್ವಾಮಿರವರೇ ತೆಗೆದುಕೊಂಡಿರಬೇಕೆಂದು ಮರುದಿನ ಅವರ ಮನೆಗೆ ಹೋಗಿ ಹಣದ ಬಗ್ಗೆ ಕೇಳಿದಕ್ಕೆ ನನಗೆ ಗೊತ್ತಿಲ್ಲವೆಂದು ಹೇಳಿದರು. ಆಗ ನಾನು ಅವರಿಗೆ ಗೊತ್ತಿರುವ ವ್ಯಕ್ತಿಗಳಿಗೆಲ್ಲ ಫೋನ್ ಮಾಡಿ ಹಣದ ವಿಚಾರವನ್ನು ತಿಳಿಸಿ ವಾಪಸ್ಸು ಕೊಡಿಸುವಂತೆ ಕೇಳಿಕೊಂಡೆನು. ಅವರು ಸಹ ಮಾಲೀಕರಿಗೆ ಫೋನ್ ಮಾಡಿ ಹಣ ಕೊಡುವಂತೆ ಹೇಳಿದ್ದಾರೆ. ಈ ವಿಚಾರವಾಗಿ ನನ್ನ ಮೇಲೆ ಕೋಪಗೊಂಡ ಮಾಲೀಕರು ನನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ಕೊಡುವ ಎಚ್ಚರಿಕೆಯನ್ನು ನೀಡಿದರು. ಇದರಿಂದ ಅವರ ಮೇಲೆ ಕೋಪ ಬಂದು ಇವರಿಗೊಂದು ಗಣೆಕಾಣಿಸಬೇಕೆಂದು ಆ ರಾತ್ರಿ 9 ಗಂಟೆ ಸಮಯದಲ್ಲಿ ಅವರು ಬರುವುದನ್ನು ಕಾದಿದ್ದು, ಗಾಡಿ ನಿಲ್ಲಿಸಿ ಮಚ್ಚಿನಿಂದ ಕೊಚ್ಚಿ ಸಾಯಿಸಿ ಅಲ್ಲಿಂದ ದ್ವಿಚಕ್ರ ವಾಹನದಲ್ಲಿ ತಾವರೆಕೆರೆ ಡಾಬಾಗೆ ಹೋಗಿ ಅಲ್ಲಿ ರಕ್ತದ ಕಲೆಯಾಗಿದ್ದ ಶರ್ಟ್‌ನ್ನು ಬಿಚ್ಚಿ ದ್ವಿಚಕ್ರ ವಾಹನವನ್ನು ತೆಗೆದುಕೊಳ್ಳುವುದಾಗಿ ಹೇಲಿ ಬಸ್ಸಿನಲ್ಲಿ ಬೆಂಗಳೂರಿಗೆ ಹೋಗಿ ಅಲ್ಲಿಂದ ಗುಲ್ಬರ್ಗಾಕ್ಕೆ ಹೊರಟು ಲಾಲ್‌ಗಿರಿ ಕ್ರಾಸ್ ಬಳಿ ಇರುವ ಅಂಗಡಿ ಬಳಿ ಇದ್ದಾಗ ಸಿಕ್ಕಿಹಾಕಿಕೊಂಡ ವಿಚಾರವನ್ನು ಹೇಳಿದನು.

ಆರೋಪಿ ನಾಗೇಶ್‌ನಿಂದ ಹೇಳಿಕೆ ಪಡೆದ ನಂತರ ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳದ ಮಹಜರ್ ನಡೆಸಿದ ಮೇಲೆ ಆರೋಪಿ ನಾಗೇಶ್ ಕೃತ್ಯಕ್ಕೆ ಉಪಯೋಗಿಸಿದ್ದ ಮಚ್ಚನ್ನು ಅಡಗಿಸಿಟ್ಟಿದ್ದ ಸ್ಥಳದಿಂದ ತೆಗೆದುಕೊಟ್ಟಿದ್ದು, ನಂತರ ತಾವರೆಕೆರೆ ಡಾಬಾಕ್ಕೆ ಕರೆದುಕೊಂಡು ಹೋಗಿ ದ್ವಿಚಕ್ರ ವಾಹನವನ್ನು ತೋರಿಸಿದ್ದು, ಗಾಡಿಯಲ್ಲಿದ್ದ ರಕ್ತದ ಕಲೆಯಾಗಿದ್ದ ಶರ್ಟ್‌ನ್ನು ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದ ಮೇಲೆ ಆರೋಪಿ ನಾಗೇಶ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಅನ್ನ ಹಾಕಿದ ಸಾಕಿದ ಧಣಿಯನ್ನು ಕೊಂದ ಪಾಪಿಯನ್ನು ಚಿಂತಾಮಣಿ ನಗರ ಠಾಣೆಯ ಪಿಐ ವಿಜಯಕುಮಾರ್ ನೇತೃತ್ವದ ಕ್ರೈಂ ತಂಡವು ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿರುವುದನ್ನು ಎಸ್ಪಿ ಕುಶಾಲ್ ಚೌಕ್ಸೆರವರು ಪ್ರಶಂಸಿಸಿ ಶ್ಲಾಘಿಸಿದ್ದಾರೆ. ಮನೆಗೆ ಆಧಾರವಾಗಿದ್ದ ಮಗ ರಾಮಸ್ವಾಮಿಯನ್ನು ಕಳೆದುಕೊಂಡ ತಂದೆ, ತಾಯಿ, ಹೆಂಡತಿ, ಮಕ್ಕಳು ಮತ್ತು ಕುಟುಂಬಸ್ಥರು ದಿಕ್ಕು ತೋಚದ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ☯


ಎಎಸ್‌ಐ ಶಂಕರ್‌ಗೌಡ


ಪಿಸಿ ಮಲ್ಲಿಕಾರ್ಜುನ್


ಕೃತ್ಯದ ಬಗ್ಗೆ ಆರೋಪಿ ಬಳಿ ವಿಚಾರಿಸುತ್ತಿರುವ ಪೊಲೀಸರು


ಕೃತ್ಯಕ್ಕೆ ಉಪಯೋಗಿಸಿದ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದಪೊಲೀಸರು


ಆರೋಪಿಯಿಂದ ರಕ್ತ ಕಲೆಯಾದ ಷರ್ಟ್‌ನ್ನು ವಶಕ್ಕೆ ಪಡೆದಪೊಲೀಸರು

6 ☜

ತೋರಿಸುತ್ತಾನೆ. ಗಂಡನನ್ನು ಅನುಮಾನಿಸಲು ಸಾಧ್ಯವಿಲ್ಲ.

ಹಾಗಾದರೆ ಬೇರೆ ಯಾರು?

ಕಾಲಿಂಗ್ ಬೆಲ್ ಶಬ್ದ ಮಾಡಿತು.

ಅವಳು ಬೆಚ್ಚಿಬಿದ್ದಳು.

ಬಂದಿರೋದು ಯಾರು?

ಉದಯ ಅಲ್ಲ. ರಾತ್ರಿ ವೇಳೆ ಬರೋದಾದ್ರೆ ನನಗೆ ಫೋನ್ ಮಾಡುತ್ತಾನೆ.

ಪುನಹ ಕಾಲಿಂಗ್ ಬೆಲ್‌ನ ಮ್ಯೂಸಿಕಲ್ ಸೌಂಡ್ ಕೇಳಿ ಬಂದಿತು.

ಅವಳು ಹಿಂಜರಿಯುತ್ತಿದ್ದಾಳೆ.

ಹೊರಗಿನಿಂದ ಧ್ವನಿ ಕೇಳಿಸಿತು.

''ಮೇಡಂ... ನಾನು ಜೈರಾಜ್. ನಿಮ್ಮ ಸ್ಟುಡೆಂಟ್ ನಿಮ್ಮ ಮನೆ ಹತ್ತಿರದಲ್ಲೇ ನಮ್ಮ ಮನೆ ಇರೋದು. ಪ್ಲೀಸ್... ಡೋರ್ ಓಪನ್ ಮಾಡಿ'' ಎಂದು ಕೂಗಿದನು.

ಅವಳು ಗಾಬರಿ, ಗೊಂದಲದಿಂದಲೇ ಚಡಪಡಿಸಿದಳು. ಅವನನ್ನು ರೇಗುವ ರೀತಿ ''ಏ ಜೈರಾಜ್... ಇಂತಹ ರಾತ್ರಿ ವೇಳೆ ಯಾಕೆ ಬಂದೆ. ನನ್ನ ನಿದ್ದೆಗೆ ಡಿಸ್ಟರ್ಬ್ ಮಾಡ್ಬೇಡ. ನಾಳೆ ಬೆಳಿಗ್ಗೆ ಬಾ.''

''ಮೇಡಂ ನೀವು ನಿದ್ದೆ ಮಾಡಿಲ್ಲ. ಇಂತಹ ಸಮಯದಲ್ಲಿ ನಿಮಗೆ ನಿದ್ದೆ ಬರಲು ಸಾಧ್ಯವೇ ಇಲ್ಲ. ನೀವು ಅಪಾಯದಲ್ಲಿದ್ದೀರ ಅಂತ ನನಗೆ ಗೊತ್ತಿದೆ. ನಾನು ಎಲ್ಲಾ ನೋಡಿದ್ದೀನಿ. ನಾನು ಬಂದಿರೋದು ನಿಮಗೆ ಹೆಲ್ಪ್ ಮಾಡಲು.''

ಅವಳು ಬೆಚ್ಚಿಬಿದ್ದಳು.

ಜೈರಾಜ್ ಸಭ್ಯ ವಿದ್ಯಾರ್ಥಿ ಅಲ್ಲ.

ಬಾನುಚಂದ್ರನ ಕ್ಲೋಸ್ ಫ್ರೆಂಡ್.

ನಾನು ಅಪಾಯದಲ್ಲಿರೋದು ಇವನಿಗೆ ಹೇಗೆ ಗೊತ್ತಾಯಿತು?

ಛೇ... ಛೇ... ಹಾಳಾದವನು ಉದಯ ಯಾಕೆ ಇನ್ನೂ ಬಂದಿಲ್ಲ ಎಂದುಕೊಳ್ಳುತ್ತಲೇ ಫ್ರಂಟ್ ಡೋರ್ ಓಪನ್ ಮಾಡಿದನು.

ಜೈರಾಜ್ ಅವಳನ್ನು ನುಂಗುವ ರೀತಿ ನೋಡಿದನು. ''ಮೇಡಂ... ನಿಮ್ಮ ಮನೇಲಿ ಕೊಲೆ ನಡೆದಿದೆ. ಬಾನುಚಂದ್ರ ಸತ್ತಿದ್ದಾನೆ. ಅವನ ಶವ ಬೆಡ್‌ರೂಮಲ್ಲಿದೆ. ನಾನು ಮನೆಯಿಂದ ಆಕಸ್ಮಿಕವಾಗಿ ಹೊರಗೆ ಬಂದಿದ್ದೆ. ನೀವು ಗಾಬರಿಯಿಂದ ಚಡಪಡಿಸುತ್ತಾ ಪರದಾಡುತ್ತಿದ್ದ ದೃಶ್ಯ ಕಂಡಿತು. ಏನೋ ಅನುಮಾನ ಬಂದು ಬೆಡ್‌ರೂಮಿನ ವಿಂಡೋ ಹತ್ತಿರ ಬಂದು ನೋಡಿದೆ. ಡೆಡ್‌ಬಾಡಿ ಕಂಡಿತು. ಸಾರಿ ಮೇಡಂ... ನೂರಾರು ವಿದ್ಯಾರ್ಥಿಗಳಿಗೆ ಪಾಠ ಹೇಳುವ ನೀವು ಕೊಲೆ ಮಾಡುತ್ತೀರ ಅಂತ ನಾನು ಅಂದುಕೊಂಡಿರಲಿಲ್ಲ. ಬ್ಯಾಡ್... ವೆರಿ ಬ್ಯಾಡ್'' ಎಂದನು.

ಅವಳು ಬೆಚ್ಚಿಬಿದ್ದಳು. ಭಯ, ಗಾಬರಿ ಉಂಟಾಯಿತು. ಸಣ್ಣಗೆ ನಡುಗುತ್ತಿದ್ದಾಳೆ.

''ಏ... ಏ... ನೀನು ಏನು ಹೇಳುತ್ತಿದ್ದೀಯ. ನಾನ್ಯಾಕೆ ಇವನನ್ನು ಕೊಲೆ ಮಾಡಲಿ?''

ಅವನು ಗಂಭೀರವಾಗಿ ''ಕಾರಣ ಇದೆ ಮೇಡಂ. ಬಾನುಚಂದ್ರನಿಗೆ ನಿಮ್ಮ ಮೇಲೆ ವಿಪರೀತ ಕ್ರೇಜ್ ಇತ್ತು. ಅವನು ನಿಮ್ಮನ್ನು ಸೆಕ್ಸ್‌ಗಾಗಿ ಕಾಡಿಸುತ್ತಿದ್ದ. ಈ ಕಾಟ ತಪ್ಪಿಸಿಕೊಳ್ಳಲು ನೀವು ಕೊಲೆ ಮಾಡಿದ್ದೀರ.''

ಅವಳು ಕೋಪದಿಂದ ''ಪ್ರತ್ಯಕ್ಷವಾಗಿ ಕಂಡು ರೀತಿ ಮಾತಾಡ್ಬೇಡ. ಅವನ ನೋಟ ಸರಿ ಇರಲಿಲ್ಲ. ಆದರೆ ಬೀದಿ ಕಾಮಣ್ಣನ ರೀತಿ ಯಾವತ್ತೂ ಸಹ ಕಾಡಿರಲಿಲ್ಲ. ಕೊಲೆ ಉದ್ದೇಶ ನನಗೆ ಇದ್ದಿದ್ದರೆ, ನನ್ನ ಮನೆಗೆ ಕರೆಸಿಕೊಂಡು ಕೊಲೆ ಮಾಡುತ್ತಿರಲಿಲ್ಲ. ಇದರಿಂದ ಪೊಲೀಸರ ಅನುಮಾನ ನನ್ನ ಮೇಲೆ ಬೀಳುತ್ತದೆ ಅಂತ ಗೊತ್ತಿದೆ'' ಎಂದಳು.

''ಈಗಲು ಅದೇ ಅನುಮಾನದ ಆರೋಪ ನಿಮ್ಮ ಮೇಲೆ ಬರುತ್ತೆ. ವಿಷ ಬೆರೆತಿರೋದು ನಿಮ್ಮ ಮನೆ ಆಹಾರದಲ್ಲಿ, ಅವನು ಯಾಕೆ, ಹೇಗೆ ಮನೆಯೊಳಗೆ ಬಂದ ಅಂತ ಪೊಲೀಸರು ಕೇಳಲ್ಲ. ಅವನು ಸತ್ತಿರೋದು ಎಲ್ಲಿ? ಸಾವಿಗೆ ಕಾರಣ ವಿಷ ಅಂತ ಗೊತ್ತಾಗುತ್ತೆ. ಆ ವಿಷ ನಿಮ್ಮ ಮನೇಲಿರೋ ಊಟ ಮತ್ತು ಹಣ್ಣುಗಳಲ್ಲಿ ಮತ್ತು ಆ ಚಾಕುವಿನ ಲೇಪನ ಆಗಿದೆ. ಸೋ... ಪೊಲೀಸರು ಮೊದಲು ನಿಮ್ಮನ್ನು ಅರೆಸ್ಟ್ ಮಾಡ್ತಾನೆ'' ಎಂದು ಡೆಡ್‌ಬಾಡಿ ಇರುವ ರೂಮಿಗೆ ಹೋದನು.

ಅವಳು ಹೆದರುತ್ತಲೇ ಅವನ ಜೊತೆ ಅಲ್ಲಿಗೆ ಹೋದಳು. ಡೆಡ್‌ಬಾಡಿ ನೋಡಿದ ನಂತರ ಜೈರಾಜ್ ''ಮೇಡಂ... ನೀವು ತುಂಬಾ ಚೆನ್ನಾಗಿ ಪಾಠ ಮಾಡುವ ಲೆಕ್ಚರರ್. ನೀವು ಕೊಲೆ ಆರೋಪದ ಮೇಲೆ ಜೈಲಿಗೆ ಹೋಗಬಾರದು. ಅದಕ್ಕೊಂದು ಪ್ಲಾನ್ ಮಾಡಿದ್ದೀನಿ'' ಎಂದನು.

ಅವಳಲ್ಲಿ ಚೈತನ್ಯ ಬಂದಿತು.

''ಏನು... ಏನದು?''

ಧ್ವನಿಯಲ್ಲಿ ಉದ್ವೇಗ, ಆತುರ ಇದೆ.

ಜೈರಾಜ್ ''ಮೇಡಂ... ಈ ಡೆಡ್‌ಬಾಡಿನ ಇಲ್ಲಿಂದ ಸಾಗಿಸಲು ನಾವು ಹೆಲ್ಪ್ ಮಾಡ್ತೀನಿ. ಕಾರಿನಲ್ಲಿ ಹಾಕಿಕೊಂಡು, ಯಾವುದಾದರೂ ನಿರ್ಜನ ಪ್ರದೇಶದಲ್ಲಿ ಎಸೆದು ಪೆಟ್ರೋಲ್ ಸುರಿದು ಬೆಂಕಿ ಹತ್ತಿಸುತ್ತೇನೆ. ವಿಷ ಬೆರೆಸಿರುವ ಹಣ್ಣುಗಳು, ಚಾಕು, ಊಟ ಎಲ್ಲವನ್ನೂ ಯಾವುದಾದರೂ ಕೆರೆ ಅಥವಾ ಹಾಳು ಬಾವಿಗೆ ಎಸೆಯುತ್ತೇನೆ. ಆಗ ಸಮಸ್ಯೆ ಬರೋಲ್ಲ'' ಎಂದನು.

ಅವಳು ಗಾಬರಿಯಿಂದ ''ಯಾರಿಗಾದರೂ ಗೊತ್ತಾದರೆ ತುಂಬಾ ತೊಂದರೆ ಆಗುತ್ತೆ. ಈ ಕೊಲೆಯ ಆರೋಪ ನಿನ್ನ ಮೇಲೆ ಸಹ ಬರುತ್ತೆ. ಜೈರಾಜ್'' ಎಂದಳು.

''ಹಾಗಂತ ಡೆಡ್‌ಬಾಡಿನ ನಿಮ್ಮ ಮನೇಲಿ ಇಟ್ಟುಕೊಳ್ತೀರ? ಆಮೇಲೆ ಪೊಲೀಸರು ನಿಮ್ಮನ್ನು ಅರೆಸ್ಟ್ ಮಾಡಿ ಎಫ್‌ಐಆರ್ ಫೈಲ್ ಮಾಡ್ತಾರೆ. ಆಮೇಲೆ ನಿಮಗೇ ತೊಂದರೆ ಆಗುತ್ತೆ'' ಎಂದನು.

ಅವಳು ಬೇರೆ ಏನೋ ಹೇಳಲು ಪ್ರಯತ್ನ ಮಾಡಿದಳು. ಆದರೆ ಅವನು ''ಮೇಡಂ... ನನ್ನ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ನಾನು ತುಂಬಾ ಎಚ್ಚರಿಕೆಯಿಂದ ಈ ಕೆಲಸ ಮಾಡ್ತೀನಿ. ನೀವು ಬೆಡ್‌ರೂಮ್‌ನಿಂದ ಡೆಡ್‌ಬಾಡಿನ ಎಳೆದು ಫ್ರಂಟ್ ಹಾಲ್‌ಗೆ ಹಾಕಿ. ಅಷ್ಟರಲ್ಲಿ ನಾನು ಚೀಲಗಳು, ಪೆಟ್ರೋಲ್ ಎಲ್ಲಾ ತಗೊಂಡು ಬರ್ತೀನಿ'' ಎಂದನು.

ಉದಯ ಇನ್ನೂ ಬಂದಿಲ್ಲ. ಗಂಡ ಬರೋಲ್ಲ.

ಮಾಡದಿರುವ ಕೊಲೆ ಆರೋಪ ಯಾಕೆ ಬಲಿಯಾಗಬೇಕು. ಹೇಗಿದ್ದರೂ ಇವನು ಹೆಲ್ಪ್ ಮಾಡ್ತೀನಿ ಅಂತ ಹೇಳುತ್ತಿದ್ದಾನೆ. ನನಗೆ ಬೇರೆ ದಾರಿ ಇಲ್ಲ. ಇವನ ಹೆಲ್ಪ್ ಪಡೆಯಲೇಬೇಕು ಎಂದುಕೊಂಡು ''ಆಗಲಿ ಜೈರಾಜ್, ನಿನ್ನ ಉಪಕಾರಕ್ಕೆ ತುಂಬಾ ಥ್ಯಾಂಕ್ಸ್'' ಎಂದು ಹೇಳಿದಳು.

ಅವನು ನಗಾಡಿದನು.

ಅವಳು ಗಲಿಬಿಲಿಗೊಂಡಳು.

''ಯಾಕೆ ನಗುತ್ತಿದ್ದೀಯ?''

''ನಾನು ಇನ್ನೂ ಉಪಕಾರ ಮಾಡಿಲ್ಲ. ಆಗಲೇ ನನಗೆ ಥ್ಯಾಂಕ್ಸ್ ಹೇಳುತ್ತಿದ್ದೀರಲ್ಲ'' ಎಂದು ನಗುತ್ತಾ ಫ್ರಂಟ್ ಡೋರ್ ಕಡೆ ಹೊರಟರು. ನಂತರ ಹಿಂತಿರುಗಿ ''ಮೇಡಂ... ಡೆಡ್‌ಬಾಡಿನ ಆ ರೂಮಿನಿಂದ ಹೊರಗೆ ಉರುಳಿಸಿ ''ನಾನು ಬೇಗ ಬರ್ತೀನಿ.''

ಅವಳೀಗ ರೂಮಿನತ್ತ ಹೊರಟಳು.

ಜೈರಾಜ್ ಫ್ರಂಟ್ ಡೋರ್ ಹತ್ತಿರ ಬಂದನು.

ಆಗ ಸನ್ನಿವೇಶ ಬದಲಾಯಿತು.

ಕಾಲಿಂಗ್ ಬೆಲ್ ಆಯಿತು.

ಮ್ಯೂಸಿಕಲ್ ಸೌಂಡ್ ಕೇಳಿ ಬರುತ್ತಿದೆ.

ರೂಮಿನತ್ತ ಹೋಗುತ್ತಿದ್ದ ಅವಳು ಅಲ್ಲೇ ನಿಂತು ಈಗ ಬಾಗಿಲಿನ ಕಡೆ ತಿರುಗಿದಳು.

ಜೈರಾಜ್ ಬೆಚ್ಚಿಬಿದ್ದನು.

ಈಗ ಬಂದಿರೋದು ಯಾರು?

ಅವನು ಚಡಪಡಿಸುತ್ತಿದ್ದಾನೆ.

ಅವಳು ಈಗ ಫ್ರಂಟ್ ಡೋರ್ ಹತ್ತಿರ ಬಂದಳು. ಅವನು ಪಿಸುಧ್ವನಿಯಲ್ಲಿ ''ಬೀಟ್ ಪೊಲೀಸರು ಬಂದಿರಬೇಕು. ಬೀದಿಯಲ್ಲಿ ತಿರುಗುತ್ತಿರುವ ಅವರಿಗೆ ಬೆಳಗುತ್ತಿರುವ ಲೈಟ್ ಕಂಡು ಅನುಮಾನ ಬಂದು ಒಳಗೆ ಬಂದಿದ್ದಾರೆ. ಮೇಡಂ... ನೀವು ಡೆಡ್‌ಬಾಡಿ ಇರೋ ರೂಮಿನ ಡೋರ್‌ಲಾಕ್ ಮಾಡಿ. ನಾನು ಎಲ್ಲಾದರೂ ಮರೆಯಾಗಿರುತ್ತೇನೆ'' ಎಂದು ಹೇಳಿದಳು.

ಫೋನ್ ಕಾಲ್ ಬಂದಿತು.

ಅವಳು ಅಟೆಂಡ್ ಮಾಡಿದಳು.

ತಮ್ಮ ಉದಯ ಫೋನ್ ಮಾಡಿದ್ದಾನೆ.

''ಏ... ಏ... ನನ್ನ ತಮ್ಮ ಬಂದಿದ್ದಾನೆ. ಅವನೇ ಫೋನ್ ಮಾಡಿರೋದು'' ಎಂದು ಹೇಳಿ ಡೋರ್ ಓಪನ್ ಮಾಡಿದ.

ಉದಯ ಎದುರಿಗೆ ನಿಂತಿರುವ ಅವರಿಬ್ಬರನ್ನು ನೋಡಿದನು.

ಅಕ್ಕ ಭೀತಳಾಗಿದ್ದಾಳೆ.

ಅವನು ಚಡಪಡಿಸುತ್ತಿದ್ದಾನೆ.

''ಅಕ್ಕ... ನಿನ್ನ ಫೋನ್ ಕಾಲ್ ಅಟೆಂಡ್ ಮಾಡಲು ಆಗಲಿಲ್ಲ. ನಿನ್ನ ಮೆಸೇಜ್ ನೋಡಿ ಗಾಬರಿ ಆಯಿತು. ಅದಕ್ಕೆ ಬೇಗ ಬಂದೆ. ಜೈರಾಜ್ ಯಾಕೆ ಬಂದಿದ್ದಾನೆ? ಈ ಮನೇಲಿ ಏನು ನಡೆದಿದೆ?''

ಅವಳು ''ಒಳಗೆ ಬಾ ಉದಯ. ಆಮೇಲೆ ಎಲ್ಲಾ ಗೊತ್ತಾಗುತ್ತೆ'' ಎಂದಳು.

ಅವನು ಜೈರಾಜ್ ಕತೆ ತೀಕ್ಷ್ಣವಾಗಿ ನೋಡಿದನು. ಅವನ ಮುಖದ ಭಾವದಿಂದ ಅವನ ಅಂತರಾಳದ ಫೀಲಿಂಗ್ ಅಗೆದು ತೆಗೆಯುವ ರೀತಿ ನೋಡುತ್ತಿದ್ದಾನೆ.

ಉದಯ ಒಳಗೆ ಬಂದು ಎಲ್ಲಾ ಕಡೆ ಸೂಕ್ಷ್ಮವಾಗಿ ನೋಡಿದನು. ಬಾಗಿಲಿನ ಹತ್ತಿರ ಕಂಡು ಬರುತ್ತಿದೆ. ಕೆಸರು-ಕೊಚ್ಚೆ ಅಂಟಿರುವ ಚಪ್ಪಲಿಗಳು.

ಸ್ವಲ್ಪ ಹೊತ್ತಿಗೆ ಮೊದಲು ಈ ಬಡಾವಣೆಯಲ್ಲಿ ಮಳೆ ಬಂದಿದ್ದರ ಪರಿಣಾಮವಾಗಿ ಎಲ್ಲಾ ಕಡೆ ಕೆಸರಾಗಿದೆ.

ಅವನು ಸೂಕ್ಷ್ಮವಾಗಿ ನೋಡುತ್ತಿರುವಾಗ ಡೈನಿಂಗ್ ಟೇಬಲ್ ಮೇಲೆ ಜೋಡಿಸಿರುವ ಊಟದ ಬಾಕ್ಸ್‌ಗಳು, ಹಣ್ಣುಗಳ ತಟ್ಟೆ ಮತ್ತು ಉದ್ದವಾದ ಚಾಕು, ಹಣ್ಣುಗಳು ಮತ್ತು ಚಾಕುವಿನ ಮೇಲೆ ನೀಲಿ ಬಣ್ಣದ ಛಾಯೆ ಇದೆ.

ಅವನು ಹತ್ತಿರ ಬಂದು ಈಗ ಚಾಕು ಎತ್ತಿಕೊಂಡು ಸೂಕ್ಷ್ಮವಾಗಿ ನೋಡಿದನು ಮತ್ತು ಪ್ರತಿಯೊಂದು ಹಣ್ಣುಗಳನ್ನು ಎತ್ತಿ ಹಿಡಿದು ಪರೀಕ್ಷೆ ಮಾಡುವ ರೀತಿ ನೋಡಿದನು.

ನಂತರ ಏನಾಯಿತು?

ಜೈರಾಜ್ ಈಗ ಶಾಲಿನಿ ಮೇಡಂಗೆ ಸಂಜ್ಞೆ ಮಾಡಿದನು. ಅವಳು ''ಉದಯ... ಅದು... ಅದು... ಈ ಮನೇಲಿ... ಕೊಲೆ... ಕೊಲೆ ನಡೆದಿದೆ'' ಎಂದು ಹೇಳಿದಳು.

''ಏನು... ಕೊಲೆನಾ?''

ಅವಳು ಸಂಕ್ಷಿಪ್ತವಾಗಿ ಎಲ್ಲಾ ವಿವರಿಸಿದ ನಂತರ ''ನಾನು ಗಾಬರಿ, ಭಯದಿಂದ ಕಂಗಾಲಾಗಿದ್ದೆ. ಜೈರಾಜ್ ಬಂದು ಹೆಲ್ಪ್ ಮಾಡುತ್ತಿದ್ದಾನೆ'' ಎಂದಳು.

ಉದಯ ''ಜೈರಾಜ್ ಕಡೆ ಅನುಮಾನದಿಂದ ನೋಡುತ್ತಾ ''ಹೆಲ್ಪ್... ಯಾವ ರೀತಿ ಹೆಲ್ಪ್'' ಎಂದು ಕೇಳಿದನು.

''ಡೆಡ್‌ಬಾಡಿ ಸಾಗಿಸಲು ಹೆಲ್ಪ್ ಮಾಡುತ್ತಾನೆ.''

''ಓ... ಹೌದಾ...''

ಜೈರಾಜ್ ''ಉದಯ... ತಡ ಮಾಡೋದು ಬೇಡ. ಮೊದಲು ಡೆಡ್‌ಬಾಡಿನ ಇಲ್ಲಿಂದ ಸಾಗಿಸೋಣ'' ಎಂದನು.

''ಆಗಲಿ ಜೈರಾಜ್. ಅದಕ್ಕೆ ಮೊದಲು ನಾನೊಂದು ಸಲ ಡೆಡ್‌ಬಾಡಿ ನೋಡ್ತೀನಿ'' ಎಂದು ಹೊರಟನು.ಯ

ಜೈರಾಜ್ ಹಿಂಬಾಲಿಸಿದನು.

ಶಾಲಿನಿ ಸಹ ಹೊರಟಳು.

ಉದಯ ತಟ್ಟನೆ ಹಿಂತಿರುಗಿ ''ನೋ... ನೋ... ನೀವ್ಯಾರು ರೂಮಿಗೆ ಬರಬೇಡಿ. ನಾನೊಬ್ಬನೆ ಹತ್ತು ನಿಮಿಷ ಪರೀಕ್ಷೆ ಮಾಡ್ತೀನಿ'' ಎಂದನು.

ಜೈರಾಜ್ ಗಾಬರಿಯಿಂದ ''ಸತ್ತಿರುವ ವ್ಯಕ್ತಿಯನ್ನು ಪರೀಕ್ಷೆ ಮಾಡುವ ಅಗತ್ಯ ಏನಿದೆ?''

''ನೀನ್ಯಾಕೆ ಇಷ್ಟೊಂದು ಆತುರ ಮಾಡ್ತೀಯ. ನನಗೆ ಹತ್ತು ನಿಮಿಷ ಟೈಂ ಕೊಡು'' ಎಂದು ಹೇಳಿ ಡೆಡ್‌ಬಾಡಿ ಇರುವ ರೂಮಿಗೆ ಹೋಗಿ ಡೋರ್‌ಲಾಕ್ ಮಾಡಿಕೊಂಡನು.

ಜೈರಾಜ್ ಪರದಾಡುತ್ತಿದ್ದಾನೆ.

ಆದರೆ ಶಾಲಿನಿ ಒಂದು ರೀತಿಯಲ್ಲಿ ಧೈರ್ಯ ಬಂದಿದೆ.

ಹತ್ತು ನಿಮಿಷ ಕಳೆಯಿತು. ಉದಯ ಹೊರಬಂದ. ಉದಯ ಮೊಬೈಲ್ ಎತ್ತಿಕೊಂಡು ಫೋನ್ ಮಾಡುತ್ತಿರೋದನ್ನ ಕಂಡು ಜೈರಾಜ್ ಗಾಬರಿಯಾಗಿ ಕೇಳಿದನು.

ಶಾಲಿನಿ ಗಾಬರಿಯಿಂದ ''ಯಾರಿಗೆ ಫೋನ್ ಮಾಡುತ್ತಿದ್ದೀಯ'' ಎಂದು ಕೇಳಿದಳು.

''ಪೊಲೀಸರಿಗೆ ಕಣಪ್ಪ.''

ಅವಳು ಗಾಬರಿಯಿಂದ ''ಏ... ನಿನಗೆ ತಲೆಕೆಟ್ಟಿದ್ಯ. ಕೊಲೆ ರಹಸ್ಯ ಬಹಿರಂಗವಾದರೆ ತಾನೇ ಜೈಲು ಶಿಕ್ಷೆ ಆಗೋದು'' ಎಂದು ಹೇಳುತ್ತಲೇ ಸರ್ರನೆ ನುಗ್ಗಿ ಜೈರಾಜ್‌ನನ್ನು ಹಿಡಿದು ಎಳೆದುಕೊಂಡು ಹೋಗಿ ಬೇರೊಂದು ರೂಮಿಗೆ ತಳ್ಳಿ ಡೋರ್ ಲಾಕ್ ಮಾಡಿಕೊಂಡನು.

ಅವಳು ಗಾಬರಿ, ಉದ್ವೇಗದಿಂದ ''ಏ... ಏ... ನಿನಗೆ ತಲೆಕೆಟ್ಟಿದ್ಯ. ಕೊಲೆ ರಹಸ್ಯ ಬಹಿರಂಗವಾದರೆ ತಾನೇ ಜೈಲು ಶಿಕ್ಷೆ ಆಗೋದು'' ಎಂದು ಹೇಳುತ್ತಲೇ ಸರ್ರನೆ ನುಗ್ಗಿ ಜೈರಾಜ್‌ನನ್ನು ಹಿಡಿದು ಎಳೆದುಕೊಂಡು ಹೋಗಿ ಬೇರೊಂದು ರೂಮಿಗೆ ತಳ್ಳಿ ಡೋರ್‌ಲಾಕ್ ಮಾಡಿಕೊಂಡನು.

ಅವಳು ಗಾಬರಿ, ಉದ್ವೇಗದಿಂದ ''ಏ... ಏ... ನೀನು... ನೀನು ಏನು ಮಾಡುತ್ತಿದ್ದೀಯ'' ಎಂದು ಕೇಳಿದಳು. ಅವನು ಬೇರೊಂದು ರೂಮಲ್ಲಿದ್ದ ಪೆಟ್ರೋಲ್ ಕ್ಯಾನ್ ಅಕ್ಕನಿಗೆ ಕೊಡುತ್ತಾ ''ಇದನ್ನು ತಗೊಂಡು ನೀನು ಹಿತ್ತಲಿಗೆ ಬಾ. ನಾನು ಡೆಡ್‌ಬಾಡಿ ತಗೊಂಡು ಬರ್ತೀನಿ. ಹಿತ್ತಲಲ್ಲಿ ಶವಕ್ಕೆ ಬೆಂಕಿ ಹಾಕೋಣ'' ಎಂದು ಉದ್ದೇಶಪೂರ್ವಕವಾಗಿ ಜೋರಾಗಿ ಹೇಳಿದನು.

ಸಂದೇಶ ಬದಲಾಯಿತು!

ರೂಮಿನ ಬಾಗಿಲು ದಡಾಲನೆ ತೆರೆದುಕೊಂಡಿತು. ಅವನು... ಅಂದರೆ ಬಾನುಚಂದ್ರ ಗೂಳಿಯ ರೀತಿ ನುಗ್ಗುತ್ತಾ ತಪ್ಪಿಸಿಕೊಂಡು ಓಡುತ್ತಿರುವಾಗಲೇ ಉದಯ ಅವನ ಕಡೆ ನುಗ್ಗಿ, ಗಾಳಿಯಲ್ಲಿ ರಿವ್ವನೆ ತೂರಿಕೊಂಡು ಹೋಗಿ, ಮುಂದೆ ಓಡುತ್ತರುವ ಅವನ ಬೆನ್ನಿಗೆ ಬಲವಾಗಿ ಜಾಡಿಸಿದನು.

●●●

ಬಾನುಚಂದ್ರ-ಜೈರಾಜ್‌ನನ್ನು ಹಗ್ಗದಿಂದ ಬಂಧಿಸಲಾಗಿದೆ. ಶಾಲಿನಿಗೆ ಆಘಾತವಾಗಿದೆ.

ಉದಯ ''ನಾನು ಒಳಗೆ ಬಂದ ಕೂಡಲೇ ಜೈರಾಜ್ ಗಾಬರಿಯಾಗಿದ್ದನ್ನು ಮತ್ತು ಉದ್ವಿಗ್ನವಾಗಿದ್ದನ್ನು ಗಮನಿಸಿದೆ. ಆಗಲೇ ಅನುಮಾನ ಬಂತು. ಡೈನಿಂಗ್ ಟೇಬಲ್ ಮೇಲೆ ಇದ್ದ ಹಣ್ಣುಗಳಿಗೆ, ಚಾಕು ಮತ್ತು ಬಾನುಚಂದ್ರ ತನ್ನ ಮುಖ ಮೈ ತುಂಬಾ ನೀಲಿ ಬಣ್ಣದ **(X-0 Mant Paint)** ಉಪಯೋಗಿಸಿದ್ದಾರೆ. ಇದು ವಿಷದ ಛಾಯೆಯನ್ನು ಪ್ರತಿಫಲಿಸುತ್ತದೆ. ಆದರೆ ಚಾಕು ಮತ್ತು ಹಣ್ಣಿನ ಮೇಲೆ, ಬಾನುಚಂದ್ರನ ಮೈಮೇಲೆ ನೀಲಿ ಬಣ್ಣದ ಪುಡಿ ಅಂಟಿರೋದು ನನ್ನ ಗಮನಕ್ಕೆ ಬಂತು.''

''ಇದು ವಿಷ ಅಲ್ಲ ಅಂತ ಖಾತ್ರಿಯಾಯಿತು. ಅದು ಅಲ್ಲದೆ ಶವದ ರೀತಿ ಮಲಗಿದ್ದ ಆ ರೂಮಲ್ಲಿ ಹತ್ತು ನಿಮಿಷಗಳ ಕಾಲ ಇದ್ದೆ. ಎಷ್ಟು ಹೊತ್ತು ಉಸಿರು ಕಟ್ಟಿ ಸೇರಿ ಸಾವಿನ ನಾಟಕ ಆಡಿದ್ದಾರೆ'' ಎಂದು ಅವರಿಬ್ಬರಿಗೆ ರಕ್ತ ಬರುವ ರೀತಿ ಚಚ್ಚಿದನು.

ಸತ್ಯ ಹೊರ ಬಂದಿತು.

ಶಾಲಿನಿ ಮೇಡಂ ಮೇಲೆ ಇಬ್ಬರಿಗೂ ಆಸೆ ಇತ್ತು. ಕೊಲೆ ಡ್ರಾಮ ಆಡಿ ವೀಡಿಯೋ ಕವರೇಜ್ ಮಾಡಿ ಬ್ಲಾಕ್‌ಮೇಲ್ ಮಾಡಿ ಹೆದರಿಸುತ್ತಾ ಅವಳನ್ನು ಅನುಭವಿಸಲು ಈ ನಾಟಕ ಆಡಿದ್ದರು.

ಒಂದು ತಿಂಗಳು ಮೇಲೆ ಏಳಬಾರದು ಆ ರೀತಿಯಲ್ಲಿ ಉದಯ ಅವರ ಬಾಡಿ ರಿಪೇರಿ ಮಾಡಿದ್ದನು. ಶಾಲಿನಿ ಎಚ್ಚರಿಸಿದ್ದಳು. 'ಉದಯ ಈ ಪ್ರಕರಣ ಬಹಿರಂಗ ಆಗಬಾರದು.''

☯

### ಬೆಳಗಾವಿ : ಅಬಕಾರಿ ಅಧೀಕ್ಷಕ ವಿಜಯಕುಮಾರ ಹಿರೇಮಠ ನೇತೃತ್ವದ ಕಾರ್ಯಾಚರಣೆ

# ಹುಬ್ಬಳ್ಳಿಯ ನಕಲಿ ಮದ್ಯ ತಯಾರಿಕೆ ಅಡ್ಡೆ ಮೇಲೆ ಮಿಂಚಿನ ದಾಳಿ ಇಬ್ಬರು ಆರೋಪಿಗಳ ಬಂಧನ : 5 ಲಕ್ಷ ರೂ. ಮೌಲ್ಯದ ಸ್ವತ್ತು ವಶಕ್ಕೆ


**ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯ ಕೂಗಳತೆಯಲ್ಲಿ ಭಬ್ಬಿಯಿಂದ ಬಮ್ಮಸಮುದ್ರದ ದಾರಿಯ ತೋಟದ ಮನೆಯಲ್ಲಿ ಅದ್ಯಾರಿಗೂ ಗೊತ್ತಾಗದಂತೆ ಅತ್ಯಂತ ವ್ಯವಸ್ಥಿತವಾಗಿ ನಕಲಿ ಮದ್ಯ ತಯಾರಿಕಾ ಅಡ್ಡೆಯೊಂದು ನಡೆಯುತ್ತಿತ್ತು. ಖಚಿತ ಮಾಹಿತಿ ಆಧರಿಸಿ ಬೆಳಗಾವಿ ಕೇಂದ್ರ ಸ್ಥಾನದ ಅಬಕಾರಿ ಅಪರ ಆಯುಕ್ತರಾದ (ಅಪರಾಧ) ಡಾ. ವೈ. ಮಂಜುನಾಥ, ಜಂಟಿ ಆಯುಕ್ತರಾದ ಎಫ್.ಹೆಚ್. ಚಲುವಾದಿ, ಧಾರವಾಡ ಜಿಲ್ಲೆಯ ಉಪ ಆಯುಕ್ತರಾದ ರಮೇಶಕುಮಾರ ನಿರ್ದೇಶನದಲ್ಲಿ ಕಾರ್ಯಾಚರಣೆಗೆ ಸ್ಕೆಚ್ ರೂಪಿಸಲಾಯಿತು. ಬೆಳಗಾವಿಯ ಜಂಟಿ ಆಯುಕ್ತರ ಕಚೇರಿಯ ಚತುರ ಮತ್ತು ಧಾಡಸಿ ಅಧೀಕ್ಷಕರಾದ ವಿಜಯಕುಮಾರ ಹಿರೇಮಠ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್‌ಗಳಾದ ಬಸವರಾಜ ಮುಡಶಿ, ರವಿ ಹೊಸಳ್ಳಿ, ಲಿಂಗರಾಜು (ಧಾರವಾಡ) ಮತ್ತು ಸಿಬ್ಬಂದಿಗಳ ವಿಶೇಷ ತಂಡವನ್ನು ರಚಿಸಲಾಯಿತು. ಅಧೀಕ್ಷಕ ವಿಜಯಕುಮಾರ ನೇತೃತ್ವದ ತಂಡವು ನಕಲಿ ಮದ್ಯ ತಯಾರಿಕಾ ಅಡ್ಡೆಯ ಮೇಲೆ ಮಿಂಚಿನ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸುವುದರ ಜತೆಗೆ ಲಕ್ಷಾಂತರ ರೂ.ಗಳ ನಕಲಿ ಮದ್ಯ ಮತ್ತು ಅದಕ್ಕೆ ಬಳಸುವ ಪರಿಕರಗಳು ಸೇರಿ ಒಟ್ಟು 5 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಂಡ ಪ್ರಕರಣ ಇದಾಗಿದೆ.**



ನಕಲಿ ಮದ್ಯ ತಯಾರಿಸುತ್ತಿದ್ದ ಹುಬ್ಬಳ್ಳಿ ಮೂಲದ ಆರೋಪಿಗಳಾದ ಸಂದೀಪ ಮತ್ತು ಅಮೃತ

ಮೈ ಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದ ಐನಾತಿಗಳು ತಕ್ಷಣ ಶ್ರೀಮಂತರಾಗುವ ಹುಚ್ಚು ಇತ್ತೀಚಿಗೆ ಯುವ ಜನಾಂಗದಲ್ಲಿ ಹೆಚ್ಚುತ್ತಿದೆ. ತಾವು ಮಾಡುವ ಕೃತ್ಯ ಕಾನೂನುಬಾಹಿರ ಮತ್ತು ಸಮಾಜ ವಿದ್ರೋಹ ಚಟುವಟಿಕೆ. ಇದರಿಂದ ಮುಂದೆ ನಮಗೆ ತೊಂದರೆ ತಪ್ಪಿದ್ದಲ್ಲ ಎಂದು ಗೊತ್ತಿದ್ದರೂ ಕೂಡಾ ಮತ್ತೆ ಇಂತಹ ಮನೆಹಾಳ ಕಸುಬಿಗೆ ಕೈ ಹಾಕಿ ಕಂಬಿಯ ಹಿಂದೆ ಸೇರಿ ತಂಗಳು ಮುರಿಯುತ್ತ ಬಿದ್ದುಕೊಳ್ಳುವುದಂತೂ ಗ್ಯಾರಂಟಿ.

ಇದಕ್ಕೆ ಜೀವಂತ ನಿದರ್ಶನವೆಂಬಂತೆ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಮೂಲದ ಕ್ರಿಮಿನಲ್‌ಗಳಾದ ಸಂದೀಪ ಮತ್ತು ಅಮೃತ ಇಬ್ಬರೂ ಇಂದು ಬೆಳಗಾವಿಯ ಅಬಕಾರಿ ಟಫ್‌ಕಾಫ್‌ಗಳ ಕೈಯಲ್ಲಿ ಸಿಕ್ಕು ಇನ್ನಿಲ್ಲದಂತೆ ಒದ್ದಾಡುತ್ತಿದ್ದಾರೆ. ಇವರಿಗೆಲ್ಲ ಕಿಂಗ್‌ಪಿನ್ ಎನಿಸಿಕೊಂಡ ಹರಾಮಿ ವಿನಾಯಕ ತಲೆಮರೆಸಿಕೊಂಡು ಅಂಡಲೆಯುತ್ತಿದ್ದಾನೆ. ಅಷ್ಟಕ್ಕೂ ಇವರು ಮಾಡುವ ಅಕ್ರಮ ದಂಧೆ ಕೇಳಿದರೆ ಬೆಚ್ಚಿಬೀಳುತ್ತೀರಿ. ಸರಕಾರದ ಯಾವುದೇ ಅನುಮತಿಯಿಲ್ಲದೆ ವಿವಿಧ ಕಂಪನಿಯ ನಕಲಿ ಮದ್ಯ ತಯಾರಿಕೆ ಅಡ್ಡೆಯೊಂದನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿದ್ದರು.



ಅಬಕಾರಿ ಅಪರ ಆಯುಕ್ತರು ಡಾ. ವೈ. ಮಂಜುನಾಥ



ಅಬಕಾರಿ ಜಂಟಿ ಆಯುಕ್ತರು ಎಫ್.ಹೆಚ್. ಚಲವಾದಿ



ಅಬಕಾರಿ ಉಪ ಆಯುಕ್ತ ರಮೇಶಕುಮಾರ (ಧಾರವಾಡ)



ಅಬಕಾರಿ ಅಧೀಕ್ಷಕ ವಿಜಯಕುಮಾರ ಹಿರೇಮಠ

ಅದು ಕೂಗಳತೆಯ ದೂರದ ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ.

**ನಕಲಿ ಮದ್ಯ ತಯಾರಿಕೆ ಅಡ್ಡೆ...**

ಇಂದು ಸರಕಾರ ಮೇಲಿಂದ ಮೇಲೆ ಮದ್ಯಗಳ ಮೇಲಿನ ದರಗಳನ್ನು ಏರಿಸುತ್ತಲಿದೆ. ಇದನ್ನೇ ಗಮನದಲ್ಲಿ ಇರಿಸಿಕೊಂಡು ತಮಗಿರುವ ನಕಲಿ ಮದ್ಯ ತಯಾರಿಕೆಯ ಜ್ಞಾನವನ್ನು ಉಪಯೋಗಿಸಿಕೊಂಡು ನಕಲಿ ಮದ್ಯ ತಯಾರಿಸಿ ತಕ್ಷಣ ಹಣ ಮಾಡಬೇಕೆಂದು ದುರಾಸೆಯಿಂದ ಹುಬ್ಬಳ್ಳಿ ಮೂಲದ ವಿನಾಯಕ ಎಂಬ ವಂಚಕನು ತನ್ನೊಂದಿಗೆ ಸಂದೀಪ ಮತ್ತು ಅಮೃತ ಎಂಬಿಬ್ಬರು ಪಳಗಿದ ಕ್ರಿಮಿನಲ್‌ಗಳನ್ನು ಸೇರಿಸಿಕೊಂಡು ತಣ್ಣಗೆ ತನ್ನ ಅಕ್ರಮ ದಂಧೆಗೆ ಮುಹೂರ್ತವಿಟ್ಟನು. ಇದಕ್ಕೆ ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯ ಕೂಗಳತೆ ದೂರದಲ್ಲಿರುವ ಭಬ್ಬಿ ಗ್ರಾಮದ ಬಮ್ಮಸಮುದ್ರದ ರಸ್ತೆಗೆ ಹೊಂದಿಕೊಂಡಿರುವ ತೋಟದ ಮನೆಯೊಂದನ್ನು ಆಯ್ಕೆ ಮಾಡಿಕೊಂಡರು.

**ಬೆಳಗಾವಿ**
✍ ಮನ್ನಾಪೂರ


ತೋಟದ ಮನೆಯ ಯಜಮಾನಿ ಆಗಿದ್ದ ಹೆಣ್ಣುಮಗಳಿಗೆ ಪುಸಲಾಯಿಸಿ ಸುಳ್ಳು ಹೇಳಿ 'ನಾವು ಗೊಬ್ಬರದ ಅಂಗಡಿಯೊಂದನ್ನು ನಡೆಸುತ್ತೇವೆ. ನಿಮ್ಮ ತೋಟದ ಮನೆಗೆ ಹೆಚ್ಚಿನ ಬಾಡಿಗೆಯನ್ನು ಕೊಡುತ್ತೇವೆ ಎಂದಿದ್ದರು' ವಂಚಕರು. ಹೆಚ್ಚಿನ ಬಾಡಿಗೆಗೆ ಜೋತು ಬಿದ್ದ ವೃದ್ಧೆ ಹಿಂದು-ಮುಂದೆ ನೋಡದೆ ತನ್ನ ಮನೆ ಬಾಡಿಗೆಗೆ ನೀಡಿಬಿಟ್ಟಳು. ಅನಾಯಾಸವಾಗಿ ತೋಟದ ಮನೆ ಸಿಕ್ಕ ಮೇಲೆ ಅಲ್ಲಿ ತ್ವರಿತವಾಗಿ ನಕಲಿ ಮದ್ಯ ತಯಾರಿಸಲು ಅದ್ಯಾರಿಗೂ ಗೊತ್ತಾಗದ ರೀತಿಯಲ್ಲಿ ಆರಂಭಿಸಿಬಿಟ್ಟರು.

**1 ತಿಂಗಳ ಹಿಂದಷ್ಟೆ ಆರಂಭಿಸಿದ್ದರು...**

ಕಳೆದ ಒಂದು ತಿಂಗಳ ಹಿಂದಷ್ಟೇ ಬಮ್ಮಸಮುದ್ರದ ರಸ್ತೆಗೆ ಹೊಂದಿಕೊಂಡಿರುವ ತೋಟದ ಮನೆಯಲ್ಲಿ ಮೂರು ಜನ ಐನಾತಿಗಳು ಸೇರಿಕೊಂಡು ನಕಲಿ ಮದ್ಯ ತಯಾರಿಸಲು ಆರಂಭಿಸಿದ್ದರು. ಆರಂಭದಲ್ಲಿ 'ಇಂಪೀರಿಯಲ್ ಬ್ಲೂ' 'ಡಿಎಸ್‌ಪಿ ಬ್ಲ್ಯಾಕ್' ಎರಡು ಕಂಪನಿಗಳ ನಕಲಿ ಮದ್ಯ ತಯಾರಿಸಿ ಕ್ವಾರ್ಟರ್ ಮತ್ತು ಫುಲ್ ಬಾಟಲ್‌ಗಳಲ್ಲಿ ತುಂಬಿ ಧಾರವಾಡ, ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಅಗ್ಗದರದಲ್ಲಿ ಅನಧಿಕೃತ ಮಾರಟಗಾರರಿಗೆ ಸರಬರಾಜು ಮಾಡಲು ಆರಂಭಿಸಿದ್ದರು. ಇವರ ಅಕ್ರಮ ದಂಧೆ ಪೊಲೀಸರ ಕಣ್ಣಿಗೆ ಅದ್ದೇಗೆ ಬಿಳಲಿಲ್ಲ ಎಂಬುದು ಆಶ್ಚರ್ಯವಾಗಿದೆ. ನಕಲಿ ಮದ್ಯ ತಯಾರಿಕೆ ಜಾಲದಲ್ಲಿ ಒಳಗೊಂಡಿರುವ ವ್ಯಕ್ತಿಗಳ ಪತ್ತೆಗೆ ಅಬಕಾರಿ ಅಧೀಕ್ಷಕ ವಿಜಯಕುಮಾರ ಹಿರೇಮಠ ಮತ್ತು ಆಧೀನ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ.



ಅಬಕಾರಿ ಇನ್ಸ್‌ಪೆಕ್ಟರ್ ಬಸವರಾಜ ಮುಡಶಿ



ಅಬಕಾರಿ ಇನ್ಸ್‌ಪೆಕ್ಟರ್ ರವಿ ಹೊಸಳ್ಳಿ



ಅಬಕಾರಿ ಇನ್ಸ್‌ಪೆಕ್ಟರ್ ಲಿಂಗರಾಜು (ಧಾರವಾಡ)

**ನಕಲಿ ಮದ್ಯ ತಯಾರಿಕೆ ಖಚಿತ ಮಾಹಿತಿ...**

ಬೆಳಗಾವಿಯ ಜಂಟಿ ಆಯುಕ್ತರ ಕಚೇರಿಯಲ್ಲಿ ಅಧೀಕ್ಷಕರಾಗಿರುವ ವಿಜಯಕುಮಾರ ಹಿರೇಮಠ ತುಂಬಾ ದಕ್ಷರು. ಹಿಡಿದ ಕೆಲಸವನ್ನು ಪಟ್ಟು ಹಿಡಿದು ಸಾಧಿಸುವ ಧಾಡಸಿ ಅಧಿಕಾರಿ. ಇವರೊಂದಿಗೆ ಇನ್ಸ್‌ಪೆಕ್ಟರ್ ಆಗಿರುವ ಬಸವರಾಜ ಮುಡಶಿ ಕೂಡಾ ಚತುರ ಅಧಿಕಾರಿ. ಅಧೀಕ್ಷಕ ವಿಜಯಕುಮಾರರು ತುಂಬಾ ವಿಸ್ತೃತವಾದ ಬಲಿಷ್ಟ ಮಾಹಿತಿಯ ಜಾಲವನ್ನು ಹೊಂದಿದ್ದಾರೆ. ಹೀಗಾಗಿ ಇವರು ಅನೇಕ ಜಠಿಲ ಅಕ್ರಮ ಮದ್ಯ ಸಾಗಾಣಿಕ ಪ್ರಕರಣಗಳನ್ನು ಭೇದಿಸಿ ಹಿರಿಯ ಅಧಿಕಾರಿಗಳಿಂದ 'ಭೇಷ್' ಎನಿಸಿಕೊಂಡಿದ್ದಾರೆ. ಹುಬ್ಬಳ್ಳಿ ಭಬ್ಬಿ-ಬಮ್ಮಸಮುದ್ರದ ಅಕ್ರಮ ಮದ್ಯ ತಯಾರಿಕಾ ಜಾಲದ ಬಗ್ಗೆ ತಮಗಿರುವ ಮಾಹಿತಿ ಜಾಲದಿಂದ ಕರಾರುವಕ್ಕಾದ ಮಾಹಿತಿಯನ್ನು ಅಂಗೈಯಲ್ಲಿರಿಸಿಕೊಂಡರು. ಈ ಸಂದರ್ಭದಲ್ಲಿ ಇನ್ಸ್‌ಪೆಕ್ಟರ್ ಆಗಿರುವ ಬಸವರಾಜ ಮುಡಶಿ ಅವರ ಶ್ರಮ ಬಹಳಷ್ಟಿದೆ. ನಕಲಿ ಮದ್ಯ ತಯಾರಿಕಾ ಜಾಲದ ಕುರಿತು-ಅಪರ ಆಯುಕ್ತರಾದ (ಅಪರಾಧ) ಡಾ. ವೈ. ಮಂಜುನಾಥ, ಜಂಟಿ ಆಯುಕ್ತರಾದ ಎಫ್.ಹೆಚ್. ಚಲುವಾದಿ ಅವರೊಂದಿಗೆ ಸಮಾಲೋಚಿಸಿದರು. ಈ ಸಂದರ್ಭದಲ್ಲಿ ಅಪರ ಆಯುಕ್ತರಾದ ಡಾ. ವೈ. ಮಂಜುನಾಥ, ಜಂಟಿ ಆಯುಕ್ತರಾದ ಎಫ್.ಹೆಚ್. ಚಲುವಾದಿ ಮತ್ತು ಧಾರವಾಡದ ಉಪ ಆಯುಕ್ತರಾದ ರಮೇಶಕುಮಾರ

☞ 12



ನಕಲಿ ಮದ್ಯತಯಾರಿಕೆಗೆ ಬಳಸುತ್ತಿದ್ದ ರಾಸಾಯನಿಕದೊಂದಿಗೆ ಆರೋಪಿತರನ್ನು ಬಂಧಿಸಿದ ಅಬಕಾರಿ ಅಧಿಕಾರಿಗಳ ತಂಡ



ನಕಲಿ ಮದ್ಯ ತಯಾರಿಕೆಗೆ ಬಳಸುತ್ತಿದ್ದ ಸಾಮಗ್ರಿಗಳು

# ಖತರ್‌ನಾಕ್ ಕಳ್ಳನ ಬಂಧನ... 14.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶ

7 ☞

ಸಮಾಲೋಚಿಸಿ ಸೂಕ್ತ ನಿರ್ದೇಶನಗಳನ್ನು ಪಡೆದು ಕೊಂಡರು. ಎಸ್ಪಿಡಾ. ಭೀಮಾಶಂಕರ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಅವರು ನ್ಯಾಯಾಧೀಶರ ಮನೆಕಳ್ಳತನ ಪ್ರಕರಣವನ್ನು ಪತ್ತೆ ಮಾಡಲೇಬೇಕೆಂದು ಫರ್ಮಾನು ನೀಡಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಅವರಿಗೆ ಪ್ರಕರಣದ ನೇತೃತ್ವ ವಹಿಸಿದರು. ಕಳ್ಳತನ ಪತ್ತೆಗಾಗಿ ಸಿಪಿಐ ಸಂತೋಷ ಹಳ್ಳೂರ ನೇತೃತ್ವದಲ್ಲಿ ವಲಯದ ಎಲ್ಲಾ ಪಿಎಸ್‌ಐಗಳು ಹಾಗೂ ಕ್ರೈಂ ವಿಭಾಗದಲ್ಲಿ ದಕ್ಷ ಹಾಗೂ ನುರಿತ ಸಿಬ್ಬಂದಿಗಳು ಸೇರಿದಂತೆ ಒಂದು ವಿಶೇಷ ತನಿಖಾ ತಂಡ ರಚಿಸಿ ಕಾರ್ಯಾಚರಣೆ ಕೈಗೊಳ್ಳಬೇಕೆಂದು ತಿಳಿಸಿದರು.

**ವಿಶೇಷ ತನಿಖಾ ತಂಡ ಕಾರ್ಯಾಚರಣೆ...**

ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ತುಂಬಾ ದಕ್ಷ ಅಧಿಕಾರಿ ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಅಥಣಿ ಸಿಪಿಐ ಸಂತೋಷ ಹಳ್ಳೂರ ನೇತೃತ್ವದಲ್ಲಿ ವಲಯದ ಪಿಎಸ್‌ಐಗಳಾದ ಗಿರಿಮಲ್ಲ ಉಪ್ಪಾರ (ಅಥಣಿ), ಕುಮಾರ ಹಾಡಕರ (ಐಗಳಿ), ಶ್ರೀಮತಿ ಜಿ.ಜಿ. ಬಿರಾದಾರ (ಕಾಗವಾಡ), ಪಿ. ನಾಗರಾಜ (ಅಥಣಿ), ಸಿ.ಬಿ. ನಾಗನೂರ (ಐಗಳಿ), ಸಿಬ್ಬಂದಿಗಳಾದ ಪುರುಷೋತ್ತಮ ನಾಯಿಕ, ಎಂ.ಎ. ಪಾಟೀಲ, ಎ.ಎ. ಈರಕರ, ಜೆ.ಆರ್. ಅಸೂದೆ, ಎಸ್.ಎಸ್. ನಂದಿವಾಲೆ, ಎ.ಎ. ಮೈಗೂರ, ಡಿ.ಟಿ. ಶಾನವಾಡ, ಜೆ.ಹೆಚ್. ಡಾಂಗೆ, ಬೆಳಗಾವಿ ತಾಂತ್ರಿಕ ವಿಭಾಗದ ವಿನೋದ ಠಕ್ಕಣ್ಣವರ ಒಳಗೊಂಡಂತೆ ವಿಶೇಷ ತನಿಖಾ ತಂಡವನ್ನು ರಚಿಸಿ, ಸೂಕ್ತ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ನೀಡಿದರು.

ಅಂದುಕೊಂಡಂತೆ ಅಥಣಿ ಸಿಪಿಐ ಸಂತೋಷ ಹಳ್ಳೂರ ತುಂಬಾ ಚತುರ ಮತ್ತು ಕುಶಾಗ್ರಮತಿಯುಳ್ಳ ಧಾಡಸಿ ಅಧಿಕಾರಿ. ವಲಯದ ಪಿಎಸ್‌ಐಗಳು ಕೂಡಾ ಒಬ್ಬರಿಗಿಂತ ಒಬ್ಬರು ಚತುರರಿದ್ದರು. ಸಿಬ್ಬಂದಿಗಳು ಕೂಡಾ ಇವರಿಗೆ ಹೇಳಿ ಮಾಡಿಸಿದಂತೆ ಚಾಕಚಕ್ಯತೆ ಉಳ್ಳವರಾಗಿದ್ದರು. ಡಿಸೆಂಬರ್ 2024 ಕೊನೆಯ ವಾರದಿಂದ ಮಾರ್ಚ್ ಮೊದಲ ವಾರ 2025ರವರೆಗೆ ವಿಶೇಷ ತನಿಖಾ ತಂಡದ ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿಗಳು ಅಗತ್ಯ ಮಾಹಿತಿ ಕಲೆ ಹಾಕುತ್ತ ಹೋದರು. ನ್ಯಾಯಾಧೀಶರ ಮನೆ ಕಳ್ಳತನದಲ್ಲಿ ವೃತ್ತಿನಿರತ ಕುಖ್ಯಾತ ಕಳ್ಳರಾಗಿದ್ದ 'ಪಾಶಿ ಪರದಿ' ಗ್ಯಾಂಗ್‌ನ ಕೈಚಳಕವಿದ್ದ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಕಳ್ಳತನ ಮಾಡುವ ರೀತಿ, ನೀತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದರು.

**ಬಲೆಗೆ ಬಿದ್ದ ಖತರ್‌ನಾಕ್ ಕಳ್ಳ...**

ಅಂದುಕೊಂಡಂತೆ ಸತತ ಎರಡು ತಿಂಗಳವರೆಗೆ ವಿಶೇಷ ಪರಿಶ್ರಮ ವಹಿಸಿದ ವಿಶೇಷ ತನಿಖಾ ತಂಡದ ಸದಸ್ಯರು ಒಬ್ಬ ಖತರ್‌ನಾಕ್ ಕಳ್ಳನ ಕುಂಡಲಿಯನ್ನು ಅಂಗೈಯಲ್ಲಿರಿಸಿಕೊಂಡು ಆತನಿಗಾಗಿ ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಹುಡುಕುತ್ತಿತ್ತು. ಪಾಸಿ ಪರದಿ ಜನಾಂಗಕ್ಕೆ ಸೇರಿದ್ದ ಅರ್ಜುನ ಅಲಿಯಾಸ್ ಅರ್ಜಂಟ್, ನಬಿಸಾಬ ಭೋಸಲೆ ಎಂಬಾತನ ಬಗ್ಗೆ ಬರಪೂರ ಮಾಹಿತಿ ಪಡೆದುಕೊಂಡಿದ್ದರು. ಅಂದು ಖಚಿತ ಮಾಹಿತಿ ಆಧಾರದ ಮೇಲೆ ದಿ. 04-03-2025ರಂದು ಕ್ರಿಮಿನಲ್ ಅರ್ಜುನನನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸಿಪಿಐ ಸಂತೋಷ ಹಳ್ಳೂರ, ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಅವರ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಅರ್ಜುನ ಅಲಿಯಾಸ್ ಅರ್ಜಂಟ್ ಕಾಗಕ್ಕ ಗುಬ್ಬಕ್ಕನ ಕಥೆ ಹೇಳತೊಡಗಿದ್ದನು. ಆಗ ವಿಶೇಷ ತನಿಖಾ ತಂಡದವರು ಪೊಲೀಸ್ ಭಾಷೆಯಲ್ಲಿ ವಿಚಾರಣೆ ಆರಂಭಿಸಿದಾಗ ಅರ್ಜುನ ಭೋಸಲೆ ಅರ್ಜಂಟಾಗಿ ಎಲ್ಲವನ್ನು ಗಿಳಿಪಾಠದಂತೆ ತನ್ನ ಕರ್ಮಕಾಂಡ ಬಿಚ್ಚಿಟ್ಟನು. ನ್ಯಾಯಾಧೀಶರ ಮನೆಯ ಬೀಗ ಮುರಿದು 180 ಗ್ರಾಂ ಚಿನ್ನಾಭರಣ ಕಳವು ಮೂರು ಜನ ಕೂಡಿ ಮಾಡಿದ್ದು. ಇನ್ನಿಬ್ಬರು ಪರಾರಿಯಾಗಿದ್ದಾರೆ. ಮತ್ತು ಚಿನ್ನಾಭರಣಗಳನ್ನು ಮಿರಜದಲ್ಲಿರುವ ಕದಂವಾಡಿ ನಿವಾಸಿ ಸುನಂದಾ ಈಶ್ವರ ಭೋಸಲೆ ಇವಳಿಗೆ ಮಾರಿದ್ದಾಗಿ ತಿಳಿಸಿದನು. ತಕ್ಷಣ ಸಿಪಿಐ ಸಂತೋಷ ಹಳ್ಳೂರ ಖತರ್‌ನಾಕ್ ಕಳ್ಳನನ್ನು ಬಂಧಿಸುವ ಪ್ರಕ್ರಿಯೆ ಮುಗಿಸಿದರು.


ಖತರ್‌ನಾಕ್ ಕಳ್ಳನಿಂದ ಚಿನ್ನಾಭರಣ ವಶಪಡಿಸಿಕೊಂಡ ಸಂದರ್ಭದಲ್ಲಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ, ಸಿಪಿಐ ಸಂತೋಷ ಹಳ್ಳೂರ, ಪಿಎಸ್‌ಐಗಳಾದ ಗಿರಿಮಲ್ಲ ಉಪ್ಪಾರ, ಕುಮಾರ ಹಾಡಕರ ಮುಂತಾದವರು

**ಖರೀದಿಸಿದ ಮಹಿಳೆ ಬಂಧನ...**

ಅಗ್ಗದ ದರದಲ್ಲಿ ಚಿನ್ನಾಭರಣ ಖರೀದಿಸಿದ್ದ ಮಿರಜನ ಕದಂವಾಡಿ ನಿವಾಸಿ ಸುನಂದಾ ಈಶ್ವರ ಭೋಸಲೆ ಮನೆಗೆ ದಾಳಿ ಮಾಡಿ ಖತರ್‌ನಾಕ್ ಕಳ್ಳ ಮಾರಿದ್ದ180 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡರು. ಕಳುವಿನ ಸ್ವತ್ತು ಎಂದು ಗೊತ್ತಿದ್ದರೂ ಕೂಡಾ ಅದನ್ನು ಖರೀದಿಸಿದ ಆರೋಪದ ಮೇರೆಗೆ ಮಹಿಳೆಯನ್ನು ಮತ್ತು ಖತರ್‌ನಾಕ್ ಕಳ್ಳರ ಗುರು ಅರ್ಜುನನನ್ನು ಬಂಧಿಸಿ ಜೈಲಿಗಟ್ಟಲಾಗಿದೆ. ಜೈಲು ಸೇರಿ ಕಂಬಿ ಎಣಿಸುತ್ತ ಇದೀಗ ಮಗ್ಗಿ ಎಣಿಸುತ್ತಿದ್ದಾರೆ.

**11.40 ಲಕ್ಷ ರೂ.ಗಳ 180 ಗ್ರಾಂ ಚಿನ್ನಾಭರಣ...**

ಬಂಧಿತ ಮಹಾ ಐನಾತಿ ಕಳ್ಳನಿಂದ ಅಥಣಿಯ ನ್ಯಾಯಾಧೀಶರ ಮನೆಯಲ್ಲಿ ಕಳ್ಳತನ ಮಾಡಿದ್ದ 11.40 ಲಕ್ಷ ರೂ.ಗಳ ಮೌಲ್ಯದ 180 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳುವಲ್ಲಿ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಡಿವೈಎಸ್ಪಿ ಪ್ರಶಾಂತ ಮುನ್ನೋಳಿಯವರ ಸೂಕ್ತ ನಿರ್ದೇಶನಗಳು ವಿಶೇಷ ತನಿಖಾ ತಂಡದ ನಾಯಕರಾದ ಸಿಪಿಐ ಹಳ್ಳೂರ ಮತ್ತು ತಂಡಕ್ಕೆ ವರವಾಗಿ ಪರಿಣಮಿಸಿದವು.

**ಶ್ಲಾಘನೆ...**

ಖತರ್‌ನಾಕ್ ಕಳ್ಳರ ಗುರು ಅರ್ಜುನ್ ಅಲಿಯಾಸ್ ಅರ್ಜಂಟ್‌ನನ್ನು ಬಂಧಿಸಿ ಆತನಿಂದ 180 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳುವಲ್ಲಿ ವಿಶೇಷವಾಗಿ ಶ್ರಮಿಸಿದ ಸಿಪಿಐ ಸಂತೋಷ ಹಳ್ಳೂರ, ಪಿಎಸ್‌ಐಗಳಾದ ಗಿರಿಮಲ್ಲ ಉಪ್ಪಾರ, ಕುಮಾರ ಹಾಡಕರ, ಶ್ರೀಮತಿ ಜಿ.ಜಿ. ಬಿರಾದಾರ, ಪಿ. ನಾಗರಾಜ್, ಸಿ.ಬಿ. ನಾಗನೂರ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಶ್ಲಾಘಿಸಿದ್ದಾರೆ. ☯

---

11 ☞

ಅವರುಗಳು ಅಧೀಕ್ಷಕರಾದ ವಿಜಯಕುಮಾರ ಹಿರೇಮಠ ಅವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿ ಒಂದು ವಿಶೇಷ ತಂಡ ರಚಿಸಿ ದಾಳಿ ಮಾಡಲು ತಿಳಿಸಿದರು.

**ವಿಶೇಷ ತಂಡ ರಚನೆ...**

ಬೆಳಗಾವಿಯ ವಿಭಾಗದ ಜಂಟಿ ಆಯುಕ್ತರ ಕಚೇರಿಯ ಅಧೀಕ್ಷಕರಾದ ವಿಜಯಕುಮಾರ ಹಿರೇಮಠರ ನೇತೃತ್ವದಲ್ಲಿ ಒಂದು ವಿಶೇಷ ತಂಡ ರಚಿಸಲಾಯಿತು. ವಿಶೇಷ ತಂಡದಲ್ಲಿ ಅಬಕಾರಿ ಇನ್ಸ್‌ಪೆಕ್ಟರ್‌ಗಳಾದ ಬಸವರಾಜ ಮುಡಶಿ, ರವಿ ಹೊಸಳ್ಳಿ ಧಾರವಾಡದ ಲಿಂಗರಾಜು ಮತ್ತು ಅವರ ಸಿಬ್ಬಂದಿಗಳು ಮತ್ತು ಹುಬ್ಬಳ್ಳಿ ಉಪ ವಿಭಾಗದ ಸಿಬ್ಬಂದಿಗಳನ್ನು ಒಳಗೊಂಡಂತೆ ಒಂದು ವಿಶೇಷ ತಂಡವನ್ನು ರಚಿಸಲಾಯಿತು. ಧಾರವಾಡದ ಉಪ ಆಯುಕ್ತರಾದ ರಮೇಶಕುಮಾರ ವಿಶೇಷ ತಂಡದ ಉಸ್ತುವಾರಿ ವಹಿಸಿಕೊಂಡು ಮಾರ್ಗದರ್ಶನ ನೀಡಲು ಆರಂಭಿಸಿದ್ದರು.

**ನಕಲಿ ಮದ್ಯದ ಅಡ್ಡೆ ಮೇಲೆ ದಾಳಿ...**

ಅಂದುಕೊಂಡಂತೆ ಖಚಿತ ಮಾಹಿತಿ ಆಧರಿಸಿದ್ದ ಅಧೀಕ್ಷಕ ವಿಜಯಕುಮಾರ ಹಿರೇಮಠ ಇನ್ಸ್‌ಪೆಕ್ಟರ್‌ಗಳಾದ ಬಸವರಾಜ ಮುಡಶಿ, ರವಿ ಹೊಸಳ್ಳಿ, ಲಿಂಗರಾಜು ಮತ್ತು ಸಿಬ್ಬಂದಿಗಳು ಸೇರಿಕೊಂಡು ದಿ. 06-03-2025 ರಂದು ಧಾರವಾಡ ಜಿಲ್ಲೆಯ ಛಬ್ಬಿ ಗ್ರಾಮದ ಹೊರವಲಯದ ತೋಟದ ಮನೆಯಲ್ಲಿರುವ ನಕಲಿ ಮದ್ಯ ತಯಾರಿಕೆ ಅಡ್ಡೆ ಮೇಲೆ ದಾಳಿ ನಡೆಸಿದ್ದರು. ವಿಶೇಷ ತಂಡದ ದಾಳಿ ಎಷ್ಟೊಂದು ರಹಸ್ಯವಾಗಿತ್ತೆಂದರೆ ಅಲ್ಲಿ ಹೋದವರೆಲ್ಲ ಸ್ಥಳೀಕರಂತೆ ಮಫ್ತಿಯಲ್ಲಿದ್ದರು.

**ಇಬ್ಬರು ಐನಾತಿಗಳ ಬಂಧನ...**

ಅಧೀಕ್ಷಕ ವಿಜಯಕುಮಾರ ಹಿರೇಮಠರ ವಿಶೇಷ ತನಿಖಾ ತಂಡ ದಾಳಿ ಮಾಡಿದಾಗ ತೋಟದ ಮನೆಯಲ್ಲಿ ತಮ್ಮ ಪಾಡಿಗೆ ತಾವು ನಕಲಿ ಮದ್ಯ ತಯಾರಿಸುತ್ತ ಕುಳಿತಿದ್ದ ಇಬ್ಬರು ಯುವಕರನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಇದರಲ್ಲಿ ಕಿಂಗ್‌ಪಿನ್ ಆಗಿದ್ದ ಪ್ರಮುಖ ಆರೋಪಿ ವಿನಾಯಕ ಆಗಲೇ ತಲೆಮರೆಸಿಕೊಂಡಿದ್ದನು. ಆರೋಪಿಗಳಾದ ಸಂದೀಪ ಮತ್ತು ಅಮೃತ ಎಂಬುವರನ್ನು ಅಬಕಾರಿ ಅಧಿಕಾರಿಗಳು ತಮ್ಮ ವಶಕ್ಕೆ ತೆಗೆದುಕೊಂಡರು. ಇವರಿಬ್ಬರು ಕಳೆದ ಒಂದು ತಿಂಗಳಿನಿಂದಲೂ ನಕಲಿ ಮದ್ಯ ತಯಾರಿಸುತ್ತಿದ್ದರೆಂದು ಹೇಳಿದ್ದಾರೆ. ತಯಾರಿಸಿದ ನಕಲಿ ಮದ್ಯವನ್ನು ಎಲ್ಲಿ ಮತ್ತು ಹೇಗೆ ಮಾರಾಟ ಮಾಡುತ್ತಿದ್ದರು ಎಂಬುದು ನಮಗೆ ಗೊತ್ತಿಲ್ಲ ಎಂದಿದ್ದಾರೆ. ಈಗಾಗಲೇ ಕಿಂಗ್ ಪಿನ್ ವಿನಾಯಕನ ಬಂಧನಕ್ಕೆ ಬಲೆ ಬೀಸಲಾಗಿದೆ. ಆತ ಸಿಕ್ಕ ನಂತರವಷ್ಟೇ ಈ ಜಾಲದಲ್ಲಿ ಯಾರ್ಯಾರ ಕೈವಾಡವಿದೆ ಎಂದು ಗೊತ್ತಾಗಲಿದೆ. ಈ ಸಂದರ್ಭದಲ್ಲಿ ಧಾರವಾಡದ ಉಪ ಆಯುಕ್ತರು ಖುದ್ದಾಗಿ ಕಾರ್ಯಾಚರಣೆಗೆ ಮಾರ್ಗದರ್ಶನ ಮಾಡಿದ್ದರು.

**5 ಲಕ್ಷ ರೂ.ಗಳ ನಕಲಿ ಮದ್ಯ ಮತ್ತು ಪರಿಕರಗಳು...**

ನಕಲಿ ಮದ್ಯ ತಯಾರಿಕಾ ಘಟಕದ ಮೇಲೆ ದಾಳಿ ಮಾಡಿದಾಗ ಭದ್ರತಾ ಲೇಬಲ್‌ಗಳು, ವಿವಿಧ ಮದ್ಯದ ಬ್ರ್ಯಾಂಡ್‌ನ ಸ್ಟಿಕರ್‌ಗಳು, ಬಾಟಲ್‌ಗಳು, ಬೂಚುಗಳು ಎಲ್ಲವೂ ನಕಲಿಯಾಗಿ ಇದ್ದವು. ಲಕ್ಷಾಂತರ ರೂ.ಗಳ ನಕಲಿ ಮದ್ಯ, ಬಳಸುವ ರಾಸಾಯನಿಕ ಮಿಶ್ರಣ, ರಟ್ಟಿನ ಬಾಕ್ಸ್‌ಗಳು ಒಟ್ಟು ಎಲ್ಲ ಸೇರಿ 5 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣವನ್ನು ಜಂಟಿ ಆಯುಕ್ತರ ಕಚೇರಿಯಲ್ಲಿ ಇನ್ಸ್‌ಪೆಕ್ಟರ್ ಬಸವರಾಜ ಮುಡಶಿ ಘೋರ ಅಪರಾಧವನ್ನು ದಾಖಲಿಸಿದ್ದಾರೆ. ಹೆಚ್ಚಿನ ತನಿಖೆ ಮುಂದುವರೆದಿದೆ.


ನಕಲಿ ಮದ್ಯ ತಯಾರಿಕೆ ಅಡ್ಡೆ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡ ವಸ್ತುಗಳು ಮತ್ತು ಆರೋಪಿಗಳೊಂದಿಗೆ ಅಬಕಾರಿ ಅಧಿಕಾರಿಗಳು

**ಶ್ಲಾಘನೆ...**

ಜಂಟಿ ಆಯುಕ್ತರ ಕಚೇರಿಯ ಅಧೀಕ್ಷಕ ವಿಜಯ ಕುಮಾರ ಹಿರೇಮಠ ಇನ್ಸ್‌ಪೆಕ್ಟರ್‌ಗಳಾದ ಬಸವರಾಜ ಮುಡಶಿ, ರವಿ ಹೊಸಳ್ಳಿ, ಧಾರವಾಡದ ಲಿಂಗರಾಜು ಮತ್ತು ಸಿಬ್ಬಂದಿಗಳು ನಕಲಿ ಮದ್ಯ ತಯಾರಿಕೆ ಅಡ್ಡೆಯ ಮೇಲೆ ಯಶಸ್ವಿ ಕಾರ್ಯಾಚರಣೆ ನಡೆಸಿರುವುದನ್ನು ಬೆಳಗಾವಿ ಕೇಂದ್ರ ಸ್ಥಾನದ ಅಪರ ಅಬಕಾರಿ ಆಯುಕ್ತರಾದ ಡಾ. ವೈ. ಮಂಜುನಾಥ, ಬೆಳಗಾವಿ ವಿಭಾಗದ ಜಂಟಿ ಅಬಕಾರಿ ಆಯುಕ್ತರಾದ ಎಫ್. ಹೆಚ್. ಚಲುವಾದಿ, ಧಾರವಾಡ ಜಿಲ್ಲೆಯ ಅಬಕಾರಿ ಉಪ ಆಯುಕ್ತರಾದ ರಮೇಶ ಕುಮಾರ ಹೆಚ್. ಅವರು ಶ್ಲಾಘಿಸಿದ್ದಾರೆ. ಸಾರ್ವಜನಿಕರು ಅಬಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕರ್ತವ್ಯ ದಕ್ಷತೆಯನ್ನು ಕೊಂಡಾಡಿದ್ದಾರೆ. ☯



ನಕಲಿ ಮದ್ಯ ಬಾಟಲಿಗೆ ಬಳಸುವ ಬೂಚುಗಳು



ನಕಲಿ ಮದ್ಯ ತಯಾರಿಸಿ ಅದಕ್ಕೆ ಬಳಸುತ್ತಿದ್ದ 'ಇಂಪೀರಿಯಲ್ ಬ್ಲ್ಯೂ' ಬ್ರ್ಯಾಂಡ್


ನಕಲಿ ಬಾಟಲ್‌ನಲ್ಲಿ ತುಂಬಿ ಅದಕ್ಕೆ ಅಂಟಿಸಲು ಬಳಸುತ್ತಿದ್ದ ಭದ್ರತಾ ಲೇಬಲ್‌ಗಳು

**ಕಾಂಗ್ರೆಸ್ ತಿಪ್ಪರಲಾಗ ಹಾಕಿದರೂ ಚುನಾವಣೆಗಳಲ್ಲಿ ಮೇಲೆದ್ದು ಬರಲು ಸಾಧ್ಯವಾಗುತ್ತಿಲ್ಲ. ಒಂದರ ಮೇಲೊಂದರಂತೆ ತಂತ್ರಗಳನ್ನು ಮಾಡುತ್ತಿದ್ದರೂ ಅದ್ಯಾವುದೂ ಫಲ ಕೊಟ್ಟಂತೆ ಕಾಣುತ್ತಿಲ್ಲ. ಪರಿಣಾಮ ಎಲ್ಲ ಚುನಾವಣೆಗಳಲ್ಲಿ ಮುಗ್ಗರಿಸುವುದು ಮಾಮೂಲಿಯಾಗಿದೆ. ಇದಕ್ಕೆ ಇತ್ತೀಚೆಗೆ ನಡೆದ ದೆಹಲಿ ವಿಧಾನಸಭಾ ಚುನಾವಣೆ ಉದಾಹರಣೆಯಾಗಿದೆ. ಚುನಾವಣೆ ವೇಳೆಯಲ್ಲಿ ಅಖಾಡಕ್ಕಿಳಿದು ಪ್ರಚಾರ ಮಾಡಿದ ತಕ್ಷಣ, ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಅದಾನಿ, ಅಂಬಾನಿ ಬಗ್ಗೆ ಬೊಬ್ಬೆ ಹೊಡೆದರೆ, ಅಲ್ಪಸಂಖ್ಯಾತರು, ದಲಿತರು, ಹಿಂದುಳಿದವರ ಪರವಾಗಿ ಕಣ್ಣೀರು ಸುರಿಸಿದರೆ, ಗ್ಯಾರಂಟಿ ಯೋಜನೆ ಘೋಷಿಸಿದರೆ... ಇದ್ಯಾವುದೂ ಮತವಾಗಿ ಪರಿವರ್ತನೆಯಾಗಲ್ಲ ಎಂಬ ಸತ್ಯ ಗೊತ್ತಾಗಿದೆ.**



# ಚುನಾವಣೆಗಳಲ್ಲಿ ವರ್ಕೌಟ್ ಆಗದ ಕೈ ತಂತ್ರ!

ಸುಮಾರು 60ಕ್ಕೂ ಹೆಚ್ಚು ವರ್ಷಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ಪಕ್ಷಕ್ಕೆ ಇವತ್ತು ಬಹಳಷ್ಟು ರಾಜ್ಯಗಳಲ್ಲಿ ಕಾರ್ಯಕರ್ತರ ಪಡೆಯೇ ಇಲ್ಲದಂತಾಗಿದೆ. ಕಾಂಗ್ರೆಸ್ ಈಗಾಗಲೇ ಬಹಳಷ್ಟು ರಾಜ್ಯಗಳಲ್ಲಿ ಅಧಿಕಾರವನ್ನು ಕಳೆದುಕೊಂಡಿದೆ. ಅಲ್ಲೆಲ್ಲ ಕಾಂಗ್ರೆಸ್ ಪಕ್ಷವನ್ನು ಸಂಘಟಿಸಿ ಗೆಲುವಿನ ಕಡೆಗೆ ಕೊಂಡೊಯ್ಯುವ ನಾಯಕರ



ಸಂಖ್ಯೆ ಕ್ಷೀಣಿಸಿದೆ. ಏಕ ಪಕ್ಷವಾಗಿ ಮುನ್ನಡೆಯುವ ಸಾಮರ್ಥ್ಯ ಕಳೆದುಕೊಂಡಿರುವ ಕಾಂಗ್ರೆಸ್‌ಗೆ ಊರುಗೋಲಾಗಿ ನಿಲ್ಲುವ ಪ್ರಾದೇಶಿಕ ಪಕ್ಷದ ಅಗತ್ಯತೆ ಎದ್ದು ಕಾಣಿಸುತ್ತಿದೆ.


ಕೇಂದ್ರಮಟ್ಟದಲ್ಲಿ ಒಂದಷ್ಟು ನಾಯಕರಿದ್ದರೂ ಕರ್ನಾಟಕ ಹೊರತುಪಡಿಸಿ ಹೆಚ್ಚಿನ ರಾಜ್ಯಗಳಲ್ಲಿ ನಾಯಕರ ಕೊರತೆ ಎದುರಾಗಿದೆ. ಅಲ್ಲದೆ ನೆಹರು ಕುಟುಂಬದ ಆಚೆ ನಿಂತು ಪಕ್ಷವನ್ನು ಕಟ್ಟಿ ಬೆಳೆಸುವ ಸಾಮರ್ಥ್ಯವೂ ನಾಯಕರಿಗೆ ಇಲ್ಲದಾಗಿದೆ. ಜತೆಗೆ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿಯನ್ನು ಬದಿಗಿಟ್ಟು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಯಾವುದೇ ನಾಯಕರಿಗೆ ಇಲ್ಲದಾಗಿದೆ. ಹೀಗಾಗಿ ಪಕ್ಷದಲ್ಲಿ ಸಂಘಟನಾ ಚತುರತೆ ಹೊಂದಿದ ನಾಯಕರಿದ್ದರೂ ಅವರು ಹೇಳಿಕೆಗಳನ್ನು ನೀಡುವುದಕ್ಕಷ್ಟೆ ಸೀಮಿತರಾಗುತ್ತಿದ್ದಾರೆ. ಹೀಗಾಗಿ ಪ್ರತಿ ಚುನಾವಣೆಯಲ್ಲಿಯೂ ಕಾಂಗ್ರೆಸ್ ಹೀನಾಯವಾಗಿ ಸೋಲುತ್ತಿದೆ.

ಕಳೆದ 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 100ರಷ್ಟು ಸ್ಥಾನ ಪಡೆದಿದ್ದು ಒಂದು ಸಾಧನೆಯಂತೆ ಕಂಡು ಬಂದರೂ ಅಷ್ಟು ಸೀಟು ಪಡೆಯಲು ಕಾರಣವಾಗಿದ್ದು ಇಂಡಿ ಒಕ್ಕೂಟದ ನಾಯಕರು ನೀಡಿದ ಸಾಥ್ ಮತ್ತು ಹೊರಗಿನಿಂದ ಹರಿದು ಬಂದ ಸಂಪನ್ಮೂಲ ಎನ್ನುವುದು ಕೂಡ ಅಷ್ಟೇ ಸತ್ಯ. ಬಹುಶಃ ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ಕಾಂಗ್ರೆಸ್‌ನ ಹಳೆಯ ತಂತ್ರಗಳು ಯಾವುದೂ ನಡೆಯುವುದಿಲ್ಲ ಎನ್ನುವುದು ಗೊತ್ತಿರುವಿಚಾರವೇ. ಏಕೆಂದರೆ ಮುಂದೆ ಬಿಹಾರ, ಕೇರಳ, ಮೊದಲಾದ ಕಡೆಗಳಲ್ಲಿ ಚುನಾವಣೆ ನಡೆಯಲಿದ್ದು, ಅಲ್ಲಿ ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳ ಮೈತ್ರಿ ಮುಂದುವರೆಯುತ್ತಾ ಎನ್ನುವುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಜೆಂಡಾವನ್ನು ಇಷ್ಟಪಡದ ಕೆಲವೊಂದು ಪ್ರಾದೇಶಿಕ ಪಕ್ಷಗಳು ಕಾಂಗ್ರೆಸ್ ಜತೆಗೆ ಕೈಜೋಡಿಸಿವೆ. ಹೀಗಾಗಿ ಇಂಡಿಕೂಟ ರಚನೆಯಾಗಿ ಹಿಂದಿನ ಯುಪಿಎಗೆ ಹೋಲಿಸಿದರೆ 2024ರ ಚುನಾವಣೆಯಲ್ಲಿ ಒಂದೊಳ್ಳೆಯ ಸಾಧನೆ ಮಾಡಿವೆ ಎಂದೇ ಹೇಳಬೇಕಾಗುತ್ತದೆ. ಆದರೆ ಲೋಕಸಭಾ ಚುನಾವಣೆ ಕಳೆದು ವರ್ಷವಾಗುವ ಮುನ್ನವೇ ಎರಡು ಬಲಿಷ್ಠ ಪಕ್ಷಗಳಾದ ಟಿಎಂಸಿ ಮತ್ತು ಎಎಪಿ ಕಾಂಗ್ರೆಸ್‌ನ ಸಖ್ಯ ಕಳೆದುಕೊಂಡಿವೆ. ಇವತ್ತು ದೆಹಲಿಯಲ್ಲಿ ಎಎಪಿ ಅಧಿಕಾರ ಕಳೆದುಕೊಂಡಿದ್ದರೆ ಅದಕ್ಕೆ ಕಾಂಗ್ರೆಸ್ ಕೂಡ ಕಾರಣವೇ..

ಸುಮಾರು ಹನ್ನೆರಡು ವರ್ಷಗಳ ಎಎಪಿ ಸಾಮ್ರಾಜ್ಯ ಇವತ್ತು ಕಳಚಿ ಬಿದ್ದಿದೆ ಎಂದರೆ ಅದರಲ್ಲಿ ಒಂದಷ್ಟು ಕಾಂಗ್ರೆಸ್‌ನ ಪಾಲಿದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಚುನಾವಣೆಯಲ್ಲಿ ಬಿಜೆಪಿಯನ್ನು ಹೆಚ್ಚು ಟಾರ್ಗೆಟ್ ಮಾಡಲೇ

✍ ಬಿ.ಎಂ. ಲವಕುಮಾರ್



ಇಲ್ಲ, ಎಎಪಿಯನ್ನೇ ಟಾರ್ಗೆಟ್ ಮಾಡಿತು. ಲೋಕಸಭೆಯಲ್ಲಿ ದೋಸ್ತಿಗಳಾಗಿದ್ದವರು ದೆಹಲಿ ಚುನಾವಣೆಯಲ್ಲಿ ಎದುರು ನಿಂತು ಹೋರಾಡಿದರ ಪರಿಣಾಮ ಬಿಜೆಪಿಗೆ ಲಾಭವಾಯಿತು. ಇದು ಎಎಪಿ ನಾಯಕರಿಗೆ ಕಾಂಗ್ರೆಸ್ ನೀಡಿದ ಶಾಕ್. ಲೋಕಸಭೆಯ ನಂತರ ಇಂಡಿಕೂಟದ ನಾಯಕರು ಒಂದೆಡೆ ಸೇರಿ ಮುಂದಿನ ಕಾರ್ಯ ತಂತ್ರಗಳ ಬಗ್ಗೆ ಚರ್ಚೆ ಮಾಡುವುದಾಗಲೀ, ನಾಯಕತ್ವವನ್ನು ಯಾರಿಗೆ ವಹಿಸಬೇಕೆನ್ನುವ ಕುರಿತಾಗಲೀ ಯಾವುದೇ ತೀರ್ಮಾನ ಮಾಡಿಲ್ಲ, ಸದ್ಯ ಇಂಡಿಕೂಟ ನಾವಿಕನಿಲ್ಲದ ಹಡಗಿನಂತೆ ದಿಕ್ಕಾಪಾಲಾಗಿದೆ.



ಸದ್ಯ ಕಾಂಗ್ರೆಸ್ ನಾಯಕರಿಗೂ ಒಂದು ವಿಚಾರ ಮನದಟ್ಟಾಗಿದೆ. ಮುಂದಿನ ಲೋಕಸಭಾ ಚುನಾವಣೆ ವೇಳೆ ನಮ್ಮೊಂದಿಗೆ ಈಗಿರುವ ಪಕ್ಷಗಳ ಪೈಕಿ ಒಂದಷ್ಟು ನಾಯಕರು ಕೈ ಬಿಟ್ಟು ಹೋಗುವ ಸಾಧ್ಯತೆಯಿದೆ. ಅದಕ್ಕಿಂತ ಹೆಚ್ಚಾಗಿ ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ ಈಗ ತಮ್ಮೊಂದಿಗಿರುವವರೇ ತಮ್ಮ ಎದುರಾಳಿಯಾಗಬಹುದು. ಹೀಗೆ ಆದರೆ ದೆಹಲಿಯಲ್ಲಿ ಆದ

☞ 14

## ಡಿಕೆಶಿಗೆ ಸಿಎಂ ಸ್ಥಾನ ನೀಡದಿದ್ದರೆ ಕೈಗೆ ಸಂಕಷ್ಟ

ಕೈ(ಹೈ)ಮಾಂಡ್‌ಗೆ ಸಂಪನ್ಮೂಲ ತರುವ ಏಕೈಕ ರಾಜ್ಯವಿದ್ದರೆ ಅದು ಕರ್ನಾಟಕ ಮಾತ್ರ. ಆದರೀಗ ಕರ್ನಾಟಕದಲ್ಲಿ ಸಿಎಂ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಬಣದ ನಡುವೆ ಜಟಾಪಟಿ ಜೋರಾಗಿದೆ. ಐದು ವರ್ಷಪೂರ್ತಿ ಸಿಎಂ ಆಗಿ ಮುಂದುವರೆಯುವ ಬಯಕೆಯನ್ನು ಸ್ವತಃ ಸಿದ್ದರಾಮಯ್ಯನವರೇ ಹೊರ ಹಾಕುತ್ತಿದ್ದಾರೆ. ಅವರಿಗೆ ಬೆಂಗಾವಲಾಗಿ ಅವರ ಬಣದ ಸಚಿವರು, ಶಾಸಕರು ನಿಂತಿದ್ದಾರೆ. ಒಂದು ವೇಳೆ ಡಿಕೆಶಿಗೆ ಸಿಎಂ ಸ್ಥಾನ ನೀಡದೆ ಹೋದರೆ ಭಾರೀ ಬೆಳವಣಿಗೆ ಆಗುವ ಸಾಧ್ಯತೆ ತಳ್ಳಿಹಾಕುವಂತಿಲ್ಲ,

ಇದೀಗ ಡಿ.ಕೆ. ಶಿವಕುಮಾರ್ ಕಾಂಗ್ರೆಸ್‌ನ ಹಿಂದೂ ಹುಲಿಯಂತೆ ಗೋಚರಿಸುತ್ತಿದ್ದಾರೆ. ಅದು ಅವರ ವಿರೋಧಿಗಳಿಗೆ ಬೇರೆಯದ್ದೇ ಆದ ಸಂದೇಶ ರವಾನೆ ಮಾಡುತ್ತಿದೆ. ಆದರೆ ಸಿದ್ದರಾಮಯ್ಯ ಬಣದ ಸಚಿವರು, ಶಾಸಕರು ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಅಧಿಕಾರವನ್ನು ಬಿಟ್ಟುಕೊಡಲೇ ಬಾರದು ಎಂಬ ಹಠಕ್ಕೆ ಬಿದ್ದಂತೆ ಕಾಣಿಸುತ್ತಿದೆ. 2023ರಲ್ಲಿ ಅಂದಿನ ಆಡಳಿತರೂಢ ಬಿಜೆಪಿಯನ್ನು ಗುಡಿಸಿ ಹಾಕಿ ಅತ್ಯಧಿಕ ಬಹುಮತದೊಂದಿಗೆ ಕಾಂಗ್ರೆಸ್ ವಿಜೃಂಭಿಸಿದಾಗ ಮುಖ್ಯಮಂತ್ರಿ ಆಗುವ ವಿಚಾರದಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ. ಶಿವಕುಮಾರ್ ಮತ್ತು ವಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ ನಡುವೆ ತೀವ್ರ ಪೈಪೋಟಿ ನಡೆದಿತ್ತು.

ಈ ವೇಳೆ ಹೈಕಮಾಂಡ್ ದೆಹಲಿಗೆ ಕರೆಯಿಸಿಕೊಂಡು ಇಬ್ಬರು ನಾಯಕರನ್ನು ಒಟ್ಟಿಗೆ ಕೂರಿಸಿ ಸಂಧಾನ ಮಾಡಿತ್ತು. ಈ ವೇಳೆ ಮುಖ್ಯಮಂತ್ರಿ ಸ್ಥಾನದ ಹಂಚಿಕೆ ಕುರಿತಂತೆ ಮಾತುಕತೆಯಾಗಿತ್ತು ಎನ್ನಲಾಗಿದ್ದು, ಆ ನಂತರ ಎರಡೂವರೆ ವರ್ಷಗಳ ಬಳಿಕ ಡಿ.ಕೆ. ಶಿವಕುಮಾರ್ ಅವರಿಗೆ ಸಿಎಂ ಸ್ಥಾನವನ್ನು ಸಿದ್ದರಾಮಯ್ಯ ಅವರು ಹಸ್ತಾಂತರ ಮಾಡಬೇಕು ಎಂಬ ಅಂತೆ ಸುದ್ದಿಗಳು ಹರಿದಾಡಿತ್ತು.

ಕಾಂಗ್ರೆಸ್ ವಲಯದಲ್ಲಿ ಈ ಬಗ್ಗೆ ಅಧಿಕೃತ ಮಾಹಿತಿಗಳು ಯಾರ ಬಳಿಯೂ ಇಲ್ಲ, ಅವತ್ತು ಹೈಕಮಾಂಡ್ ಏನು ತೀರ್ಮಾನ ಕೈಗೊಂಡಿತು ಎಂಬುದು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ಮಾತ್ರ ತಿಳಿದಿದೆ. ಆದರೆ ಅಂತಹದೊಂದು ನಿರ್ಧಾರ ಆಗಿದೆ ಎಂಬುದನ್ನು ಸೂಕ್ಷ್ಮವಾಗಿ ರಾಷ್ಟ್ರೀಯ ಚಾನೆಲ್‌ವೊಂದಕ್ಕೆ ಸಂದರ್ಶನ ವೇಳೆ ಡಿ.ಕೆ. ಶಿವಕುಮಾರ್ ಬಾಯಿ ಬಿಟ್ಟಿದ್ದರು. ಆದರೆ ಅದಕ್ಕೂ ಮುನ್ನವೇ ಕರ್ನಾಟಕದಲ್ಲಿ ಸಿದ್ದರಾಮಯ್ಯ ಸಿಎಂ ಆಗಿರುವಾಗಲೇ ಸಿಎಂ ಸ್ಥಾನದ ಕುರಿತಂತೆ ಚರ್ಚೆಗಳು, ಹೇಳಿಕೆಗಳು ಶುರುವಾಗಿದ್ದವು. ಡಿ.ಕೆ. ಶಿವಕುಮಾರ್ ಬಣದವರು ಮುಂದಿನ ಸಿಎಂ ಡಿಕೆಶಿ ಎಂದು ಘೋಷಣೆ ಮಾಡಿದರೆ ಮತ್ತೊಂದು ಕಡೆ ಸಿದ್ದರಾಮಯ್ಯ ಬೆಂಬಲಿಗರು ಸಿದ್ದರಾಮಯ್ಯರವರೇ ಪೂರ್ಣಾವಧಿಯ ಮುಖ್ಯಮಂತ್ರಿ ಎಂದು ಹೇಳಿಕೆ ನೀಡುತ್ತಿದ್ದರು. ಇದೆಲ್ಲವನ್ನು ನಾವೆಲ್ಲರೂ ನೋಡಿದ್ದೇವೆ.

ರಾಜಕೀಯವಾಗಿ ಡಿ.ಕೆ. ಶಿವಕುಮಾರ್ ಅವರನ್ನು ವಿರೋಧಿಸುವವರು ಇರಬಹುದು. ಆದರೆ ಕಾಂಗ್ರೆಸ್ ಹೊರತಾಗಿಯೂ ಬೇರೆ ಪಕ್ಷದ ನಾಯಕರು ಡಿಕೆಶಿ ಮುಖ್ಯಮಂತ್ರಿ ಆಗಬೇಕೆಂದು ಬಯಸುತ್ತಿದ್ದಾರೆ ಎನ್ನುವುದನ್ನು ತಳ್ಳಿಹಾಕಲಾಗದು. ಇನ್ನು ಒಕ್ಕಲಿಗರು ನಮ್ಮ ಸಮುದಾಯದ ನಾಯಕ ಸಿಎಂ ಆಗಲಿ ಎಂದೇ ಒತ್ತಾಯ ಮಾಡುತ್ತಾ ಬರುತ್ತಿದ್ದಾರೆ. ಇವತ್ತು ಕಾಂಗ್ರೆಸ್‌ನಲ್ಲಿ ಡಿಕೆಶಿ ಬೆಂಬಲಿಸುವ ದೊಡ್ಡ ನಾಯಕರ ಪಡೆಯಿದೆ. ಅವರೆಲ್ಲರೂ ಹೋದಲ್ಲಿ ಬಂದಲ್ಲಿ ಡಿಕೆಶಿ ಮುಂದಿನ ಸಿಎಂ ಎಂಬ ಹೇಳಿಕೆ ನೀಡುವ ಮೂಲಕ ಹೈಕಮಾಂಡ್ ಮೇಲೆ ಒತ್ತಡ ತರುತ್ತಿದ್ದಾರೆ. ಸಿದ್ದರಾಮಯ್ಯರಿಗೂ ಮುಜುಗರ ತರುತ್ತಿದ್ದಾರೆ.

ಪಕ್ಷಕ್ಕಾಗಿ ಡಿ.ಕೆ. ಶಿವಕುಮಾರ್ ಹಗಲಿರುಳು ದುಡಿದಿದ್ದಾರೆ. ಅಷ್ಟೇ ಅಲ್ಲದೆ ಇಡೀ ರಾಷ್ಟ್ರಮಟ್ಟದಲ್ಲಿ ಯಾವುದೇ ರಾಜ್ಯಕ್ಕೆ ಆಗಲಿ ಹೋಗಿ ಪಕ್ಷದ ಪ್ರಚಾರ ಮಾಡುವ ಶಕ್ತಿ ಸಾಮರ್ಥ್ಯವಿರುವ ನಾಯಕನಿದ್ದರೆ ಅದು ಡಿ.ಕೆ.ಶಿವಕುಮಾರ್ ಮಾತ್ರ. ಈಗಾಗಲೇ ಪಕ್ಷದ ಪರವಾಗಿ ಹಲವು ರಾಜ್ಯಗಳಿಗೆ ಹೋಗಿ ಬಂದಿದ್ದಾರೆ. ಹೈಕಮಾಂಡ್ ಕೂಡ ಪಕ್ಷದ ಏನೇ ಕೆಲಸವಿದ್ದರೂ ಅದನ್ನು ಡಿ.ಕೆ.ಶಿವಕುಮಾರ್‌ಗೆ ವಹಿಸುತ್ತಿದೆ. ಆದ್ದರಿಂದ ಪಕ್ಷಕ್ಕಾಗಿ ದುಡಿಯುತ್ತಿರುವ ಡಿ.ಕೆ.ಶಿವಕುಮಾರ್‌ಗೆ ಸಿಎಂ ಸ್ಥಾನ ನೀಡದೆ ಹೋದರೆ ಕಾಂಗ್ರೆಸ್ ರಾಜ್ಯದಲ್ಲಿಯೂ ಅಧಿಕಾರ ಕಳೆದುಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ☯

# ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿ ಶವ ಪತ್ತೆ!

ರಾಯಚೂರು

✍ವೀರನಗೌಡ





ರಾಯಚೂರು ವಾಸವಿ ನಗರದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮಹಿಳೆ ಶವ ಪತ್ತೆಯಾಗಿದ್ದು, ಪತಿಯೇ ಕೊಲೆ ಮಾಡಿ ಬಳಿಕ ನೇಣು ಹಾಕಿದ್ದಾನೆ ಎಂದು ಪಾಲಕರು ಆರೋಪಿಸಲಾಗಿದೆ. ಪ್ರಸನ್ನ ಲಕ್ಷ್ಮಿ(35) ಮೃತ ಮಹಿಳೆ. ಪತಿ ಜಂಬನ (40) ಕುಡಿದು ಬಂದು ಡಿವೋರ್ಸ್‌ಗಾಗಿ ಪತ್ನಿ ಪ್ರಸನ್ನ ಲಕ್ಷ್ಮಿಯನ್ನು ನಿತ್ಯ ಪೀಡಿಸುತ್ತಿದ್ದ. ಮದುವೆಯಾಗಿ 16 ವರ್ಷಗಳ ಬಳಿಕ ಪತಿ ವಿಚ್ಛೇದನಗಾಗಿ ಪೀಡಿಸುತ್ತಿದ್ದ ಎಂಬ ಆರೋಪ ಕೇಳಿ ಬಂದಿದೆ.

ಹದಿನೈದು ದಿನಗಳ ಹಿಂದೆಯಷ್ಟೇ ಮನೆ ಬದಲಾಯಿಸಿ ಪ್ರಸನ್ನಲಕ್ಷ್ಮಿ ಕುಟುಂಬ ಬಾಡಿಗೆ ಮನೆಯಲ್ಲಿದ್ದರು. ಕೌಟುಂಬಿಕ ಕಲಹದಿಂದ ಕಳೆದ ಒಂದು ವಾರದಿಂದ ಜಂಬನಗೌಡ ಕುಟುಂಬದಿಂದ ದೂರ ಉಳಿದಿದ್ದ. ಪತಿ ಕಿರುಕುಳ ವಿರುದ್ಧ ನೇತಾಜಿ ಪೊಲೀಸ್ ಠಾಣೆಯಲ್ಲಿ ಶನಿವಾರ ದೂರು ದಾಖಲಿಸಲು ಪ್ರಸನ್ನಲಕ್ಷ್ಮಿ ಮುಂದಾಗಿದ್ದರು. ರಾತ್ರಿ ವೇಳೆ ಮಕ್ಕಳು ಹೊರಗಡೆ ಹೋಗಿದ್ದಾಗ ಘಟನೆ ನಡೆದಿದೆ. ಮನೆಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಪ್ರಸನ್ನಲಕ್ಷ್ಮಿ ಶವ ಪತ್ತೆಯಾಗಿದ್ದು,ಪತಿ ಜಂಬನಗೌಡ ಪರಾರಿಯಾಗಿದ್ದಾನೆ. ತಾಯಿ ಸಾವಿನಿಂದ ಇಬ್ಬರು ಮಕ್ಕಳು ತಬ್ಬಲಿಯಾಗಿದ್ದಾರೆ. ಗಂಡ ಜಂಬನ ಅತ್ತೆ ನಾರಾಯಣವ್ವ, ಮಾವ ಮಲ್ಲನ. ಪತಿಯ ಅಕ್ಕನವರು ರಾಜೇಶ್ವರಿ, ಶಶಿಕಲಾ ಅವರ ಗಂಡಿಂದರು ವಿನೋದ್, ಉದಯಕುಮಾರ ಕಿರುಕುಳದಿಂದಲೇ ಘಟನೆ ನಡೆದಿದೆ ಎಂದು ಪ್ರಸನ್ನಲಕ್ಷ್ಮಿ ಕುಟುಂಬಸ್ಥರು ಆರೋಪಿಸಿದ್ದಾರೆ.







ರಾಯಚೂರು ಜೆಸ್ಕಾಂನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಲ್ಲನ ರಾಜ್ಯ ರೈತು ಸಂಘದ ಸದಸ್ಯರಾಗಿ ಕಲಸ ಮಾದಡಿ ಮಲ್ಲಣನ ಮಗ ಜಂಬಣ್ಣಗೌಡಗ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಕಲ್ಲೂರು ಮಂಡಲಂ ಲಕ್ಷ್ಮಿಪುರ ನಿವಾಸಿ ಪ್ರಸನ್ನಲಕ್ಷ್ಮಿ ಜತೆ 2008 ರಲ್ಲಿ ನಗರದ ಗೀತಾ ಮಂದಿರದಲ್ಲಿ ಅದ್ದೂರಿಯಾಗಿ ವಿವಾಹ ನಡೆಯಿತು. ಮದುವೆಯ ಸಮಯದಲ್ಲಿ 2 ಲಕ್ಷ ಹಣ ಮತ್ತು 25 ತೂಲೆ ಚಿನ್ನದ ಆಭರಣಗಳನ್ನು ನೀಡಲಾಗಿದೆ. ಎರಡು ವರ್ಷಗಳ ಕಾಲ ಸಂಸಾರದಲ್ಲಿ ಯಾವುದೆ ರೀತಿಯಲ್ಲಿ ತೊಂದರೆಯಾಗದ ಜೀವನ ನಡೆಯಿತು. ಮೊದಲ ಭಾರ್ಗವಿ ಜನ್ಮತಾಳಿದ ನಂತರ ಗಂಡ-ಹಂಡತಿ ನಡುವೆ ಸ್ವಲ್ಪ ಮಟ್ಟಿಗೆ ಜಗಳವಾಗುತ್ತಿದ್ದವು. ಇಂದು ಭಾರ್ಗವಿ(16) ವರ್ಷಗಳ 10ನೇ ತರಗತಿ ಓದುತಿದ್ದಾಳೆ. ಎಂಟು ವರ್ಷದ ಗಂಡು ಮಗುವನ್ನು ಬಿಟ್ಟಿ ನೇಣಿಗೆ ಶರಣಾಗಿದ್ದಾಳೆ.

2010ರಲ್ಲಿ ನೇತಾಜಿ ಪೊಲೀಸ್ ಠಾಣೆಯು ಪ್ರಸನ್ನಲಕ್ಷ್ಮಿ ಗಂಡನ ವಿರುದ್ಧ ಪ್ರಕರಣ ದಾಖಲಾಯಿತು. ನಂತರ ಸಂಸಾರ ಚೆನ್ನಾಗಿ ನಡೆಸಿಕೊಂಡು ಹೊಂದಿಕೊಂಡು ಜೀವನ ಸಾಗಿಸಲು ರಾಜೀ ಸಂಧಾನದ ಮೂಲಕ ಒಂದಾದರು. ಆದರೆ ಗಂಡ ಜಂಬನಗೆ ಯಾವುದೇ ಕೆಲಸ ವಿಲ್ಲದೆ ಅಪ್ಪ ಮಲ್ಲನ ಪಿಂಚಿನ್ ಹಣದಿಂದ ಜೀವನ ಶೈಲಿಯುನ್ನು ರೂಪಿಸಿಕೊಂಡರು. ಖಾಸಗಿ ಅಂಗಡಿಯಲ್ಲಿ ಕೆಲಸ ಮಾಡುತ್ತ ಮಕ್ಕಳನ್ನು ಶಾಲೆಗೆ ಬಿಟ್ಟು ಬರುತಿದ್ದನು. 2011ರಂದು ಆಂಧ್ರಪ್ರದೇಶದ ಡೋನ್ (ದ್ರೋಣಾಚಾಲ) ಪೊಲಿಸ್ ಠಾಣೆಯಲ್ಲಿ ಜಂಬನ ವಿರುದ್ಧ ಪ್ರಕರಣ ದಾಖಲು ಮಾಡಿದರು. ಅಲ್ಲಿ ಪಂಚಾಯಿತಿ ಮುಖಾಂತರ ರಾಜಿ ಮಾಡಿಕೊಂಡರು.ಕಳೆದ 17 ವರ್ಷಗಳ ಕಾಲದಿಂದ ಇಬ್ಬರ ಮಧ್ಯ ಸಣ್ಣಪುಟ್ಟ ಜಗಳಗಳು ನಡೆಯುತ್ತಿದ್ದವು. ಎರಡು ತಿಂಗಳ ಕಾಲ ಗಂಡ ಜಂಬನ ನ್ಯಾಯಾಲದಲ್ಲಿ ವಿಚ್ಛೇದನ ಪಡೆಯಲು ದಾವೆ ಹುಡಲಾಗಿದೆ ಎಂದು ತಿಳಿದಿದೆ. ನನಗೆ ನ್ಯಾಯ ಒದಗಿಸಲು ನೇತಾಜಿ ಪೊಲೀಸ್ ಠಾಣೆಯು ಮೇಟ್ಟಲೇರಿದಳು. ಪೊಲಿಸರು ಕೈಲಾದ ಮಟ್ಟಿಗೆ ರಕ್ಷಣೆ ಕೊಟ್ಟರು. ಪ್ರಸನ್ನಲಕ್ಷ್ಮಿ ಧೈರ್ಯ ಸಾಲದೆ ಎದೆಗೊಂದಿ ವಾಸವಿನಗರ ಬಡಾವಣೆಯ ಬಾಡಿಗೆ ಮನೆಯಲ್ಲಿ ನೇಣಿಗೆ ಶರಣಾಗಿದ್ದಾಳೆ. ☯



## ...ಶಿಕ್ಷಾ ಬಂಧಿ ಕೊನೆಗೂ ಅರೆಸ್ಟ್

3 ☜

ಹೂಡಿದ್ದ. ಯಾವುದೇ ಸುಳಿವು ಬಿಟ್ಟುಕೊಡದೆ ಹೆಸರು ಬದಲಿಸಿಕೊಂಡು ಸಹಜ ಬದುಕು ನಡೆಸುತ್ತಿದ್ದ. ಎಷ್ಟರ ಮಟ್ಟಿಗೆ ಕಿಲಾಡಿ ಈ ಅಂಬರೀಶ್ ಅಂದ್ರೆ ಪುಣೆಯಲ್ಲಿ ಪೊಲೀಸ್ ಇನ್‌ಫಾರ್ಮರ್ ಆಗಿ ಕೆಲಸ ಕೂಡ ಮಾಡುತ್ತಿದ್ದ. ಆದರೆ ಶಿಕ್ಷಾಬಂಧಿ ಅಂಬರೀಶ್‌ನನ್ನ ಕಲಬುರಗಿ ಪೊಲೀಸರು ಬೆನ್ನು ಬಿದ್ದು ತಾಂತ್ರಿಕವಾಗಿ ಮಾಹಿತಿ ಕಲೆಹಾಕಿ ಕೊನೆಗೂ 11 ವರ್ಷಗಳ ಬಳಿಕ ಹೆಡೆಮುರಿ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.



ಚಾಲಾಕಿ ಶಿಕ್ಷಾಬಂಧಿ ಅಂಬರೀಶ್, ಆಸ್ಪತ್ರೆಯಿಂದ ಎಸ್ಕೇಪ್ ಆದ ಬಳಿಕ ತನ್ನ ಮನೆಯವರಿಗೆ ಯಾರಿಗೂ ಸಂಪರ್ಕವೇ ಮಾಡಿಲ್ಲ, ಖಾಕಿ ಸುಳಿವು ಸಿಗಬಹುದು ಅಂತಾ ಮನೆಯವರಿಂದಲೂ 11 ವರ್ಷಗಳ ಕಾಲ ಸಂಪರ್ಕ ಮಾಡದೇ ಪುಣೆಯಲ್ಲಿಯೇ ಉಳಿದಿದ್ದ. ಅಂದಹಾಗೆ ಪುಣೆಯಲ್ಲಿಯೇ ಮದುವೆ ಮಾಡಿಕೊಂಡು ಹಾಯಾಗಿ ಜೀವನ ನಡೆಸುತ್ತಿದ್ದ. ಮೃತಪಟ್ಟಿದ್ದ ಹೆಂಡತಿಯ ಸಹೋದರನ ಐಡಿ ಕಾರ್ಡ್ ಬಳಸಿ ಭೋಗಸ್ ಐಡಿ ಕಾರ್ಡ್ ಅನ್ನ ಮಾಡಿಕೊಂಡು ಹೆಸರು ಬದಲಿಸಿಕೊಂಡಿದ್ದ. ಪುಣೆ ಪೊಲೀಸರಿಗೂ ಸಣ್ಣ ಸುಳಿವು ಸಿಗದಂತೆ ಪೊಲೀಸ್ ಇನ್ಫಾರ್ಮರ್ ಆಗಿ ಕೆಲಸ ಮಾಡಿಕೊಂಡಿದ್ದ. ಆದರೂ ಶಿಕ್ಷಾಬಂಧಿ ಅಂಬರೀಶ್ ಬಂಧನಕ್ಕೆ ಬಲೆ ಬೀಸಿದ್ದ ಕಲಬುರಗಿಯ ಸಬ್ ಅರ್ಬನ್ ಠಾಣೆ ಪೊಲೀಸರ ತಂಡ ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಮಾಹಿತಿ ಕಲೆಹಾಕಿ ಕೊನೆಗೂ ತಲೆಮರೆಸಿಕೊಂಡಿದ್ದ ಶಿಕ್ಷಾಬಂಧಿ ಅಂಬರೀಶ್‌ನನ್ನ ಪೊಲೀಸರು ಲಾಕ್ ಮಾಡಿ ಮತ್ತೆ ಜೈಲಿಗಟ್ಟಿದ್ದಾರೆ.

ಇನ್ನು ಅಪರಾಧಿಗಳು ಚಾಪೆ ಕೆಳಗೆ ನುಸುಳಿದ್ರೆ, ಪೊಲೀಸರು ರಂಗೋಲಿ ಕೆಳಗೆ ನುಸುಳುತ್ತಾರೆ ಅನ್ನೋ ಮಾತಿನಂತೆ. ಶಿಕ್ಷಾಬಂಧಿ ಅಂಬರೀಶ್‌ನನ್ನ 11 ವರ್ಷದ ಬಳಿಕ ಕಲಬುರಗಿ ಪೊಲೀಸರು ಬಂಧಿಸಿದ್ದಾರೆ. ಯಶಸ್ವಿ ಕಾರ್ಯಾಚರಣೆ ಮಾಡಿರುವ ಸಬ್ ಅರ್ಬನ್ ಠಾಣೆ ಅಧಿಕಾರಿ, ಸಿಬ್ಬಂದಿಗೆ ಪೊಲೀಸ್ ಕಮಿಷನರ್ ಡಾ. ಶರಣಪ್ಪ ಪ್ರಶಂಸೆ ಪತ್ರ ನೀಡಿ ಪ್ರೋತ್ಸಾಹಿಸಿದ್ದಾರೆ. ☯

# ಚುನಾವಣೆಗಳಲ್ಲಿ ವರ್ಕೌಟ್ ಆಗದ ಕೈ ತಂತ್ರ!



13 ☜

ಪರಿಸ್ಥಿತಿ ನಿರ್ಮಾಣವಾಗುವುದು ಖಚಿತ. ಆದ್ದರಿಂದ ಪಕ್ಷವನ್ನು ಸಂಘಟಿಸುವ ಕೆಲಸಕ್ಕೆ ಮುಂದಾಗುವ ತೀರ್ಮಾನಕ್ಕೆ ಬಂದಿದೆ. ಈಗಾಗಲೇ ನಾಯಕರಿಗೂ ಖಡಕ್ ಸಂದೇಶವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರವಾನಿಸಿದ್ದಾರೆ.


ಸ್ಥಳೀಯ ಸಂಸ್ಥೆ ಚುನಾವಣೆಯಿಂದ ವಿಧಾಸಭಾ ಚುನಾವಣೆವರೆಗೆ ಎಲ್ಲ ಚುನಾವಣೆಯಲ್ಲಿ ಗೆದ್ದು, ಗೆಲ್ಲಿಸಿಕೊಂಡು ಬರುವ ತಾಕತ್ ತೋರಿಸುವಂತೆ ಹೇಳಿದ್ದಾರೆ. ತಳಮಟ್ಟದಿಂದಲೇ ದುರ್ಬಲಗೊಂಡಿರುವ ಪಕ್ಷವನ್ನು ಮೇಲೆತ್ತುವುದು ಅಷ್ಟು ಸುಲಭವಾಗಿ ಉಳಿದಿಲ್ಲ. ಮೇಲ್ಮಟ್ಟದ ನಾಯಕರ ನಡೆ, ನುಡಿ, ಅವರು ನೀಡುವ ಹೇಳಿಕೆಗಳು ತಳಮಟ್ಟದವರೆಗೆ ಪರಿಣಾಮ ಬೀರುತ್ತಿದೆ. ಮತದಾರರು ಜಾಗೃತರಾಗಿದ್ದಾರೆ. ಎಲ್ಲವನ್ನು ಗಮನಿಸುತ್ತಿದ್ದಾರೆ. ಹೀಗಾಗಿ ತಳಮಟ್ಟದಲ್ಲಿ ಕಾರ್ಯಕರ್ತರ ಪಡೆಯನ್ನು ಕಟ್ಟುವುದು ಕಾಂಗ್ರೆಸ್‌ಗೆ ಸವಾಲ್ ಆಗಿದೆ.

ದಕ್ಷಿಣ ಭಾರತದ ಪೈಕಿ ತೆಲಂಗಾಣ ಮತ್ತು ಕರ್ನಾಟಕದಲ್ಲಿ ಕಾಂಗ್ರೆಸ್ ಗಟ್ಟಿಯಾಗಿದೆ. ಹಾಗೆಂದು ಬುಡವನ್ನು ಅಲುಗಾಡಿಸುವ ಮಟ್ಟಕ್ಕೆ ಗಟ್ಟಿಯಾಗಿದೆ ಎನ್ನುವುದು ಕಷ್ಟವೇ.. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಘಟಾನುಘಟಿ ನಾಯಕರಿದ್ದಾರೆ. ಅವರ ಪೈಕಿ ಕೆಲವರಿಗೆ ಅವರು ಮಾತ್ರವಲ್ಲದೆ ಬೇರೆಯವರನ್ನು ಗೆಲ್ಲಿಸಿಕೊಂಡು ಬರುವ ಸಾಮರ್ಥ್ಯವಿದೆ. ಆದರೆ ಇಲ್ಲಿಯೂ ಅಧಿಕಾರಕ್ಕಾಗಿ ನಡೆಯುತ್ತಿರುವ ಪ್ರತಿಷ್ಠೆಯ ಹೋರಾಟ ಅರ್ಥಾತ್ ಬಣಜಗಳ ಪಕ್ಷವನ್ನು ಯಾವ ಮಟ್ಟಕ್ಕೆ ಕೊಂಡೊಯ್ಯುತ್ತದೆಯೋ ಗೊತ್ತಿಲ್ಲ.


ಒಟ್ಟಾರೆಯಾಗಿ ಹೇಳಬೇಕೆಂದರೆ ತಳಮಟ್ಟದಿಂದ ಪಕ್ಷವನ್ನು ಸಂಘಟಿಸಿ, ಕಾರ್ಯಕರ್ತರ ಪಡೆಯನ್ನು ಗಟ್ಟಿಗೊಳಿಸದೆ ಹೋದರೆ ಮುಂದಿನ ದಿನಗಳಲ್ಲಿ ಪಕ್ಷಕ್ಕೆ ಉಳಿಗಾಲವಿಲ್ಲ ಎನ್ನುವುದು ಕೈ ನಾಯಕರಿಗೆ ಗೊತ್ತಾಗಿದೆ. ಹೀಗಾಗಿಯೇ ಪಕ್ಷ ಸಂಘಟನೆಯತ್ತ ತೊಡಗಿಸಿಕೊಳ್ಳಿ ಎಂಬ ಸೂಚನೆ ಹೈಕಮಾಂಡಿನಿಂದ ಎಲ್ಲ ಕಡೆಗೂ ರವಾನಿಸಲಾಗಿದೆ. ಆದರೆ ಕಾಂಗ್ರೆಸ್ ನಾಯಕರು ಈಗಾಗಲೇ ಮಾಡಿಕೊಂಡ ಎಡವಟ್ಟು ಪಕ್ಷವನ್ನು ಪಾತಾಳಕ್ಕೆ ತಳ್ಳಿದೆ. ಹೀಗಾಗಿ ಅದನ್ನು ಮೇಲೆತ್ತುವುದು ಅಂದುಕೊಂಡಷ್ಟು ಸುಲಭವೇನಲ್ಲ. ಆದರೆ ಅದನ್ನು ಹೇಗೆ ಮಾಡುತ್ತಾರೆ ಎನ್ನುವುದನ್ನು ಕಾದು ನೋಡೋಣ. ☯

# ಮನದ ಕಡಲು ಅಡ್ವೆಂಚರಸ್ ಲವ್‌ಸ್ಟೋರಿ










ಯೋಗರಾಜ ಭಟ್ಟರ ಚಿತ್ರಗಳು ಎಂದರೆ ಅಲ್ಲೊಂದಷ್ಟು ವಿಶೇಷತೆಗಳನ್ನು ಖಂಡಿತ ನಿರೀಕ್ಷೆ ಮಾಡಬಹುದು. ಮಳೆ, ಕಡಲತೀರ, ಪ್ರೀತಿ ಪ್ರೇಮದ ಬಗ್ಗೆ ಒಂದಷ್ಟು ಸಿದ್ದಾಂತಗಳು ಇದನ್ನೆಲ್ಲ ತನ್ನದೇ ಆದ ಸ್ಟೈಲ್‌ನಲ್ಲಿ ಭಟ್ಟರು ಹೇಳಿಕೊಂಡು ಹೋಗುತ್ತಾರೆ. ಮುಂಗಾರು ಮಳೆ, ಗಾಳಿಪಟ, ಲೈಫು ಇಷ್ಟೇನೆ ಹೀಗೆ ಇವರ ನಿರ್ದೇಶನದ ಬಹುತೇಕ ಪ್ರೇಮ ಕಥೆಗಳಲ್ಲಿ ಲವ್‌ಸ್ಟೋರಿ ಜತೆಗೆ ಜೀವನದ ಹಲವಾರು ಮಜಲುಗಳನ್ನು ತೆರೆದಿಟ್ಟಿದ್ದಾರೆ. ಅದೇರೀತಿ ಇದೀಗ ಅವರು ಮನದ ಕಡಲು ಎಂಬ ಚಿತ್ರದ ಮೂಲಕ ಪ್ರೀತಿಯ ಆಳವನ್ನು ಹೇಳುವ ಪ್ರಯತ್ನ ಮಾಡಿದ್ದಾರೆ, ಕಡಲು ಸುಂದರವೂ ಹೌದು, ರೌದ್ರವೂ ಹೌದು. ಇದೊಂದು ತ್ರಿಕೋನ ಪ್ರೇಮಕಥೆಯಾಗಿದ್ದು, ವೈದ್ಯನೊಬ್ಬನ ಜೀವನದ ಪ್ರೇಮ್ ಕಹಾನಿಯನ್ನು ಈ ಚಿತ್ರದ ಮೂಲಕ ನಿರ್ದೇಶಕ ಭಟ್ರು ಬಿಚ್ಚಿಡಲಿದ್ದಾರೆ. ಯಾವುದೇ ಸ್ಟಾರ್‌ಗಳಿಲ್ಲದೆ, ಯುವ ಕಲಾವಿದರನ್ನೇ ಇಟ್ಟುಕೊಂಡು ಅಡ್ವೆಂಚರಸ್ ಲವ್ ಸ್ಟೋರಿಯನ್ನು ಹೇಳಿದ್ದಾರೆ, ಎರಡು ದಶಕಗಳ ಹಿಂದೆ ನಿರ್ಮಾಪಕ ಈ.ಕೃಷ್ಣಪ್ಪ ಅವರ ಜತೆ ಸೇರಿ ಮುಂಗಾರುಮಳೆ ಚಿತ್ರವನ್ನು ಪ್ರೇಕ್ಷಕರಿಗೆ ನೀಡಿದ್ದ ಭಟ್ಟರು, ಎರಡು ದಶಕಗಳ ನಂತರ ಮತ್ತದೇ ನಿರ್ಮಾಪಕರ ಜತೆ ಕೈ ಜೋಡಿಸಿದ್ದಾರೆ, ಇವರಿಬ್ಬರ ಕಾಂಬಿನೇಶನ್‌ನ ಮನದ ಕಡಲು ಚಿತ್ರ ಇದೇ ತಿಂಗಳ ಅಂತ್ಯದಲ್ಲಿ ಅಂದರೆ ಮಾರ್ಚ್ 28ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಕಾಣಲಿದೆ, ಈ ಚಿತ್ರದಲ್ಲಿಸುಮುಖಿ ಎಂಬ ಯುವಪ್ರತಿಭೆ ನಾಯಕನಾಗಿ ನಟಿಸಿದ್ದಾರೆ, ಈ ಹಿಂದೆ ಫಿಸಿಕ್ಸ್ ಟೀಚರ್ ಎಂಬ ಚಿತ್ರವನ್ನು ನಿರ್ದೇಶಿಸಿ, ನಾಯಕನಾಗಿ ನಟಿಸಿದ್ದರು, ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದು, ಅಂಜಲಿ ಮತ್ತು ರಾಶಿಕಾ ಆ ಪಾತ್ರಗಳನ್ನು ನಿರ್ವಹಿಸಿದ್ದಾರೆ, ಯೋಗರಾಜ ಭಟ್ಟರ ನಿರ್ದೇಶನದ ಹದಿನಾರನೇ ಚಿತ್ರ ಅಲ್ಲದೆ ಮುಂಗಾರು ಮಳೆ ಚಿತ್ರದ ನಂತರ ಅದೇ ಹಿಟ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಎರಡನೇ ಚಿತ್ರ ಇದಾಗಿದೆ.

ಚಿತ್ರದಲ್ಲಿ ತನಗೆ ಸಿಕ್ಕ ಅವಕಾಶ ಹಾಗೂ ಪಾತ್ರದ ಕುರಿತಂತೆ ನಾಯಕ ಸುಮುಖ ಮಾತನಾಡುತ್ತ, ನನ್ನ ಎರಡನೇ ಚಿತ್ರದಲ್ಲೇ ಇಷ್ಟು ದೊಡ್ಡ ಡೈರೆಕ್ಟರ್, ಬಿಗ್ ಬ್ಯಾನರ್ ಜತೆ ಕೆಲಸ ಮಾಡೋ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ, ಮನದ ಕಡಲು ಚಿತ್ರದ ಬಗ್ಗೆ ಹೇಳಬೇಕೆಂದರೆ ಇದೊಂದು ಅಡ್ವೆಂಚರಸ್ ಲವ್‌ಸ್ಟೋರಿ, ಎಂಬಿಬಿಎಸ್ ಡ್ರಾಪೌಟ್ ಆದ ಹುಡುಗನೊಬ್ಬ, ತಾನು ಪ್ರೀತಿಸಿದ ಹುಡುಗಿಯನ್ನು ಹುಡುಕಿಕೊಂಡು ಹೋಗ್ತಾನೆ. ಕಾಡು ಮೇಡಲ್ಲಿ ನಡೆಯೋ ಈತನ ಅಲೆದಾಟದ ದಾರಿಯಲ್ಲಿ ಅನೇಕ ವಿಶೇಷ ವ್ಯಕ್ತಿಗಳ ಪರಿಚಯವಾಗುತ್ತದೆ, ಅಲ್ಲದೆ ಮತ್ತೊಬ್ಬ ಹುಡುಗಿಯೂ ಸಿಗುತ್ತಾಳೆ, ದಾರಿಯಲ್ಲಿ ಹೋಗ್ತಾ ಹೋಗ್ತಾ ಆತನಿಗೆ ನಿಜವಾದ ಜೀವನ ಎಂದರೆ ಏನು ಅನ್ನೋದರ ಅರಿವಾಗುತ್ತದೆ, ಎಲ್ಲಾ ಏಜ್ ಗ್ರೂಪ್‌ನವರಿಗೂ ಇಷ್ಟವಾಗುವಂಥ ಕಥೆಯನ್ನು ನಿರ್ದೇಶಕರು ಮಾಡಿದ್ದಾರೆ, ಚಿತ್ರದ ಶೂಟಿಂಗ್ ಕೂಡ ಹಲವಾರು ವಿಶೇಷ ಎನಿಸುವಂಥ ಲೊಕೇಶನ್‌ಗಳಲ್ಲಿ ನಡೆದಿದೆ. ಮಹಾರಾಷ್ಟ್ರದ ರಾಯಘಡ ಸಮೀಪದಲ್ಲಿ, ಸಮುದ್ರದ ಮಧ್ಯೆ ಇರುವ ಮುರುದ್ ಜಂಜಿರಾ ಫೋರ್ಟ್ ಎಂಬ ವಿಶೇಷ ದ್ವೀಪದಲ್ಲಿ ನಮ್ಮ ಚಿತ್ರದ ಬಹುತೇಕ ಭಾಗದ ಶೂಟಿಂಗ್ ಮಾಡಿದ್ದೇವೆ, ನನ್ನ ಪಾತ್ರಕ್ಕೆ ಐದು ಶೇಡ್‌ಗಳಿವೆ. ಅಲ್ಲದೆ ನನ್ನ ಪಾತ್ರವನ್ನೇ ಸೆಟ್ರಿಕ್ ಆಗಿಟ್ಟುಕೊಂಡು ಕಥೆಯನ್ನು ನಿರೂಪಿಸಲಾಗಿದೆ, ಮತ್ತೊಂದು ವಿಶೇಷ ಎಂದರೆ ಇಲ್ಲಿ ನಮ್ಮ ನಮ್ಮ ಪಾತ್ರಗಳಿಗೆ ನಮ್ಮ ಹೆಸರನ್ನೇ ಇಟ್ಟಿದ್ದಾರೆ, ಚಿತ್ರದಲ್ಲೂ ನನ್ನ ಪಾತ್ರದ ಹೆಸರು ಸುಮುಖ. ಅಲ್ಲದೆ ನಾಯಕಿ ಅಂಜಲಿ ಅನೀಶ್ ಅವರ ಪಾತ್ರದ ಹೆಸರೂ ಅಂಜಲಿ ಹಾಗೂ ರಾಶಿಕಾ ಶೆಟ್ಟಿ ಅವರ ಪಾತ್ರದ ಹೆಸರು ರಾಶಿಕಾ ಆಗಿದೆ ಎಂದು ವಿವರಿಸಿದರು.

ಈಗಾಗಲೇ ಈ ಚಿತ್ರದ ಒಂದೆರಡು ಹಾಡುಗಳು ಬಿಡುಗಡೆಯಾಗಿ ವೈರಲ್ ಆಗಿದ್ದು, ಆ ಮೂಲಕ ಚಿತ್ರದ ಬಗ್ಗೆ ಹೆಚ್ಚಿನ ಕುತೂಹಲ ಹುಟ್ಟಿಸಿವೆ, ಅದರಲ್ಲೂ ನಿರ್ದೇಶಕ ಯೋಗರಾಜ್ ಭಟ್ ಅವರೇ ಬರೆದಿರುವ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ, ಸಂಜಿತ್ ಹಗ್ಡೆ ಹಾಗೂ ಪ್ರಾರ್ಥನಾ ಅವರುಗಳು ದನಿಯಾಗಿರುವ ತುರ್ರಾ ತುರ್ರಾ ಎಂಬ ಹಾಡಂತೂ ಎಲ್ಲರ ಬಾಯಲ್ಲೂ ಗುನುಗುತ್ತಿದೆ, ಸುಮುಖ, ಅಂಜಲಿ, ರಂಗಾಯಣ ರಘು, ಹಿರಿಯ ನಟ ದತ್ತಣ್ಣ ಅವರ ಅಭಿನಯದಲ್ಲಿ ಮೂಡಿಬಂದಿರುವ ಈ ಹಾಡು ಮನದ ಕಡಲು ಚಿತ್ರದ ಹೈಲೈಟ್‌ಗಳಲ್ಲೊಂದಾಗಿದೆ,

ಮಾರ್ಚ್ 28ರಂದು 'ಮನದ ಕಡಲು' ಸಿನಿಮಾ ರಾಜ್ಯಾದ್ಯಂತ ಅದ್ದುರಿಯಾಗಿ ಬಿಡುಗಡೆಯಾಗಲಿದೆ, ಈ ಚಿತ್ರದಲ್ಲಿ ನೇತ್ರಾ, ರಂಗಾಯಣ ರಘು, ಶಿವಧ್ವಜ್, ದತ್ತಣ್ಣ, ಕೂಡ ಪ್ರಮುಖ ತಾರಾಗಣದಲ್ಲಿದ್ದಾರೆ. ಮನದ ಕಡಲು ಚಿತ್ರದ ಸಹ ನಿರ್ಮಾಪಕರಾಗಿ ಜಿ.ಗಂಗಾಧರ್ ಹಾಗೂ ಕಾರ್ಯಕಾರಿ ನಿರ್ಮಾಪಕರಾಗಿ ಪ್ರತಾಪ್ ಅವರುಗಳು ಚಿತ್ರತಂಡದ ಜತೆ ಕೈಜೋಡಿಸಿದ್ದಾರೆ, ವಿ.ಹರಿಕೃಷ್ಣ ಅವರ ಸಂಗೀತ ಸಂಯೋಜನೆ, ಸಂತೋಷ್ ರೈ ಪಾತಾಜೆ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ☯


# ಆಗ ರಜನಿಕಾಂತ್ ಭೇಟಿ ಮಾಡಲು 15 ದಿನ ಕಾದಿದ್ದೆ - ದುನಿಯಾ ವಿಜಯ್



ಕನ್ನಡ ಚಿತ್ರರಂಗದಲ್ಲಿ ಒಬ್ಬ ನಟ, ನಿರ್ದೇಶಕನಾಗಿ ತನ್ನದೇ ಆದ ಛಾಪು ಮೂಡಿಸಿರುವ ಕಲಾವಿದ ದುನಿಯಾ ವಿಜಯ್ ಅವರು ಇತ್ತೀಚೆಗಷ್ಟೇ ತೆಲುಗು ಚಿತ್ರದಲ್ಲಿ ನಟಿಸೋ ಮೂಲಕ ಟಾಲಿವುಡ್ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದರು, ಆಬಳಿಕ ಅವರೀಗ ತಮಿಳು ಚಿತ್ರರಂಗದಲ್ಲೂ ಸಹ ಸೌಂಡ್ ಮಾಡಲು ರೆಡಿಯಾಗಿದ್ದಾರೆ. ಸುಂದರ್ ಅವರ ನಿರ್ದೇಶನದ ಮೂಕುತಿ ಅಮ್ಮನ್ 2 ಎಂಬ ತಮಿಳು ಚಿತ್ರದಲ್ಲಿ ನಟಿಸೋ ಮೂಲಕ ದುನಿಯಾ ವಿಜಯ್ ಅವರು ತಮ್ಮ ಕಾಲಿವುಡ್‌ಗೆ ಕಾಲಿಟ್ಟಿದ್ದಾರೆ.

ಈ ಹಿಂದೆ ಬಾಲಯ್ಯ ನಟನೆಯ ಚಿತ್ರದಲ್ಲಿ ಖಳನಾಯಕನಾಗಿ ಘರ್ಜಿಸಿದ್ದ ದುನಿಯಾ ವಿಜಯ್ ಇದೀಗ ಮೊದಲ ಬಾರಿಗೆ ತಮಿಳು ಚಿತ್ರದಲ್ಲಿ ನಟಿಸುತ್ತಿದ್ದಾರೆ. ನಯನತಾರಾ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವ 'ಮೂಕುತಿ ಅಮ್ಮನ್ 2' ಚಿತ್ರದಲ್ಲಿ ವಿಜಯಕುಮಾರ್ (ದುನಿಯಾ ವಿಜಯ್) ಅವರು ಖಳನಾಯಕನಾಗಿ ನೆಗೆಟಿವ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಈಗಾಗಲೇ ಸುಂದರ್ ಅವರು ಸಾಕಷ್ಟು ಯಶಸ್ವಿ ಚಿತ್ರಗಳನ್ನು ನೀಡಿದ್ದಾರೆ. ನಾನು ರಜನಿಕಾಂತ್ ಅವರ ಅಭಿಮಾನಿ. ರಜನಿಕಾಂತ್ ಅವರಿಗೆ ಆ್ಯಕ್ಷನ್ ಕಟ್ ಹೇಳಿರುವ ನಿರ್ದೇಶಕರೇ, ನನಗೂ ನಿರ್ದೇಶನ ಮಾಡುತ್ತಿರುವುದು ಹೆಮ್ಮೆಯ ವಿಷಯ. ಆ ನಿರ್ದೇಶಕರ ಜತೆ ಕೆಲಸ ಮಾಡುತ್ತಿರುವುದು ನಿಜವಾದ ಅಭಿಮಾನ ಎಂದೆನಿಸುತ್ತದೆ ಎಂದು ದುನಿಯಾ ವಿಜಯ ಹೇಳಿದ್ದಾರೆ.



ಇದು ಪ್ಯಾನ್ ಇಂಡಿಯಾ ಚಿತ್ರವಾಗಿದ್ದು, ಪ್ಯಾನ್ ಇಂಡಿಯಾ ಹೀರೋಗಳ ಮಧ್ಯೆ ವಿಜಯ್ ಪ್ಯಾನ್ ಇಂಡಿಯಾ ವಿಲನ್ ಆಗಿ ಮಿಂಚುತ್ತಿದ್ದಾರೆ.

ಬಹಳ ಹಿಂದೆ ಹಿಂದೆ ತಮಿಳು ಚಿತ್ರದಲ್ಲಿ ಕೆಲಸ ಮಾಡಬೇಕೆಂಬ ಕನಸು ಹೊತ್ತು ದುನಿಯಾ ವಿಜಯ್ ಅಲ್ಲಿಗೆ ಹೋಗಿದ್ದುಂಟು. ನಾನಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಾ ಅವಕಾಶಕ್ಕಾಗಿ ಅಲೆದಾಡುತ್ತಿದ್ದ ಸಂದರ್ಭಗಳು ಇನ್ನೂ ನೆನಪಿವೆ. ಈಗ ಕಾಲಿವುಡ್ ನಿರ್ದೇಶಕರು ವೇದಿಕೆಯ ಮೇಲೆ ನನ್ನನ್ನು ನಿರ್ದೇಶಕ, ನಟ, ಆ್ಯಕ್ಷನ್ ಹೀರೋ ಎಂದು ಕರೆದಾಗ ಭಾವುಕನಾದೆ. ಆಗ ರಜನಿಕಾಂತ್ ಅವರನ್ನು ಭೇಟಿಯಾಗಬೇಕೆಂದು ಸುಮಾರು 15 ದಿನಗಳವರೆಗೆ ಕಾದಿದ್ದೆ. ಈಗ ಅವರಿಂದಲೂ ಮೆಚ್ಚುಗೆಯ ಮಾತುಗಳನ್ನು ಕೇಳಿದಾಗ ಬಹಳ ಸಂತಸವಾಯಿತು' ಎಂದು ವಿಜಯ್‌ಕುಮಾರ್ ಹೇಳಿದ್ದಾರೆ.

ಸದ್ಯ ಜಡೇಶ್ ಕೆ.ಹಂಪಿ ಅವರ ನಿರ್ದೇಶನದ 'ಲ್ಯಾಂಡ್ ಲಾರ್ಡ್' ಚಿತ್ರದಲ್ಲಿ ದುನಿಯಾ ವಿಜಯ ಅವರು ನಟಿಸುತ್ತಿದ್ದು, ಅದರ ಇನ್ನೊಂದು ಹಂತದ ಚಿತ್ರೀಕರಣ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದಿದ್ದಾರೆ, ಈ ಚಿತ್ರದಲ್ಲಿ ದುನಿಯಾ ವಿಜಯ್ ಅವರ ಪುತ್ರಿ ರಿತನ್ಯ, ಅವರ ಮಗಳ ಪಾತ್ರದಲ್ಲೇ ಕಾಣಿಸಿಕೊಂಡಿದ್ದಾರೆ. ಇದಲ್ಲದೆ ವಿಜಯಕುಮಾರ್ ಅವರು ನಿರ್ದೇಶಿಸುತ್ತಿರುವ ಸಿಟಿ ಲೈಟ್ಸ್ ಚಿತ್ರದ ಇನ್ನೊಂದು ಹಂತದ ಶೂಟಿಂಗ್ ಸದ್ಯದಲ್ಲೇ ಶುರುವಾಗಲಿದೆ. ವಿನಯ್ ರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ಮೂಲಕ ವಿಜಯ್‌ಕುಮಾರ್ ಅವರು ತಮ್ಮ ಮತ್ತೊಬ್ಬ ಮಗಳು ಮೊನಿಷಾರನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ,

ಬರೋಬ್ಬರಿ 100 ಕೋಟಿ ರೂಪಾಯಿ ಬಜೆಟ್‌ನಲ್ಲಿ ಮೂಕುತಿ ಅಮ್ಮನ್ 2 ಚಿತ್ರ ನಿರ್ಮಾಣವಾಗುತ್ತಿದೆ, ಇದೊಂದು ಪ್ಯಾನ್ ಇಂಡಿಯಾ ಚಿತ್ರವಾಗಿದ್ದು, ತಮಿಳಿನಲ್ಲಿ ಮಾತ್ರ ಮೂಕುತಿ ಅಮ್ಮನ್ 2 ಎಂದಿದ್ದು, ಉಳಿದ ಭಾಷೆಗಳಲ್ಲಿ ಮಹಾಶಕ್ತಿ ಎಂಬ ಹೆಸರಲ್ಲಿ ನಿರ್ಮಾಣವಾಗಲಿದೆ, ಮೂಕುತಿ ಅಮ್ಮನ್ 2 ಚಿತ್ರದಲ್ಲಿ ನಟಿ ನಯನತಾರಾ, ದುನಿಯಾ ವಿಜಯ್, ಯೋಗಿ ಬಾಬು, ಗರುಡರಾಮ್, ರೆಜಿನಾ ಕಸ್ಸಂದ್ರ, ಸಿಂಗಂಪುಲಿ, ಅಭಿನಯ, ಅಜಯ್ ಘೋಷ್ ಮುಂತಾದವರು ಅಭಿನಯಿಸುತ್ತಿದ್ದಾರೆ. ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 16.3.2025

# ಎಕ್ಕ ಚಿತ್ರದ ಮಾರ್ ಹಾಡು

ಇದೇ ತಿಂಗಳ 17ರಂದು ಎಕ್ಕ ಚಿತ್ರದ ಫಸ್ಟ್ ಸಾಂಗ್ ಬಿಡುಗಡೆಯಾಗಲಿದೆ, ಎಕ್ಕ ಮಾರ್ ಎಂದು ಆರಂಭವಾಗುವ ಪಕ್ಕಾ ಮಾಸ್ ಸಾಂಗ್ ಇದಾಗಿದ್ದು, ಮಾರ್ಚ್ 17ರಂದು ರಿಲೀಸಾಗಲಿರುವ ಈ ಹಾಡಿಗಾಗಿ ಯುವ ರಾಜ್‌ಕುಮಾರ್ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಈ ಹಾಡಿನ ಮೂಲಕ ಎಕ್ಕ ಚಿತ್ರದ ಪ್ರಚಾರವೂ ಸಹ ಪ್ರಾರಂಭ ವಾಗಲಿದೆ,

ಇದೇ ಮೊದಲಬಾರಿಗೆ ಕನ್ನಡ ಚಿತ್ರರಂಗದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆಗಳಾದ ಪಿ.ಆರ್.ಕೆ. ಪ್ರೊಡಕ್ಷನ್ಸ್, ಕೆ.ಆರ್.ಜಿ. ಸ್ಟುಡಿಯೋಸ್ ಹಾಗೂ ಜಯಣ್ಣ ಫಿಲಂಸ್ ಒಟ್ಟಾಗಿ ನಿರ್ಮಾಣ ಮಾಡುತ್ತಿರುವ ಚಿತ್ರ ಎಕ್ಕ. ತುಂಬಾ ವಿಶೇಷವಾಗಿ ನಿರ್ಮಾಣವಾಗುತ್ತಿರುವ ಈ ಚಿತ್ರ ಬಿಗ್ ಬಜೆಟ್‌ನಲ್ಲಿ ತಯಾರಾಗುತ್ತಿದೆ, ಕನ್ನಡ ಚಿತ್ರೋದ್ಯಮದಲ್ಲೇ ಸಂಚಲನ ಸೃಷ್ಟಿಸಿರೋ ಈ ಚಿತ್ರದ ಮೂಲಕ ನಟ ಯುವ ರಾಜಕುಮಾರ್ ಅವರು ಎರಡನೇ ಬಾರಿಗೆ ಆಕ್ಷನ್ ಹೀರೋ ಆಗಿ ತೆರೆಯ ಮೇಲೆ ಬರುತ್ತಿದ್ದಾರೆ. ಕಳೆದ ವರ್ಷದ ರಾಜ್ಯೋತ್ಸವ ಸಂದರ್ಭದಲ್ಲಿ 'ಎಕ್ಕ' ಸಿನಿಮಾದ ಟೈಟಲ್ ಅನೌನ್ಸ್ ಮಾಡಲಾಗಿತ್ತು. ಅಲ್ಲದೆ ಕಳೆದ ನವೆಂಬರ್ ತಿಂಗಳ ಕೊನೆಯಲ್ಲಿ ಎಕ್ಕ ಚಿತ್ರದ ಮುಹೂರ್ತ ಸಮಾರಂಭವನ್ನು ಚಿತ್ರತಂಡ ಅದ್ದೂರಿಯಾಗಿ ನಡೆಸಿತ್ತು. ಈ ಹಿಂದೆ ರತ್ನನ್ ಪ್ರಪಂಚ, ಉತ್ತರಕಾಂಡ ಎಂಬ ಚಿತ್ರಗಳನ್ನು ನಿರ್ದೇಶಿಸಿದ್ದ ಯುವ ಪ್ರತಿಭೆ ರೋಹಿತ್ ಪದಕಿ ಅವರು ಈ ಮಾಸ್ ಎಂಟರ್‌ಟೈನರ್ ಎಕ್ಕ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಇನ್ನು ಈ ಚಿತ್ರದಲ್ಲಿ ಸಲಗ ಸುಂದರಿ ಸಂಜನಾ ಆನಂದ್ ಹಾಗೂ ಸಂಪದಾ ಅವರುಗಳು ನಾಯಕಿಯರಾಗಿ ನಟಿಸುತ್ತಿದ್ದಾರೆ. ಈಗಾಗಲೇ ಬೆಂಗಳೂರು, ಮೈಸೂರಿನಲ್ಲಿ ಈ ಚಿತ್ರಕ್ಕೆ ಭರದಿಂದ ಚಿತ್ರೀಕರಣ ನಡೆಸಲಾಗುತ್ತಿದೆ. ಜೂನ್ 6ರಂದು ಎಕ್ಕ ಚಿತ್ರವನ್ನು ದೇಶಾದ್ಯಂತ ರಿಲೀಸ್ ಮಾಡುವುದಾಗಿ ಚಿತ್ರತಂಡ ಘೋಷಿಸಿದೆ.



ಹಾಗಾಗಿ ಅದಕ್ಕೆ ತಕ್ಕಂತೆ ಚಿತ್ರದ ಶೂಟಿಂಗ್, ಪೋಸ್ಟ್ ಪ್ರೊಡಕ್ಷನ್, ಪ್ರಮೋಷನ್ ಕೆಲಸಗಳನ್ನು ತುಂಬಾ ನೀಟಾಗಿಯೇ ಮೂರೂ ಬ್ಯಾನರ್‌ಗ ಸೇರಿ ಯೋಜನೆ ಹಾಕಿಕೊಳ್ಳಲಾಗುತ್ತಿದೆ. ಅತುಲ್ ಕುಲಕರ್ಣಿ, ರಾಹುಲ್‌ದೇವ್ ಶೆಟ್ಟಿ, ಶೃತಿ ಕೃಷ್ಣ ಸೇರಿದಂತೆ ಅನೇಕ ಯುವ ಹಾಗೂ ಘಟಾನುಘಟಿ ಕಲಾವಿದರುಗಳು ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ. ನಟ ಡೆಡ್ಲಿ ಆದಿತ್ಯಾ ಕೂಡ 'ಎಕ್ಕ' ಚಿತ್ರದ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈಗ ಇದೇ ತಿಂಗಳ 17ರಂದು ಎಕ್ಕ ಚಿತ್ರದ ಫಸ್ಟ್ ಸಾಂಗ್ ಬಿಡುಗಡೆಯಾಗಲಿದೆ, ಎಕ್ಕ ಮಾರ್ ಎಂದು ಆರಂಭವಾಗುವ ಪಕ್ಕಾ ಮಾಸ್ ಸಾಂಗ್ ಇದಾಗಿದ್ದು, ಮಾರ್ಚ್ 17ರಂದು ರಿಲೀಸಾಗಲಿರುವ ಈ ಹಾಡಿಗಾಗಿ ಯುವ ರಾಜ್ ಕುಮಾರ್ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಈ ಹಾಡಿನ ಮೂಲಕ ಎಕ್ಕ ಚಿತ್ರದ ಪ್ರಚಾರವೂ ಸಹ ಪ್ರಾರಂಭವಾಗಲಿದೆ.

ರೋಹಿತ್ ಪದಕಿ ಅವರು ತಮ್ಮ ಸಿನಿಮಾಗಳಲ್ಲಿ ಪ್ರತಿ ಪಾತ್ರವನ್ನು ತುಂಬಾ ಚೆನ್ನಾಗಿ ಡಿಸೈನ್ ಮಾಡುತ್ತಾರೆ. ಈ ಬಾರಿ ಯುವ ರಾಜಕುಮಾರ್ ಅವರು ಎಕ್ಕ ಚಿತ್ರದಲ್ಲಿ ಯಾವ ರೀತಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಯಲು ಇನ್ನೂ ಕಾಯಬೇಕಿದೆ. ಎಕ್ಕ ಚಿತ್ರದ ಮಾರ್ ಮಾರ್ ಸಾಂಗ್ ರಿಲೀಸ್ ಆಗುತ್ತದೆ ಎಂದು ನಾಯಕ ಯುವ ಕೂಡ ಇತ್ತೀಚೆಗೆ ಮಾಹಿತಿ ಹಂಚಿಕೊಂಡಿದ್ದರು. ಇನ್ನು ಈ ಚಿತ್ರಕ್ಕೆ ಚರಣ್‌ರಾಜ್ ಅವರ ಸಂಗೀತ ನಿರ್ದೇಶನವಿದ್ದು, ಆನಂದ್ ಆಡಿಯೋ ಸಂಸ್ಥೆ ಎಕ್ಕ ಚಿತ್ರದ ಆಡಿಯೋ ಹಕ್ಕುಗಳನ್ನು ಖರೀದಿಸಿದೆ. ಸಂತೋಷ್ ಆನಂದ್ರಾಮ್ ಅವರ ನಿರ್ದೇಶನದ 'ಯುವ' ಚಿತ್ರದ ಮೂಲಕ ಅಣ್ಣಾವ್ರ ಮೊಮ್ಮಗ ಯುವ ರಾಜಕುಮಾರ್ ನಾಯಕನಾಗಿ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದರು. ಮೊದಲ ಪ್ರಯತ್ನದಲ್ಲೇ ಡ್ಯಾನ್ಸ್, ಸ್ಟಂಟ್ಸ್ ಮೂಲಕ ಪ್ರೇಕ್ಷಕರಿಗೆ ಮೋಡಿ ಮಾಡಿದ್ದರು. ಹಾಗಾಗಿ ಇದೀಗ ತಮ್ಮ ಎರಡನೇ ಚಿತ್ರದಲ್ಲಿ ಕೂಡ ಮಾಸ್ ಸಬ್ಜೆಕ್ಟನ್ನೇ ಅವರು ಆಯ್ಕೆ ಮಾಡಿಕೊಂಡಿದ್ದಾರೆ. ಈಗಾಗಲೇ ಎಕ್ಕ ಚಿತ್ರದ ಚಿತ್ರೀಕರಣ ಬಹುತೇಕ ಮುಗಿದಿದೆ. 'ಎಕ್ಕ' ಚಿತ್ರದ ಬಳಿಕ ದುನಿಯಾ ಸೂರಿ ನಿರ್ದೇಶನದ ಚಿತ್ರದಲ್ಲಿ ಯುವ ರಾಜಕುಮಾರ್ ಅವರು ನಟಿಸಲಿದ್ದಾರೆ.

# ಸದ್ಯದಲ್ಲೇ ಬಿಂಗೊ ಚಿತ್ರದ ಆಡಿಯೋ



ಈ ಹಿಂದೆ ಶಂಭೋ ಶಿವ ಶಂಕರ ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಶಂಕರ್ ಕೋನಮಾನಹಳ್ಳಿ ಅವರೀಗ ಮತ್ತೊಂದು ಚಿತ್ರವನ್ನು ತೆರೆಗೆ ತರಲು ಸಿದ್ದರಾಗಿದ್ದಾರೆ. ಅದರ ಹೆಸರು ಬೊಂಗೊ. ಶಂಕರ್ ಕೋನಮಾನಹಳ್ಳಿ ಅವರ ನಿರ್ದೇಶನದ. ಈ ಚಿತ್ರದಲ್ಲಿ ಆರ್. ಕೆ. ಚಂದನ್ ಹಾಗೂ ರಾಗಿಣಿ ದ್ವಿವೇದಿ ನಾಯಕ - ನಾಯಕಿಯಾಗಿ ನಟಿಸಿದ್ದಾರೆ. ಈ ಚಿತ್ರದ ಆಡಿಯೋ ಹಕ್ಕುಗಳನ್ನು ಎಟು ಮ್ಯೂಸಿಕ್ ಸಂಸ್ಥೆ ಉತ್ತಮ ಮೊತ್ತಕ್ಕೆ ಖರೀದಿಸಿದೆ. ಹಿತನ್ ಹಾಸನ್ ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಮೂರು ಹಾಡುಗಳು ಈ ಚಿತ್ರದಲ್ಲಿದೆ. ಸದ್ಯದಲ್ಲೇ ಹಾಡುಗಳನ್ನು ಅದ್ದೂರಿಯಾಗಿ ಬಿಡುಗಡೆ ಮಾಡಲು ಚಿತ್ರತಂಡ ಸಿದ್ದತೆ ನಡೆಸಿದೆ. ಈಗಾಗಲೇ ಬಿಂಗೂ ಚಿತ್ರದ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಕ್ತಾಯವಾಗಿದ್ದು, ಚಿತ್ರವೀಗ ತೆರೆಗೆ ಬರುವ ಹಂತ ತಲುಪಿದೆ.

ಆರ್.ಕೆ ಸ್ಟುಡಿಯೋಸ್ ಮತ್ತು ಮಥುರಾ ವೆಂಚರ್ಸ್ ಲಾಂಛನದಲ್ಲಿ ಲಲಿತಾ ಸ್ವಾಮಿ ಮತ್ತು ಆರ್. ಪರಾಂಕುಶ ಅವರುಗಳು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ತುಪ್ಪದ ಬೆಡಗಿ ರಾಗಿಣಿ ದ್ವಿವೇದಿ ಅವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಪಾತ್ರಕ್ಕೆ ಹಲವು ಶೇಡ್ ಗಳಿವೆ.

ಈ ಚಿತ್ರದಲ್ಲಿ ಇದೇ ಮೊದಲ ಬಾರಿಗೆ ಆರ್.ಕೆ. ಚಂದನ್ ಅವರು ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ರಾಜೇಶ್ ನಟರಂಗ, ಪವನ್ (ಮಜಾ ಟಾಕೀಸ್), ಮುರಳಿ ಪೂರ್ವಿಕ್, ಅಪೂರ್ವ, ಶ್ರವಣ್ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ನಟರಾಜ್ ಮುದ್ದಾಲ್ ಅವರ ಛಾಯಾಗ್ರಹಣವಿರುವ ಈ ಚಿತ್ರದಲ್ಲಿ ಮೈನವಿರೇಳಿಸುವ ಸಾಹಸ ಸನ್ನಿವೇಶಗಳಿದ್ದು, ನರಸಿಂಹ ಸಾಹಸ ನಿರ್ದೇಶನ ಮಾಡಿದ್ದಾರೆ. ಕಂಬಿ ರಾಜು ಅವರ ನೃತ್ಯ ನಿರ್ದೇಶನ ಹಾಗೂ ವೆಂಕಿ ಅವರ ಸಂಕಲನ ಬಿಂಗೊ ಚಿತ್ರಕ್ಕಿದೆ. ಸದ್ಯದಲ್ಲೇ ಚಿತ್ರವನ್ನು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆ ಮಾಡಲು ಚಿತ್ರತಂಡ ಸಿದ್ದತೆಗಳನ್ನು ಮಾಡಿಕೊಂಡಿದೆ.

# 'ದಿ ಡೆವಿಲ್' ಚಿತ್ರೀಕರಣದಲ್ಲಿ ದರ್ಶನ್

ಮಿಲನ ಖ್ಯಾತಿಯ ಪ್ರಕಾಶ್ ವೀರ್ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ ಹಾಗೂ ಚಾಲೆಂಜಿಂಗ್ ಸ್ಟಾರ್ ದರ್ಶನ್ ನಾಯಕರಾಗಿ ನಟಿಸುತ್ತಿರುವ ಬಹು ನಿರೀಕ್ಷಿತ ದಿ ಡೆವಿಲ್ ಚಿತ್ರದ ಎರಡನೇ ಹಂತದ ಚಿತ್ರೀಕರಣ ಇತ್ತೀಚೆಗೆ ಬೆಂಗಳೂರಿನಲ್ಲಿ ಆರಂಭವಾಗಿದೆ. ಶ್ರೀ ಜೈ ಮಾತಾ ಕಂಬೈನ್ಸ್ ಲಾಂಛನದಲ್ಲಿ ನಿರ್ದೇಶಕ ಪ್ರಕಾಶ್ ಅವರೇ ಈಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಈಗಾಗಲೇ ದಿ ಡೆವಿಲ್ ಚಿತ್ರದ ಎರಡನೇ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ಬಿರುಸಿನಿಂದ ನಡೆಯುತ್ತಿದೆ. ಮುಂದಿನ ವಾರದಿಂದ ಚಿತ್ರೀಕರಣದಲ್ಲಿ ನಟ ದರ್ಶನ್ ಅವರು ಭಾಗಿಯಾಗಲಿದ್ದಾರೆ. ಸದ್ಯ ದರ್ಶನ್ ಅವರಿಗೆ ಬೆನ್ನು ನೋವಿನ ಸಮಸ್ಯೆ ಇರುವುದರಿಂದ ಈ ಹಂತದಲ್ಲಿ ಬರೀ ಮಾತಿನ ಭಾಗದ ಚಿತ್ರೀಕರಣವನ್ನು ಮಾತ್ರವೇ ನಡೆಸಲಾಗುವುದು. ಸಾಹಸ ಸನ್ನಿವೇಶಗಳ ಚಿತ್ರೀಕರಣವಾಗಲಿ ಅಥವಾ ಬೇರೆ ಯಾವುದೇ ರಿಸ್ಕ್ ಇರುವ ಸನ್ನಿವೇಶಗಳ ಚಿತ್ರೀಕರಣವನ್ನು ಸದ್ಯ ಮಾಡುವುದಿಲ್ಲ ಎಂದು ತಿಳಿಸಿರುವ ನಿರ್ದೇಶಕ ಪ್ರಕಾಶ್ ವೀರ್, ಬೆಂಗಳೂರು, ಮೈಸೂರು, ಹೈದರಾಬಾದ್ ಹಾಗೂ ರಾಜಸ್ಥಾನದಲ್ಲಿ ಎರಡನೇ ಹಂತದ ಚಿತ್ರೀಕರಣವನ್ನು ನಡೆಸುವ ಯೋಜನೆ ಹಾಕಿಕೊಂಡಿದ್ದೇವೆ ಎಂದು ಹೇಳಿದ್ದಾರೆ.



ನಾಯಕ ಚಾಲೆಂಜಿಂಗ್ ಸ್ಟಾರ್ ದರ್ಶನ್, ನಾಯಕಿ ರಚನಾ ರೈ, ತುಳಸಿ, ಅಚ್ಯುತ ಕುಮಾರ್, ಮಹೇಶ್ ಮಂಜ್ರೇಕರ್, ಶ್ರೀನಿವಾಸಪ್ರಭು, ಶೋಭ್ ರಾಜ್ ಮುಂತಾದ ಕಲಾವಿದರು ಎರಡನೇ ಹಂತದ ಚಿತ್ರೀಕರಣದಲ್ಲಿ ಭಾಗವಹಿಸಲಿದ್ದಾರೆ. ಸುಧಾಕರ್.ಎಸ್. ರಾಜ್ ಅವರ ಛಾಯಾಗ್ರಹಣವಿರುವ ದಿ ಡೆವಿಲ್ ಚಿತ್ರಕ್ಕೆ ಬಿ.ಅಜನೀಶ್ ಲೋಕನಾಥ್ ಅವರ ಸಂಗೀತ ನಿರ್ದೇಶನ, ಮೋಹನ್ ಬಿ. ಕೆರೆ ಅವರ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಅವರ ಸಾಹಸ ನಿರ್ದೇಶನವಿದೆ.

# ತೆಲುಗು ಚಿತ್ರದಲ್ಲಿ ರಾಜವರ್ಧನ್

ಬಿಚ್ಚುಗತ್ತಿ ಚಿತ್ರದಲ್ಲಿ ವೀರಯೋಧನಾಗಿ ವೀರಾವೇಶದಿಂದ ಹೋರಾಡಿದ್ದ ಯುವನಟ ರಾಜವರ್ಧನ್ ಇತ್ತೀಚೆಗಷ್ಟೇ ಹಿರಣ್ಯ, ಗಜರಾಮ ಚಿತ್ರಗಳಲ್ಲಿ ಆಕ್ಷನ್ ಹೀರೋ ಆಗಿಯೂ ಮಿಂಚಿದ್ದರು, ಇದೀಗ ಅವರು ತೆಲುಗು ಚಿತ್ರರಂಗದಲ್ಲೂ ಸಹ ತನ್ನ ಹೆಜ್ಜೆ ಗುರುತನ್ನು ಮೂಡಿಸಲಿದ್ದಾರೆ. ಆರಡಿ ಹೈಟು... ಸ್ಮಾರ್ಟು ಲುಕ್ಕು.. ಗತ್ತು ಗೈರತ್ತು.. ಎಲ್ಲಾ ಇದ್ರೂ ಆಯ್ಕೆಯ ವಿಚಾರಕ್ಕೋ ಅಥವಾ ಅವರ ಹಣೆಬರಹವೋ ಗೊತ್ತಿಲ್ಲ, ಸತತ ಪ್ರಯತ್ನಗಳಾದರೂ ಸಹ ರಾಜವರ್ಧನ್‌ಗೆ ಯಾವುದೆ ಚಿತ್ರದಿಂದಲೂ ಉತ್ತಮ ಫಲಿತಾಂಶ ಸಿಕ್ಕಿಲ್ಲ ನಿರೀಕ್ಷೆಯನ್ನು ಮುಟ್ಟುತ್ತಿಲ್ಲ. ಹಾಗಂತ ಸುಮ್ನೆ ಕೂತ್ರೆ ಆಗುತ್ತಾ..? ಚೂರೋ ಪಾರೋ ಗುರುತಿಸುವಿಕೆ ಸಿಕ್ಕಿರೋ ಅಪ್ಪಟ ಕನ್ನಡದ ಈ ಪ್ರತಿಭಾನ್ವಿತ ನಟನಿಗೆ ಈಗ ತೆಲುಗು, ತಮಿಳು ಮಂದಿ ಸೈಲೆಂಟಾಗಿ ಗಾಳ ಹಾಕಿದ್ದಾರೆ.



ಹೌದು ಮಾಸ್, ಕ್ಲಾಸ್, ಹಿಸ್ಟಾರಿಕಲ್ ಹೀಗೆ ಎಲ್ಲಾ ರೀತಿಯ ಜಾನರ್‌ಗಳನ್ನ ಮುಟ್ಟಿದ್ರೂ, ರಾಜವರ್ಧನ್ ಅನ್ನೋ ಈ ಅಜಾನುಬಾಹು ನಟನಿಗೆ, ನಿರೀಕ್ಷಿಸಿದ ಫಲಿತಾಂಶಗಳು ಸಿಕ್ಕಿಲ್ಲ. ಹೀಗಿರೋವಾಗಲೇ ಇವರಿಗೆ ಅಕ್ಕ ಪಕ್ಕದ ಸಿನಿಮಾ ಇಂಡಸ್ಟ್ರಿಯವ್ರು ಕಣ್ಣಾಕ್ಕಿದ್ದಾರೆ. ಚಹರೆ, ಪ್ರತಿಭೆ ಎರಡನ್ನೂ ಹೊತ್ತ ರಾಜವರ್ಧನ್‌ಗೆ ದೊಡ್ಡ ನಿರ್ದೇಶಕರಿಂದ, ದೊಡ್ಡ ನಿರ್ಮಾಣ ಸಂಸ್ಥೆಯಿಂದ ಈಗ ಅವಕಾಶಗಳು ಹುಡುಕಿಕೊಂಡು ಬರುತ್ತಿವೆ. ಮೂಲಗಳ ಪ್ರಕಾರ ರಾಜವರ್ಧನ್ ಅವರು ಇಷ್ಟರಲ್ಲೇ ತೆಲುಗು, ತಮಿಳಿನಲ್ಲಿ ಮೂಡಿ ಬರಲಿರೋ ಒಂದು ದೊಡ್ಡ ಪ್ರಾಜೆಕ್ಟನಲ್ಲಿ ಕಾಣಿಸಿಕೊಳ್ತಿದ್ದಾರಂತೆ. ಅದು ನೆಗೆಟೀವ್ ರೋಲ್ ಅಂತ ಸಹ ಹೇಳಲಾಗ್ತಿದೆ. ಅದಕ್ಕಾಗಿ ರಾಜವರ್ಧನ್ ಅವರು ತನ್ನ ದೇಹವನ್ನ ಹುರಿಗೊಳಿಸಿಕೊಳ್ತಿದ್ದಾರಂತೆ. ಆಲ್ ರೆಡಿ ಚೆನ್ನೈ, ಹೈದ್ರಾಬಾದ್ ಅಂತ ಹಾರ್ತಿರೋ ರಾಜವರ್ಧನ್ ಈಗ ಸ್ಯಾಂಡಲ್‌ವುಡ್‌ಗೆ ಗುಡ್ ಬೈ ಹೇಳಿದ್ರು ಅಚ್ಚರಿ ಏನಿಲ್ಲ ಅಂತಿದ್ದಾರೆ ರಾಜವರ್ಧನ್ ಬಳಗ.

Vol. 40 No. 41 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com